ಸಾಹಿತ್ಯ ದಾಸೋಹ – ೧೯೫



೦೯ ಅಕ್ಟೋಬರ್ ೨೦೨೧ ರ ದಾಸೋಹದಲ್ಲಿ ಪ್ರಸ್ತುತಪಡಿಸಿದ ಕತೆ, ಕವನ, ಲೇಖನ ಮತ್ತು ವರದಿಗಳು



ಸಮನ್ವಯ ಸಮಿತಿ * ಕನ್ನಡವೇ ಸತ್ಯ ನೋಡಿಯೋ ಸಾಹಿತ್ಯ ವೇದಿಕೆ

ಪುಟ ತೆರೆಯುವ ಮುನ್ನ . .

ಸಮನ್ವಯ ಸಮಿತಿ ಮತ್ತು ಕನ್ನಡವೇ ಸತ್ಯ ವೇದಿಕೆಯಿಂದ ಪ್ರತಿ ತಿಂಗಳೂ ತಪ್ಪದೆ ನಡೆಯುತ್ತಿರುವ ಒಂದು ಮಹತ್ವದ ಕಾರ್ಯಕ್ರಮವೆಂದರೆ "ಸಾಹಿತ್ಯ ದಾಸೋಹ". ೧೩೫ನೆಯ ಆಗಸ್ಟ್ ೧೯೯೯ರಂದು ಆರಂಭವಾದ ಈ ಸಾಹಿತ್ಯ ಪಯಣ ಸದ್ಯದಲ್ಲೇ ಇನ್ನೂರರ ಗಡಿಯನ್ನು ತಲುಪಲಿದೆ. ಮೊದಮೊದಲು ಸದಸ್ಯರ ಮನೆಗಳಲ್ಲಿ ನಡೆಯುತ್ತಿದ್ದ ದಾಸೋಹ ಕ್ರಮೇಣ ಬಿ.ಎಂ.ಶ್ರೀ. ಕಲಾಭವನದಲ್ಲಿ ಆಯೋಜಿಸಲ್ಪಡುತ್ತಿತ್ತು. ಜಗತ್ತನ್ನೇ ನಡುಗಿಸಿದ ಕೊರೋನಾ ಪಿಡುಗು ನಮ್ಮ ಕಾರ್ಯಕ್ರಮಗಳಿಗೂ ತಡೆಯೊಡ್ಡಲು ನೋಡಿತಾದರೂ, ನಮ್ಮ ವೇದಿಕೆಯ ಸದಸ್ಯರ ದೃಢ ಸಂಕಲ್ಪ ಮತ್ತು ತಂತ್ರಜ್ಞಾನದ ನೆರವಿನಿಂದ ೨೦೨೦ರ ಏಪ್ರಿಲ್‌ನಲ್ಲಿ ಜೂಮ್ ಮೀಟ್ ಮತ್ತು ಗೂಗಲ್ ಮೀಟ್ ಅಂತರ್ಜಾಲ ತಾಣಗಳ ಮೂಲಕ ದಾಸೋಹ ಆರಂಭವಾಯಿತು. ಇದಕ್ಕೆ ಕಾರಣಕರ್ತರಾದ ಶ್ರೀ ಗುರುಪ್ರಸಾದ್ ಹಾಲ್ಕುರಿಕೆ ಹಾಗೂ ಶ್ರೀ ಗುರುರಾಜ ಶಾಸ್ತ್ರಿ, ಇಬ್ಬರೂ ಸದಾ ಸ್ಮರಣೀಯರು.

ಕೊರೋನಾ ದಿಗ್ಬಂಧನಗಳು ನಮಗೆ ಅನುಕೂಲವಾಯಿತೆಂದೇ ಹೇಳಬಹುದು, ಈ ಮೊದಲು ಸ್ಥಳೀಯರು ಮಾತ್ರ ಇರುತ್ತಿದ್ದ ನಮ್ಮ ಕಾರ್ಯಕ್ರಮಗಳಲ್ಲಿ ಈಗ ದೇಶಾದ್ಯಂತ ಬೇರೆಬೇರೆ ಊರುಗಳಲ್ಲಿ, ವಿದೇಶಗಳಲ್ಲಿ ನೆಲೆಸಿರುವ ಸದಸ್ಯರೂ ಭಾಗವಹಿಸಲು ಅವಕಾಶವಾಗಿದೆ. ಸಾಹಿತ್ಯ ದಾಸೋಹ ಮಾತ್ರವಲ್ಲದೆ ಗಮಕ ವಾಚನ, ತಾಳಮದ್ದಳೆ, ಗಾಯನ, ನಾಟಕ, ಹಾಸ್ಯ ಕಾರ್ಯಕ್ರಮ, ವಿಚಾರ ಪ್ರಚೋದಕ ಉಪನ್ಯಾಸಗಳು, ವೇದಗಣಿತ, ಹರಿಕಥೆ ಮುಂತಾದ ಬಹು ಬಗೆಯ ೫೦ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಹಮ್ಮಿಕೊಂಡೆವು. ನಮ್ಮ ಗುರುಗಳಾದ ಪ್ರಾಚಾರ್ಯ ಎಚ್ಚೆಸ್ಕೆಯವರ ಜನ್ಮ ಶತಮಾನೋತ್ಸವದ ಅಂಗವಾಗಿ ಒಂದು ವರ್ಷ ಕಾಲ ಅವರ ಸಾಹಿತ್ಯದ ಚಿಂತನ ಮಂಥನಗಳನ್ನು ನಡೆಸಿದ್ದೇವೆ, ಕವಿತೆಗಳನ್ನು ಹಾಡಿದ್ದೇವೆ, ನಾಟಕ ಆಡಿದ್ದೇವೆ. ಸಾರ್ವಜನಿಕ ಸಮಾರಂಭ ನಡೆಸಿದ್ದರೆ ಇಷ್ಟೊಂದು ವಿವಿಧ ರೂಪಗಳಲ್ಲಿ ಗುರುನಮನ ಸಲ್ಲಿಸಲು ಖಂಡಿತಾ ಸಾಧ್ಯವಾಗುತ್ತಿರಲಿಲ್ಲ. ಕೊರೋನಾ ಪಿಡುಗು ದೈಹಿಕವಾಗಿ ವ್ಯಕ್ತಿಗಳನ್ನು ದೂರ ಇರಿಸಿದರೂ, ವೇದಿಕೆಯ ಸದಸ್ಯರ ನಡುವಿನ ಬಾಂಧವ್ಯವನ್ನು ಉತ್ತಮಗೊಳಿಸಿ, ಪರಸ್ಪರರು ಇನ್ನಷ್ಟು ಅರ್ಥಮಾಡಿ ಕೊಳ್ಳಲು ನೆರವಾಗಿದೆ. ಜಗತ್ತು ಸಹಜ ಸ್ಥಿತಿಗೆ ಮರಳಿದರೂ ನಾವು ಈ ತಂತ್ರಜ್ಞಾನ ಆಧಾರಿತ ಕಾರ್ಯಕ್ರಮಗಳನ್ನು ಪ್ರಾಯಶಃ ಬಿಡಲಾರೆವೇನೋ.

ಹೀಗೆ ಬದಲಿ ಮಾರ್ಗವನ್ನು ಅರಸಿ ಸಾಗುತ್ತಾ ಬಂದ ನಮ್ಮ ಸಾಹಿತ್ಯ ದಾಸೋಹದ ೧೯೫ನೆಯ ಅವತರಣಿಕೆಯು ೦೯.೧೦.೨೦೨೧ರಂದು ಶ್ರೀಮತಿ ಶೀಲಾ ಭಂಡಾರ್ಕರ್ ಅವರ ಘನ ಅಧ್ಯಕ್ಷತೆಯಲ್ಲಿ ನಡೆಯಿತು. ಒಟ್ಟು ೨೧ ದಾಸೋಹಿಗಳು ತಮ್ಮ ಸ್ವರಚಿತ ಕತೆ, ಕವನ. ಲೇಖನಗಳನ್ನು ಪ್ರಸ್ತುತಪಡಿಸಿದರು. ಈ ಎಲ್ಲವನ್ನೂ ಸಮಾಧಾನ ಚಿತ್ತದಿಂದ ಆಲಿಸಿದ ಶ್ರೀಮತಿ ಶೀಲಾ ಭಂಡಾರ್ಕರ್ ಅವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಪ್ರತಿಯೊಂದು ಪ್ರಸ್ತುತಿಯನ್ನೂ ವಿಶ್ಲೇಷಿಸಿರುವರಲ್ಲದೆ ಅವುಗಳನ್ನು ಬರಹ ರೂಪದಲ್ಲಿಯೂ ಒದಗಿಸಿದ್ದಾರೆ. ದಾಸೋಹದಲ್ಲಿ ಮಂಡಿಸಿದ ಎಲ್ಲಾ ಪ್ರಸ್ತುತಿಗಳನ್ನು, ಕಾರ್ಯಕ್ರಮ ವರದಿಯನ್ನು, ಅಧ್ಯಕ್ಷರ ಅನಿಸಿಕೆಗಳನ್ನು ಪಿಡಿಎಫ್ ರೂಪದಲ್ಲಿ ಸಿದ್ಧಪಡಿಸಿ ಈ ಮೂಲಕ ಸದಸ್ಯರಿಗೆ ಅರ್ಪಿಸುತ್ತಿದ್ದೇವೆ.

ದಾಸೋಹದ ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶೀಲಾ ಭಂಡಾರ್ಕರ್ ಅವರಿಗೆ, ತಮ್ಮ ಬರಹಗಳನ್ನು ಮಂಡಿಸಿದ ಎಲ್ಲಾ ಲೇಖಕರಿಗೆ, ಕಾರ್ಯಕ್ರಮ ವರದಿಯನ್ನು ನೀಡಿದ ಶ್ರೀ ಹು.ವಾ. ಶ್ರೀಪ್ರಕಾಶ್ ಅವರಿಗೆ, ಪಿಡಿಎಫ್ ಆವೃತ್ತಿಯನ್ನು ಸಿದ್ಧಪಡಿಸಿದ ಶ್ರೀ ಎಸ್.ಶೃಂಗೇಶ್ವರ ಶರ್ಮ ಅವರಿಗೆ ಮತ್ತು ತಂತ್ರಜ್ಞಾನದಲ್ಲಿ ನೆರವಾದ ಶ್ರೀ ಗುರುಪ್ರಸಾದ್, ಗುರುರಾಜ ಶಾಸ್ತ್ರಿ ಮತ್ತು ಶ್ರೀಮತಿ ರೇಣುಕಾ ದೇಸಾಯಿ ಹಾಗೂ ದಾಸೋಹದ ಎಲ್ಲಾ ವೀಕ್ಷಕರಿಗೆ ನಮ್ಮ ವಂದನೆಗಳು.

ಸಂಚಾಲಕ ಸಮಿತಿ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ದಾಸೋಹದ ಪುಟಗಳಲ್ಲಿ. . . .

ಮುಖಚಿತ್ರ ಕೃಪೆ : ಎಸ್. ಭುವನಮಿತ್ರ ಮತ್ತು ಅಂತರಜಾಲ

ಸಮನ್ವಯ ಸಮಿತಿ – ಕನ್ನಡವೇ ಸತ್ಯ
ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ

ನೋಡಿಯೋ ಸಾಹಿತ್ಯ ದಾಸೋಹ ೧೯೫

ಕಾರ್ಯಕ್ರಮ ವರದಿ: ಹು.ವಾ.ಶ್ರೀಪ್ರಕಾಶ್

ದಿನಾಂಕ ೦೯.೧೦.೨೦೨೧ ರಂದು ಶನಿವಾರ ಸಂಜೆ ೩.೩೦ಕ್ಕೆ ಶ್ರೀಮತಿ ಶೀಲಾ ಭಂಡಾರ್ಕರ್‌ರವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮ ಆರಂಭವಾಯಿತು. ಶ್ರೀಮತಿ ರಾಧಿಕಾ ಗುಜ್ಜರ್ ರವರು ಎಲ್ಲರನ್ನೂ ಸ್ವಾಗತಿಸಿದರು.



ಪ್ರಾಸ್ತಾವಿಕ ಮಾತುಗಳನ್ನಾಡಿದ ವೇದಿಕೆಯ ಪ್ರಧಾನ ಸಂಚಾಲಕರಾದ ಶ್ರೀ ಬೆಂ.ಶ್ರೀ. ರವೀಂದ್ರರವರು ನಮ್ಮ ವೇದಿಕೆಯಲ್ಲಿ ೨೦೦ನೇ ದಾಸೋಹವನ್ನು ನಡೆಸುವ ದಿನ ಸಮೀಪ ಸುತ್ತಿರುವುದು ಸಂತಸ ತಂದಿದೆ ಎಂದು ಹೇಳ ಈ ೨೦೦ನೇ ದಾಸೋಹವನ್ನು ಸಂಘಟಿತರಾಗಿ ವಿಶೇಷವಾಗಿ ಮಾಡೋಣ. ಈ ಬಗ್ಗೆ ಸಲಹೆಗಳು ಬರಲಿ ಎಂದರು. ನೋಡಿಯೋದಲ್ಲಿ ಇದು ೫೨ನೇ ಕಾರ್ಯಕ್ರಮ ವಾಗಿದ್ದು, '೫೦ರ ಕಲರವ' ಎಂಬ ವಿಶೇಷ ಕಾರ್ಯಕ್ರಮವನ್ನು ೧೭.೧೦.೨೦೨೧ ರಂದು ಹಮ್ಮಿಕೊಳ್ಳಲಾಗಿದೆ. ಆದಿನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ತಮ್ಮ ವಿಮರ್ಶಾತ್ಮಕ ಅನಿಸಿಕೆ, ಅಭಿಪ್ರಾಯ ವ್ಯಕ್ತಪಡಿಸಬಹುದು ಎಂದರು. ವೇದಿಕೆಯ ಚಟುವಟಿಕೆಗಳ ಬಗ್ಗೆ ಮಾತನಾಡಿ ಖೋ ಕಾದಂಬರಿ ಚೆನ್ನಾಗಿ ಮೂಡಿಬರುತ್ತಿದ್ದು ಒಳ್ಳೆಯ ಕಾದಂಬರಿ ಸೃಷ್ಟಿಯಾಗಬಹುದೆಂಬ ನಂಬಿಕೆ ಇದೆ. ಅದರ ಕಂತುಗಳು ವೇದಿಕೆಯಲ್ಲಿ ಪ್ರಕಟವಾದಾಗ ಸದಸ್ಯರಿಂದ ಕಾದಂಬರಿ ಹೇಗೆ ಮುಂದುವರೆಯಬೇಕೆಂದು ಸಲಹೆ ಸೂಚನೆಗಳೂ ಬರಲಿ ಎಂದರು.

ನಂತರ ೨೧ ಸದಸ್ಯರು ತಮ್ಮ ಪ್ರಸ್ತುತಿಗಳನ್ನು ಮಂಡಿಸಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀಮತಿ ಶೀಲಾ ಭಂಡಾರ್ಕರ್ ರವರು ಮಾತನಾಡಿ ಎಲ್ಲರ ಪ್ರಸ್ತುತಿಗಳಲ್ಲಿ ತಾವು ಮೆಚ್ಚಿಕೊಂಡ ಅಂಶಗಳ ಬಗ್ಗೆ ಸಂಕ್ಷಿಪ್ತವಾಗಿ, ಸೊಗಸಾಗಿ ವಿಶ್ಲೇಷಿಸಿದರಲ್ಲದೆ, ಇಂದಿನ ಸಾಹಿತ್ಯ ದಾಸೋಹದ ಅಧ್ಯಕ್ಷತೆ ವಹಿಸುವ ಅತಿ ದೊಡ್ಡ ಜವಾಬ್ದಾರಿ ತನಗೆ ವಹಿಸಿದ್ದಕ್ಕಾಗಿ ಸಂಚಾಲಕ ಸಮಿತಿಗೆ ವಂದನೆಗಳನ್ನು ಅರ್ಪಿಸಿದರು.

ದಾಸೋಹದ ಸಂಚಾಲಕರಾದ ಶ್ರೀ ಕೆ.ಎನ್.ಮಹಾಬಲರವರು ಕಾರ್ಯಕ್ರಮ ನಿರ್ವಹಣೆ ಮಾಡಿದರು. ಶ್ರೀ ಶೃಂಗೇಶ್ವರ ಶರ್ಮರವರು ಸಿದ್ಧಪಡಿಸಿದ ಸಾಹಿತ್ಯ ದಾಸೋಹ ೧೯೪ ರ ಪಿಡಿಎಫ್ ಸಂಚಿಕೆ ಬಿಡುಗಡೆಗೊಂಡಿತು. ಕೊನೆಯಲ್ಲಿ ಶ್ರೀ ಗುರುರಾಜ ಶಾಸ್ತ್ರಿಯವರು ವಂದನಾರ್ಪಣೆ ಸಲ್ಲಿಸಿದರು.

*****

ಹರಟೆ

ಕೋಲು ಪುರಾಣ

-ಶೀಲಾ ಅರಕಲಗೂಡು

ಇತ್ತೀಚೆಗೆ ಲೇಖಕಿ ಶ್ರೀಮತಿ ಶಾಂತಾ ನಾಗಮಂಗಲರವರು ಮಡಿಕೋಲು ಎಂಬ ವಿಷಯದ ಬಗ್ಗೆ ಬಹಳ ಪ್ರಬುದ್ಧವಾದ ಲೇಖನವೊಂದನ್ನು ಬರೆದು ಮಂಡಿಸಿದ್ದರು. ಅದನ್ನು ಓದಿದ ಹಲವಾರು ಜನರು ತುಂಬಾ ಒಳ್ಳೆಯ ಪ್ರತಿಕ್ರಿಯೆ ನೀಡುವುದರ ಜೊತೆಗೆ ತಮಗೆ ತಿಳಿದಂತೆ, ತಮ್ಮ ಅನುಭವಕ್ಕೆ ಬಂದಂತಹ ಅನೇಕ ವಿಷಯಗಳನ್ನು, ವಿಚಾರಗಳನ್ನು ಹಂಚಿಕೊಂಡಿದ್ದರು. ನಂಗೂ ಲೇಖನ ಇಷ್ಟವಾಗಿದ್ದು, ನಾನು ಹೀಗೆ ಪ್ರತಿಕ್ರಿಯಿಸಿದ್ದೆ: 'ಮಡಿಕೋಲು ಮೀಮಾಂಸೆ ಅದ್ಭುತವಾಗಿದೆ ಶಾಂತಾ ಮೇಡಂ, ಅಭಿನಂದನೆಗಳು. ಓದಿ ತುಂಬಾ ಮಜಾ ಬಂತು. ಹಾಗೇ ಹಳೆಯ ದಿನಗಳು ಜ್ಞಾಪಕಕ್ಕೆ ಬಂದವು. ಹಾಗಾಗಿ ನಿಮ್ಮ ಮೇಲೆ ಸ್ವಲ್ಪ ಕೋಪಾನೂ ಬಂತು. ಯಾಕಂತೀರೋ? ನನ್ನನ್ನೂ ಚಿಕ್ಕವಳಿದ್ದಾಗ ಮಡಿಕೋಲು ಅಂತಿದ್ರು. ನಂಗಾಗ ತುಂಬಾ ಕೋಪ ಬರ್ತಿತ್ತು, ದುಃಖಾನೂ ಆಗ್ತಿತ್ತು. ನಾನಾಗ ತುಂಬಾ ತೆಳ್ಳಗೆ, ಎತ್ತರಕ್ಕೆ ಇದ್ದೆ. ಈಗ ಹಾಗನ್ನಲಾರರು ಬಿಡಿ. ಏಕಂದ್ರೆ, ಈಗಲೂ ನಾನು ಹಾಗೇ ಇದ್ದರೂ, ಈಗಿನವರಿಗೆ ಮಡಿಕೋಲು ಅನ್ನೋ ಶಬ್ದವೇ ಗೊತ್ತಿಲ್ಲ! ಸಧ್ಯ, ನಾನು ಬಚಾವ್!'

ನಾನೀಗ 'ಮಡಿಕೋಲು' ಅನ್ನುವ ಸೀಮಿತ ಪರಿಮಿತಿಯ ವಿಷಯವನ್ನು ವಿಶಾಲ ಪರಿಮಿತಿಯ 'ಕೋಲು' ಶಬ್ದದ ಕಡೆಗೊಯ್ಯುತ್ತಿದ್ದೇನೆ, ಮಡಿ ಬಿಟ್ಟುಬಿಡುತ್ತಿದ್ದೇನೆ. ಇದೊಂಥರಾ ಸಂಸಾರಿ ಮಾನವನನ್ನು ವಿಶ್ವ ಮಾನವತ್ತ್ವದೆಡೆಗೆ ಒಯ್ಯುವಂತೆ ಅಂದ್ಕೋಬಹುದು.

> ವಿಶ್ವಾಮಿತ್ರೇಚ ವಾರ್ಧಕ್ಯೇ
> ರಾತ್ರೌ ಅಪ್ಸು ಕರ್ದಮೇ
> ಅನ್ಧೇ ಸರ್ಪೇಚ ಕ್ರೀಡೇಚ
> ದಂಡಂ ದಶಗುಣ ಭವೇತ್

ಈ ಶ್ಲೋಕವನ್ನು ನೀವೆಲ್ಲ ಕೇಳಿದ್ದೀರಿ ಅಂತ ನಂಗೊತ್ತು. ಇದರಲ್ಲಿ ಉಲ್ಲೇಖಿಸಲಾಗಿರುವುದು ಕೋಲಿನ ಹತ್ತು ಉಪಯೋಗಗಳು. ಅವು ಯಾವುವೆಂದರೆ, ಪಕ್ಷಿಗಳನ್ನು ಓಡಿಸಲು, ನಾಯಿಗಳನ್ನು ಓಡಿಸಲು, ಶತ್ರುಗಳನ್ನು ಎದುರಿಸಲು, ಇಳಿ ವಯಸ್ಸಿನಲ್ಲಿ ಊರುಗೋಲಾಗಿ, ಕತ್ತಲಲ್ಲಿ ಪ್ರಯಾಣಿಸುವಾಗ, ತೊರೆ-ನದಿಗಳನ್ನು ದಾಟುವಾಗ ಹಾಯಿಗೋಲಾಗಿ, ಕೆಸರು ಅಥವಾ ಮರಳು ಪ್ರದೇಶದಲ್ಲಿ ನಡೆಯುವಾಗ, ಅಂಧರಿಗೆ ದಾರಿದೀಪವಾಗಿ, ಹಾವಿನಿಂದ ರಕ್ಷಣೆ ಪಡೆಯಲು ಹಾಗೂ ಕ್ರೀಡೆಗಳಲ್ಲಿ ಬಳಸಲು. ಈ ಹತ್ತು ಉಪಯೋಗಗಳನ್ನು ಬಿಟ್ಟು ಬೇರೆ ಕೆಲ ಉಪಯೋಗಗಳ ಬಗ್ಗೆ ಸ್ವಲ್ಪ ಗಮನ ಹರಿಸಲು ನಾನಿಲ್ಲಿ ಪ್ರಯತ್ನಿಸಿದ್ದೇನೆ.

ಕೋಲು ಒಂದು ವೇಳೆ ಮನೆಯಲ್ಲಿದ್ದರೆ ಸಾಮಾನ್ಯವಾಗಿ ಅನುಪಯುಕ್ತ ಅಂದ್ಕೊಂಡು ಮನೆಯ ಯಾವುದೋ ಒಂದು ಮೂಲೆಯಲ್ಲಿ ನಿಂತಿರುತ್ತೆ. ಆದರೆ ಇಂತಹ ಕೋಲಿಗೂ ಕುದುರೆಯ ಸ್ಥಾನವನ್ನು ಕೊಟ್ಟವರು ಕವಿ ಸಿದ್ಧಯ್ಯ ಪುರಾಣಿಕ

ಅವರು. ಮಕ್ಕಳ ಕವನ 'ಅಜ್ಜನ ಕೋಲಿದು ನನ್ನಯ ಕುದುರೆ, ಹೆಜ್ಜೆಗೆ ಹೆಜ್ಜೆಗೆ ಕುಣಿಯುವ ಕುದುರೆ ' ಯಾರಿಗೆ ತಾನೇ ಗೊತ್ತಿಲ್ಲ? ಬಾಲ್ಯದಲ್ಲಿ ಕೋಲನ್ನು ಹಿಡಿದು ಆ ಹಾಡು ಹೇಳುತ್ತಿದ್ದುದು ನನಗೆ ಇಂದಿಗೂ ನೆನಪಿದೆ.

ಹಿಂದೆಲ್ಲಾ ಶಿಕ್ಷಕ ವೃತ್ತಿಗೆ ಸೇರಿದಾಕ್ಷಣ ಎಲ್ಲ ಶಿಕ್ಷಕರೂ ಕೋಲು ಹುಡುಕಲು ಹೋಗ್ತಿದ್ದರಂತೆ. ಕೋಲು ಶಿಕ್ಷಕರ ಅವಿಭಾಜ್ಯ ಅಂಗವಾಗಿತ್ತಂತೆ. Spare the rod, spoil the child, ಅಂದ್ರೆ 'ಕೋಲನ್ನು ಉಪಯೋಗಿಸದೆ ಹೋದರೆ ಮಕ್ಕಳನ್ನು ಹಾಳುಗೆಡವಿದಂತೆ' ಎಂಬ ನಂಬಿಕೆ ಆವಾಗಿನ ದಿನಗಳಲ್ಲಿ ಇತ್ತಂತೆ. ಈಗ ಅದನ್ನು ಊಹಿಸಲೂ ಸಾಧ್ಯವಿಲ್ಲ ಬಿಡಿ. ಶಿಕ್ಷಕರು ಪ್ರೀತಿಯಿಂದ ಮಕ್ಕಳಿಗೆ ಬೋಧಿಸಬೇಕೆಂದು ಅರ್ಥವಾದ ಮೇಲೆ ಕೋಲುಗಳೂ ಶಿಕ್ಷಣ ಕ್ಷೇತ್ರದಿಂದ ಮಾಯವಾಗಿವೆ.

ಕರ್ನಾಟಕದ ಜಾನಪದ ಕಲೆಗಳಲ್ಲಿ ಒಂದು ಮುಖ್ಯವಾದ ಕಲೆ 'ಕೋಲಾಟ'. ಎರಡೂ ಕೈಗಳಲ್ಲಿ ಒಂದೊಂದು ಕೋಲು ಹಿಡಿದು ಹಾಡಿಗೆ ತಕ್ಕಂತೆ ಕೋಲು ಬಡಿಯುತ್ತಾ ಹೆಜ್ಜೆ ಹಾಕಿ ಕುಣಿಯುವ ಪರಿಯಂತೂ ವರ್ಣಿಸಲಸದಳ. ಕೋಲಾಟದಲ್ಲಿ ಸಾಮಾನ್ಯ ಕೋಲುಗಳನ್ನು ಉಪಯೋಗಿಸದೆ ಬಣ್ಣಬಣ್ಣದ ಕೋಲುಗಳನ್ನು ಉಪಯೋಗಿಸುತ್ತಾರೆ. ಕೋಲಾಟ ಅಡುವಾಗ ಪರಸ್ಪರರ ಕೋಲುಗಳನ್ನು ವಿಶಿಷ್ಟವಾಗಿ ಬಡಿಯುವುದಕ್ಕೆ 'ಕೋಲು ಹುಯ್ಯೋದು', 'ಕೋಲು ಹಾಕೋದು' ಎಂತಲೂ ಹೇಳುತ್ತಾರೆ. ಇಡೀ ನೃತ್ಯದಲ್ಲಿ ಕೋಲಿನ ಪಾತ್ರವೇ ಪ್ರಧಾನ! ವಿಶ್ವ ಕನ್ನಡ ಸಮ್ಮೇಳನಗಳಲ್ಲೂ ಭಾಗವಹಿಸುವ ಸೌಭಾಗ್ಯ ಈ ಕೋಲುಗಳಿಗೆ!

ಆರೆಸ್ಸೆಸ್ಸಿನವರು ಲಾಠಿ ಬೀಸುತ್ತಾ ಅತ್ಯಂತ ಶಿಸ್ತಿನಿಂದ ಪಥ ಸಂಚಲನ ಮಾಡುವುದನ್ನು ನೋಡುವುದೇ ನೇತ್ರಾನಂದಕರ! ಕೇವಲ ದೇಶ ರಕ್ಷಣೆಗಾಗಿ ಅದನ್ನು ಉಪಯೋಗಿಸುವ ಅವರು ಲಾಠಿಗೆ ಗೌರವದ ಸ್ಥಾನ ತಂದುಕೊಟ್ಟವರು.

ರಾಜಕೀಯ ಚಳುವಳಿಗಳ ಸಮಯದಲ್ಲಿ, ಬಂದ್ ಸಮಯದಲ್ಲಿ ಅಥವಾ ಮತ್ಯಾವುದೇ ರಾಜಕೀಯ ಮುಷ್ಕರಗಳಲ್ಲಿ ಜನ ಕಾನೂನುಬಾಹಿರ ಚಟುವಟಿಕೆ ಮಾಡತೊಡಗಿದರೆ ಪೊಲೀಸರು ಕೈಗಳಲ್ಲಿರುವ ಲಾಠಿಗಳ ಮೂಲಕ ಜನರನ್ನು ತರಾಟೆಗೆ ತೆಗೆದುಕೊಂಡು ಪರಿಸ್ಥಿತಿಯನ್ನು ನಿಭಾಯಿಸುತ್ತಾರೆ. ಲಾಠಿಗಳು ಈ ರೀತಿಯಲ್ಲಿ ಶಿಸ್ತು ತರಿಸಿ ದೇಶಪ್ರೇಮವನ್ನು ಮೆರೆಯುತ್ತವೆ. 'ಕೋಲೇ, ನಿನಗೆ ಜೈ' ಎನ್ನೋಣವೇ?

ಇನ್ನು ಪರ್ವತಾರೋಹಿಗಳಿಗಂತೂ ಕೋಲು ಬೇಕೇಬೇಕು. ಪರ್ವತಾರೋಹಿಯ ಭಾರವನ್ನು ತನ್ನ ಮೇಲೆ ಹಾಕಿಕೊಳ್ಳುತ್ತಾ ಆತ ಸಲೀಸಾಗಿ ಮೇಲೇರುವಂತೆ ಕೋಲು ಮಾಡುತ್ತದೆ. ಶಿಖರಾರೋಹಣ ಮಾಡಿದ ಪರ್ವತಾರೋಹಿಗಳನ್ನು ಸನ್ಮಾನಿಸು ವಾಗ ಈ ಕೋಲುಗಳನ್ನೂ ಸನ್ಮಾನಿಸಬೇಕಲ್ಲವೇ? ಪಾಪ! ಯಾರೂ ಈ ಬಗ್ಗೆ ಯೋಚಿಸದಿರುವುದು ಖೇದದ ವಿಷಯ.

ಕೆಲ ಮನೆಗಳಲ್ಲಿ ಮಕ್ಕಳನ್ನು ಬೆದರಿಸಲು ಕೋಲು ಇಟ್ಟಿರುತ್ತಾರೆ. ಹೊಡೆಯಲೇ ಬೇಕೆಂದಿಲ್ಲ, ಅದನ್ನು ಕೇವಲ ತೋರಿಸಿ ತುಂಟ ಮಕ್ಕಳನ್ನು ಹತೋಟಿಗೆ ತರ್ತಾರೆ. ಆಗ ಆ ಕೋಲು catalyst, ಅಂದರೆ ವೇಗವರ್ಧಕದಂತೆ ಕೆಲಸ ಮಾಡುತ್ತದೆ.

ಇನ್ನು ನನ್ನ ಸ್ವಂತ ವಿಷಯಕ್ಕೆ ಬರ್ತೀನಿ. ಈ ದಿನಗಳಲ್ಲಿ ಪ್ರತಿದಿನ ಮುಂಜಾನೆ ವಾಯುವಿಹಾರಕ್ಕೆ ಹೋಗುತ್ತಿದ್ದೇನೆ. ಹೊರಡುವ ತಯಾರಿ ಮುಗಿಯುವುದು ಕೈಗೆ ಕೋಲು ತೆಗೆದುಕೊಂಡ ಮೇಲೆಯೇ. 'ಅಯ್ಯೋ ಮುದುಕಿ ಆಗಿದೀ, ಅದಕ್ಕೇ

ಕೋಲು ಹಿಡ್ಕೋತಿ, ಅದರಲ್ಲೇನು ವಿಶೇಷ?' ಅನ್ಬೇಡಿ. ನಾನು ಮುದಿ ವಯಸ್ಸಿಗೆ ಬಂದಿದ್ದೇನೆ ನಿಜ. ಆದರೆ, ಇನ್ನೂ ಕೋಲು ಹಿಡಿದು ನಡೆಯುವ ಸ್ಥಿತಿಗೆ ಬಂದಿಲ್ಲ. ಹಾಗಿದ್ಮೇಲೆ ಕೋಲೇಕೆ ಅಂತೀರಾ? ಏನ್ಮಾಡೋದು? ದಾರಿಯುದ್ದಕ್ಕೂ ಹತ್ತಾರು ನಾಯಿಗಳು! ತಮ್ಮ ಬೀದಿಯ ಜನರನ್ನು ಕಂಡು ಸುಮ್ಮನಿದ್ದರೂ ಅಪರಿಚಿತರನ್ನು ಕಂಡರೆ ಮೈಮೇಲೇ ಹಾರಿ ಬರುತ್ತವೆ. ಹೀಗಾಗಿ ಅವುಗಳನ್ನು ಬೆದರಿಸಲು ಕೋಲು ಹಿಡಿದು ನಡೆಯುವಾಗ ನನಗೆ ನಾನು ಕಿತ್ತೂರ ರಾಣಿ ಚೆನ್ನಮ್ಮನೋ, ರಾಣಿ ಅಬ್ಬಕ್ಕನೋ ಆಗಿರುವಂತಹ ಹೆಮ್ಮೆಯ ಭಾವ! ಗಮನಿಸಿ ನೋಡಿದರೆ, ಈಚೆಗೆ ಎಲ್ಲ ವಾಯು ವಿಹಾರಿಗಳ ಕೈಯಲ್ಲೂ ಕೋಲು! ಒಂಥರಾ ಯುದ್ಧಕ್ಕೆ ಹೊರಟವರ ಹಾಗೆ!

'ಇದೇನು? ಇಷ್ಟು ಹೊತ್ತೇ ಕೋಲು ಪುರಾಣ ಮಾಡೋದು' ಅಂತ ಕೇಳಿ ಕೇಳಿ ಬೇಸರಗೊಂಡ ನೀವು ಕೋಲು ಹಿಡಿದು ನನ್ನ ಬಡಿಯೋಕೆ ಬರ್ತಿದ್ದೀರಾ? ಅಯ್ಯೋ, ದಯಮಾಡಿ ಕ್ಷಮಿಸಿ. ಇದೋ ಮುಗಿಸಿಯೇ ಬಿಟ್ಟೆ. ವಂದನೆಗಳು.

***

"ಶಾವಾತ್ಮ" ಪದಗಳು

ಅದೊಂದಿಲ್ಲ

– ಶಾಂತಿವಾಸು

ಮಿತಿಯಲಿ ತೋರಿಕೆಯ ಮೀಟಿ, ಅಂತರಂಗದಿ ಎಲ್ಲೆ ದಾಟಲು ಹವಣಿಸಿದೆನಲ್ಲ???
ಕೃತಕ ಭಾರ ಹೊತ್ತು ನಡೆದೆ ಎಲ್ಲವನೆಳೆ ಸೆಳೆದು ಹೊಂದಿದೆನಗೆ, ಅದೊಂದಿಲ್ಲ....

ಧನ ಬೇಡ ಅದರ ದಾಹವಿಲ್ಲವೆನಗೆ, ಸದಾ ಧ್ಯಾನಿಪವೊಂದೇ ಗಮನದಿದ್ದೇನಲ್ಲ....
ಹೊಂದುವ ಪರಿಯೆಂತೋ? ಕಾಣೆ ದೀನರೂ ಹೊಂದಿಹ, ಎನಗದೊಂದಿಲ್ಲ.....

ನನ್ನ ನಾನೇ ಅರಿಯಲರುವ ಮಾರ್ಗವೇಕೈಕ ಹಾದಿಯನವ ಬಚ್ಚಿಟ್ಟ, ನಾ ತುಡಿತವ ಬಿಟ್ಟಿಲ್ಲ....
ಇರುವುದಕೆ ಹುಚ್ಚಾಗಿ, ಹುಚ್ಚು ಹೆಚ್ಚಾಗಿ ಅಲೆವವರು ಹೊಂದಿಹ, ಎನಗದೊಂದಿಲ್ಲ....

ಎನಗಿಲ್ಲದುದ ತೋರಬೇಕನ್ಯರಿಗೆನಿಪ ಮಾರ್ಗವೇನೆಂಬರಿವು ಎನಗಿಲ್ಲ....
ಸರ್ವಾಂತರ್ಯಾಮಿಯ ಮುಕ್ತಿ ಬೇಡುವ, ಬೇಡಿ ಬೇಡಿ ಕಾಡುವ ಭಕ್ತಿಯದೊಂದೆನಗಿಲ್ಲ, ಎನಗಿಲ್ಲ....

*****

ಒನಕೆ ಭಾಗ್ಯ

- ಜಿ.ವಿ. ನಿರ್ಮಲ

ಹಲವಾರು ಭಾಗ್ಯಗಳ ಪರಿಚಯವಿರುವ ಕನ್ನಡಿಗರಿಗೆ 'ಒನಕೆ ಭಾಗ್ಯ' ಎಂದ ಕೂಡಲೆ, ಹೆಸರೇ ಕೇಳಿಲ್ಲವಲ್ಲ ಎಂದು ಆಶ್ಚರ್ಯದ ಜೊತೆಗೆ ಮಾಧ್ಯಮಗಳಲ್ಲಿ ಕಂಡು ಕೇಳರಿಯದ ಭಾಗ್ಯವಿದಾವುದು ಎಂದು ಕುತೂಹಲವಾಗಿರಬಹುದು. ತಮಗೂ ದೊರೆಯಬಹುದೇ ಎನ್ನುವ ಅನುಮಾನ ಹಾಗೂ ಆಸೆಯೂ ಹುಟ್ಟಿರಬಹುದು. ನಿಮ್ಮ ಆಶ್ಚರ್ಯ, ಕುತೂಹಲ, ಅನುಮಾನ, ಆಸೆಗಳೆಲ್ಲದಕ್ಕೂ ಪೂರ್ಣವಿರಾಮ ಹಾಕಿ. ಇದು ನನಗೆ ಮಾತ್ರ ಸಿಕ್ಕಿರುವ ವಿಶೇಷ ಒನಕೆ ಭಾಗ್ಯ.

ಈ ಭಾಗ್ಯದ ಒನಕೆ ಮತ್ತೆಲ್ಲೂ ಅಲ್ಲ; ನಮ್ಮ ಮನೆಯ ಅಟ್ಟದ ಮೇಲೇ ಸಿಕ್ತು! ಅದು ಅಲ್ಲಿರೋದು ನಂಗೆ ಮರ್ತೇ ಹೋಗಿತ್ತು. ಮೊನ್ನೆ ದಸರಾ ಹಬ್ಬಕ್ಕೆ ಗೊಂಬೆ ಪೆಟ್ಟಿಗೆ ತೆಗೆಯೋಕ್ಕೆ ಹೋದಾಗ, ಅಟ್ಟದ ಒಂದು ಬದಿಯಲ್ಲಿ ಉರುಳಿ ಅಡಗಿದ್ದ ಒನಕೆ, ಹನ್ನೆರಡು ವರ್ಷಗಳ ನಂತರ ನನ್ನ ಕಣ್ಣಿಗೆ ಕಾಣಿಸಿಕೊಂಡ್ತು.

ಈ ಒನಕೆ ನಮ್ಮ ಅತ್ತೆಯವರ ಅಚ್ಚುಮೆಚ್ಚಿನ ಆಸ್ತಿ. ಹೊಸ ಮನೆ ಕಟ್ಟಿದಾಗಲೂ ಒನಕೆಯನ್ನು ಯಾರಿಗೂ ಕೊಡಬಾರದೆನ್ನುವುದು ಅವರ ಇಚ್ಛೆಯಾಗಿತ್ತು. ಆದರೆ ಈಗಿನ ಕಾಲದ ಮನೆಯಲ್ಲಿ ಅದನ್ನು ಎಲ್ಲಿಡುವುದು? ಈಗೀಗ ಹಲವರು ಹಳೆಯ ಹಿತ್ತಾಳೆ, ತಾಮ್ರದ ಪಾತ್ರೆಗಳನ್ನು ಫಳಫಳನೆ ತೊಳೆದು ಡ್ರಾಯಿಂಗ್ ರೂಮಿನಲ್ಲಿಟ್ಟಿರುತ್ತಾರೆ. ಆದರೆ ಇದುವರೆಗೂ ಯಾರೂ ಒನಕೆ ಇಟ್ಟಿರೋದನ್ನ ನಾನು ನೋಡಿಲ್ಲ. ಒನಕೆ ಇಡೋಕೆ ಹೆಚ್ಚು ಜಾಗ ಬೇಡ. ನಿಜ. ಆದರೆ ಒಂದು ಮೂಲೆ ಬೇಕೇ ಬೇಕು. ಅದು ಬಿಟ್ಟು ನೆಲದ ಮೇಲೆ ಮಲಗಿಸಿದರೆ ಅದರ ಘನತೆಗೇ ಕುಂದು. ಡ್ರಾಯಿಂಗ್ ರೂಮಿನ ಒಂದು ಮೂಲೆಯಲ್ಲಿ ಟಿವಿ, ಮತ್ತೊಂದು ಮೂಲೆಯಲ್ಲಿ ಯು.ಪಿ.ಎಸ್. ಮತ್ತೆರಡು ಮೂಲೆಗಳಲ್ಲಿ ಬಾಗಿಲುಗಳು. ಮನೆಯ ಪ್ರತಿಯೊಂದು ಮೂಲೆಯಲ್ಲೂ ಮಂಚ, ಫ್ರಿಡ್ಜ್, ಬೀರು ಇತ್ಯಾದಿ ಸಾಮಾನುಗಳು ತುಂಬಿರುವಾಗ ಒನಕೆಗೆ ಮೂಲೆ ಎಲ್ಲಿ? ಕೊನೆಗೆ ಅದು ಅಟ್ಟವೇರಿ, ಅಡಗಿ ಮಲಗಿತ್ತು.

ನಮ್ಮ ಅತ್ತೆಯವರ ಆತ್ಮಕ್ಕೆ ನಮಿಸಿ, ಒನಕೆಯನ್ನು ಯಾರಿಗಾದರೂ ಕೊಟ್ಟುಬಿಡುತ್ತೇನೆ ಎಂದು ದೃಢ ನಿರ್ಧಾರ ಮಾಡಿದೆ. ನಮ್ಮ ತಾಯಿ 'ಯಾರಾದರೂ ಅಡುಗೆ ಗುಂಪಿನವರಿಗೆ ಕೊಡು. ಭಕ್ಷ್ಯದ ಹಿಟ್ಟು ಕುಟ್ಟಲು ಉಪಯೋಗವಾಗುತ್ತೆ. 'ಕಣಕ ಕುಟ್ಟುವ ಅಲ್ಲಿಗೆ ಹೋಗಿ ಹಣಕಿ ಇಣಕಿ ನೋಡುವಿರಿ, ಕಣಕ ಕುಟ್ಟೋ ಒನಕೀಲಿ ಹೊಡೆದರೆ ಕುಯ್ ಕುಯ್ ರಾಗ ಹಾಡುವಿರಿ' ಎಂದು ಕನಕದಾಸರೇ ಹಾಡಿಲ್ಲವೆ ಎಂದು ಹಾಡಿನಲ್ಲಿಯೇ ಕಣಕ ಕುಟ್ಟಿ, ಒನಕೆಯನ್ನು 'ಒನಕಿ' ಮಾಡಿ ಮುದ್ದಾಡಿದರು. ಧೂಳೊರಸಿ ಇಡುತ್ತಿರುವಾಗ ಮನೆಗೆ ಬಂದ ನನ್ನ ತಂಗಿ 'ಅರೆ. ಮಗನ ಮದುವೆ ದೇವರ ಸಮಾರಾಧನೆಗೆ ಬೇಕಾಗುತ್ತೆ. ಯಾರಿಗೂ ಕೊಡಬೇಡ' ಎಂದು ಸಲಹೆ ಕೊಟ್ಟಳು. ಮದುವೆಗೆ ಮುನ್ನ ದೇವರ ಸಮಾರಾಧನೆಯಂದು ಅರಿಶಿನ ಶಾಸ್ತ್ರದಲ್ಲಿ, ಒಂದು ಪಾತ್ರೆಯೊಳಗೇ ಪುಡಿ ಮಾಡಿದ ಅರಿಶಿನವನ್ನೇ ಹಾಕಿ, ಐದು ಜನ ಮುತ್ತೈದೆಯರು ಒನಕೆ ಹಿಡಿದು ಅರಿಶಿನ ಕುಟ್ಟುವಂತೆ ನಟಿಸಿ, ಶಾಸ್ತ್ರ ಮಾಡುತ್ತಾರೆ. ನನಗೆ ನಗು ಉಕ್ಕಿ ಬಂತು. ಒಂದು ಶಾಸ್ತ್ರದ ನಟನೆಗೆ ಬೇಕಾಗುವ ಒನಕೆಗೆ ಯಾಕಿಷ್ಟು ಕಾಳಜಿ? ಎಂದುಕೊಂಡೆ. ತಂಗಿಯ ಸಲಹೆಯನ್ನು ಅಲಕ್ಷ್ಯ ಮಾಡುವುದೇಕೆ? ಒನಕೆಯೊಂದು ಮನೆಯ

ಮೂಲೆಯಲ್ಲಿದ್ದರೆ ಅದಕ್ಕೆ ಊಟ, ಉಪಚಾರ, ಪೂಜೆ, ನೇವೇದ್ಯಗಳೇನೂ ಮಾಡಬೇಕಿಲ್ಲ. ಆದರೆ ಎಲ್ಲಿಡುವುದು? ಮತ್ತೆ ಅಟ್ಟದ ಮೇಲೆ ಎಂದುಕೊಂಡೆ.

ಅಷ್ಟರಲ್ಲಿ ನನ್ನ ಪತಿದೇವರು 'ಇನ್ನೇನು ಕನ್ನಡ ರಾಜ್ಯೋತ್ಸವ ಬಂತು. ಒನಕೆ ಓಬವ್ವನ ಪಾತ್ರಧಾರಿಗೆ ಒನಕೆ ಬೇಕೇ ಬೇಕು. 'ಫ್ರೀ ಆಡ್' ನಲ್ಲಿ 'ನಮ್ಮಲ್ಲಿ ಒನಕೆ ಬಾಡಿಗೆಗೆ ದೊರೆಯುತ್ತದೆ ಎಂದು ಹಾಕಿಸೋಣ.' ಎಂದರು. ಸ್ವತಃ ಬಾಯಿ ಬಿಡದ ಮೂಕ ಒನಕೆ ಇಷ್ಟು ಜನರ ಬಾಯಿ ಬುಡುಬುಡುಕೆ ಮಾಡುತ್ತಿದೆಯಲ್ಲಾ? ಎನ್ನುವ ಆಶ್ಚರ್ಯದ ಜೊತೆಗೆ ಒನಕೆಯಲ್ಲಿ ಏನಾದರೂ ದೈವಿಕ ಶಕ್ತಿ ಇದೆಯೇ ಎನ್ನುವ ಅನುಮಾನವೂ ಹುಟ್ಟಿತು. ಸಂಸಾರದ ಎಲ್ಲಾ ಸಾಮಾನುಗಳ ಮೇಲೆ ವಿಪರೀತ ವ್ಯಾಮೋಹವಿದ್ದ ನಮ್ಮ ಅತ್ತೆಯವರ ಆತ್ಮ ಒನಕೆಯ ಸುತ್ತಲೂ ಸುತ್ತುತ್ತಿರಬಹುದು ಎನ್ನುವ ಆಲೋಚನೆಯೂ ಬಂತು. ಥಟ್ಟನೆ ನಮ್ಮ ದೇವರ ಮನೆಯ ಒಂದು ಮೂಲೆಯಲ್ಲೇ ಒನಕೆಯನ್ನು ಪ್ರತಿಷ್ಠಾಪಿಸಿ, ಮಗನಿಗೆ ಬೇಗ ಮದುವೆಯಾಗಲೆಂದು ಪ್ರಾರ್ಥಿಸುತ್ತಾ, ಅರಿಶಿನ, ಕುಂಕುಮಗಳಿಂದ ಪೂಜೆ ಮಾಡಿದರೆ ಒಳ್ಳೆಯದಾಗಬಹುದು ಎಂದುಕೊಂಡೆ. ಯಾರಾದರೂ ಕೇಳಿದರೆ ಇದೊಂದು ದೈವಿಕ ಒನಕೆ ಎಂದು ಪ್ರಚಾರ ಮಾಡಿದರೆ ಆಯ್ತು. 'ಪೀಕೆ' ಸಿನಿಮಾದಲ್ಲಿ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳೆಲ್ಲಾ ಒಂದು ಕಲ್ಲಿಗೆ ಅಪಾರ ಭಕ್ತಿಯಿಂದ ನಮಸ್ಕರಿಸಿದ್ದು ನೆನಪಾಯ್ತು.

ದೇವರ ಕೋಣೆಯಲ್ಲಿ ಒನಕೆಯನ್ನು ಯಾವ ಮೂಲೆಯಲ್ಲಿ ಪ್ರತಿಷ್ಠಾಪಿಸುವುದು ಎಂದು ಆಲೋಚಿಸುತ್ತಿರುವಾಗ ನನಗೆ ನೆನಪಾಗಿದ್ದು ವಾಸ್ತುಶಾಸ್ತ್ರಜ್ಞರು. ಅವರನ್ನು ಕೇಳಿದರೆ ಅವರು ಯಾವುದೋ ಆಧಾರ ಉಲ್ಲೇಖಿಸಿ ಒನಕೆಯನ್ನು ಯಾವ ದಿಕ್ಕಿನಲ್ಲಿಡಬೇಕೆಂದು ದೊಡ್ಡ ವಾದವನ್ನೇ ಮಂಡಿಸುತ್ತಾರೆ. ಒಂದು ವೇಳೆ ಇಬ್ಬರು ವಾಸ್ತುತಜ್ಞರು ಬೇರೆಬೇರೆ ದಿಕ್ಕನ್ನು ಸೂಚಿಸಿದರೆ ಮಾಧ್ಯಮದವರು ಇದೇ ಸಮಯವೆಂದು 'ಒನಕೆ ವಾಸ್ತು' ಎಂದು ಒಂದು ಕಾರ್ಯಕ್ರಮವನ್ನು ನಡೆಸಿದರೂ ಆಶ್ಚರ್ಯವಿಲ್ಲ. ಹಾಗಾಗಿ ನಮ್ಮ ಒನಕೆ, ಅದರ ಜೊತೆ ನಾನು ಟಿವಿಯಲ್ಲಿ ಬರುವುದಾದರೆ! ಅಬ್ಬಾ! ಈ ಒನಕೆ ನನ್ನ ಊಹಾಶಕ್ತಿ, ಕಲ್ಪನಾಶಕ್ತಿಗಳನ್ನೂ ಹೆಚ್ಚಿಸುತ್ತಿದೆಯಲ್ಲ? ಇದು ನಿಜಕ್ಕೂ ದೈವಾಂಶ ಉಳ್ಳದ್ದೇ ಸರಿ. ನನ್ನ ವಿಜ್ಞಾನಿ ಮಂಡೆಯನ್ನೂ ಅಲ್ಲೋಲಕಲ್ಲೋಲ ಮಾಡಿ ಮುಸಿನಗುತ್ತಿದೆಯಲ್ಲಾ! ಹೀಗಂದುಕೊಂಡ ಕೂಡಲೆ ನನ್ನ ವಿಜ್ಞಾನಿ ಮಂಡೆಗೆ ಅವಮಾನವಾಗಿರಬೇಕು. 'ಎಲೆ, ಅರೆ ವಿಜ್ಞಾನಿಯೇ, ನಿನಗೆ ವೈಜ್ಞಾನಿಕ ಮನೋಭಾವವಿದ್ದರೆ ಗ್ರಹಣದ ದಿನದವರೆಗೂ ಕಾಯುತ್ತಿರು. ಪೂರ್ಣಗ್ರಹಣ ಕಾಲದಲ್ಲಿ ಒನಕೆಯನ್ನು ಯಾವ ಆಧಾರವಿಲ್ಲದೆ ನಿಲ್ಲಿಸಿದರೂ ನೆಟ್ಟಗೆ ನಿಲ್ಲುವುದಂತೆ. ನೋಡಿಯೇ ಬಿಡು' ಎಂದು ಹುಕುಂ ಮಾಡಿತು. ಯಾವ ಖರ್ಚಿಲ್ಲದೆ ಒಂದು ವೈಜ್ಞಾನಿಕ ಸತ್ಯದರ್ಶನ ಮಾಡುವ ಅವಕಾಶ ಒದಗಿರುವಾಗ ಸುಮ್ಮನೆ ಬಿಡಬಾರದು ಎಂದುಕೊಂಡೆ. ಅಂತೂ ನಮ್ಮ ಒನಕೆಗೆ ಇದ್ದಕಿದ್ದಂತೆ ನಾನಾ ತರಹದ ಪ್ರಯೋಜನಗಳು ಕಂಡುಬಂತು.

ಅಷ್ಟರಲ್ಲಿ ವಿಪರೀತ ಕುತೂಹಲವಿರುವ, ಯಾವ ವಿಷಯದಲ್ಲಾದರೂ ತಮ್ಮ ಅಮೂಲ್ಯ ಸಲಹೆ ಕೊಟ್ಟಲ್ಲದೆ ಜಾಗ ಖಾಲಿ ಮಾಡದ ನಮ್ಮ ಪಕ್ಕದ ಮನೆಯವರು 'ಏನ್ರೀ ಬಹಳ ಬಿಸಿಯಾಗಿದ್ದೀರಾ?' ಎಂದು ಮನೆಯೊಳಗೆ ಪ್ರವೇಶಿಸಿದರು. 'ಬಿಸಿ ಅಲ್ಲ, ಸ್ವಲ್ಪ ಕಸಿವಿಸಿಯಲ್ಲಿದ್ದೇನೆ. ಬನ್ನಿ ಒಳಗೆ' ಎಂದು ಆಹ್ವಾನಿಸಿದೆ. ನನ್ನ ಹಸಿಹಸಿಯಾದ ಕಸಿವಿಸಿಯನ್ನು ಬಿಸಿಬಿಸಿಯಾಗಿ ಅವರೊಂದಿಗೆ ಹಂಚಿಕೊಂಡೆ. ನಿರೀಕ್ಷಿಸಿದ್ದಂತೆ ಅವರಿಂದ ಒಳ್ಳೆಯ ಸಲಹೆಯೇ ಬಂತು. 'ರೀ, ಇದನ್ನು

ಬೀದಿ ಬಾಗಿಲ ಹಿಂದೆ ಇಟ್ಟಿರಿ. ಈಗ ದಿನನಿತ್ಯ ಮನೆಗೆ ನುಗ್ಗಿ ಕಳ್ಳತನ ಮಾಡುವ ಸುದ್ದಿ ಓದ್ತೀವಿ. ಮನೆಗೆ ಯಾರಾದರೂ ನುಗ್ಗಿದಾಗ, ಸರ್‍ರಂತ ಇದರಿಂದ ಎರಡು ಬಡಿದು ಆತ್ಮರಕ್ಷಣೆ ಮಾಡ್ಕೋಬಹುದು. ಇದನ್ನು ಮನೇಲಿಟ್ಕೋಳಕ್ಕೆ ಪರವಾನಗಿಯೂ ಬೇಕಿಲ್ಲ' ಎಂದು ತಮ್ಮ ಬುದ್ಧಿವಂತಿಕೆ ಮೆರೆದರು. ಆದರೆ ಆ ಕಳ್ಳನೇ ನಮಗಿಂತ ಮೊದಲು ಅದನ್ನು ಎತ್ತಿಕೊಂಡು ನಮಗೆ ನಾಲ್ಕು ಬಡಿದರೆ ನಮ್ಮ ಗತಿ ಏನು? ದೇವರ ಪಾದ ಸೇರುವುದು ಖಚಿತವಲ್ಲವೇ ಎಂದು ಯೋಚಿಸಿ, ನಯವಾಗಿ ಅವರ ಸಲಹೆಯನ್ನು ತಳ್ಳಿಹಾಕಿದೆ.

ಅಷ್ಟರಲ್ಲಿ ಫೋನ್ ರಿಂಗುಣಿಸಿತು. ಕೈಲಿದ್ದ ಒನಕೆ ಸಮೇತ ಕುರ್ಚಿಯಲ್ಲಿ ಕುಳಿತು, ಮತ್ತೊಂದು ಕೈಲಿ ಫೋನ್ ತೆಗೆದುಕೊಂಡೆ. 'ಹಲೋ ಏನ್ರೀ' ಎಂದ ನನ್ನ ಸ್ನೇಹಿತೆ, ಬಹಳ ದಿನಗಳಿಂದ ವರ ಹುಡುಕುತ್ತಿದ್ದ ತಮ್ಮ ಮಗಳಿಗೆ ಮದುವೆ ನಿಶ್ಚಯವಾಯಿತೆಂದು ಹೇಳಿದರು. ಶುಭ ಸಮಾಚಾರ ಕೇಳಿ 'ಬಹಳ ಸಂತೋಷ. ನನ್ನಿಂದಾಗುವ ಕೆಲಸವೇನಿದ್ರೂ ಹೇಳಿ. ಮಾಡಲು ಸಿದ್ಧ' ಎಂದೆ. 'ರೀ, ದೇವರ ಸಮಾರಾಧನೆಯ ದಿನ ಅರಿಶಿನ ಕುಟ್ಟುವ ಶಾಸ್ತ್ರದಿಂದ ಹಿಡಿದು ಎಲ್ಲದಕ್ಕೂ ತಾವು ಬರಲೇಬೇಕು' ಎಂದಾಗ ನನಗೆ ನನ್ನ ಕೈಲಿದ್ದ ಒನಕೆ 'ಕಿಸಕ್' ಎಂದು ನಕ್ಕಂತೆ ಭಾಸವಾಯಿತು. 'ರೀ, ನನ್ನ ಕೈಲಿರುವ ಒನಕೆ ನಿಮಗೆ ಕಾಣಿಸ್ತಾ ಇದ್ಯಾ?' ಎಂದು ಕೇಳಿದೆ. ಅವರು 'ಅರೆ, ನಿಮ್ಮ ಮನೇಲಿ ಒನಕೆ ಇದ್ಯಾ? ಒಳ್ಳೆ ವಿಷ್ಯ ಹೇಳಿದ್ರಿ. ನಮ್ಮ ಮನೇಲಿ ನಮ್ಮ ಅತ್ತೆಯವರ ಕಾಲದ ಚಿಕ್ಕ ಪೋರ್ಟಬಲ್ ಒರಳಿದೆ. ಒನಕೆ ಎಲ್ಲಿಂದ ತರೋದು ಎಂದು ಯೋಚಿಸ್ತಿದ್ದೆ.' ಅಂದಾಗ ನಾನು ಸುಸ್ತು. 'ಅವರತ್ತೆ ಒರಳಿನಲ್ಲಿ, ನಮ್ಮತ್ತೆ ಒನಕೆ ಸೇರಿದಾಗ.....' ಎಂದು ಕವನ ಬರೆಯುವಷ್ಟು ಸ್ಫೂರ್ತಿ ಬಂತು. ಈ ಒನಕೆ ಆಂಟೆನಾ ತರಹ ದಿವ್ಯಸಂದೇಶಗಳನ್ನೋ, ಮೇಘಸಂದೇಶಗಳನ್ನೋ ಕಳಿಸುವುದೇ ಎಂದು ಅನುಮಾನ ಬಂತು.

ಅಷ್ಟರಲ್ಲಿ ಬಾಗಿಲ ಕರೆ ಗಂಟೆ ಬಾರಿಸಿತು. ಬಲಗೈಲಿದ್ದ ಒನಕೆಯನ್ನು ಊರಿಕೊಂಡು ಖುರ್ಚಿಯಿಂದ ಸಲೀಸಾಗಿ ಎದ್ದಾಗ 'ಆಹಾ! ಈ ಒನಕೆಯನ್ನು ಊರುಗೋಲಿನಂತೆ ಬಳಸಬಹುದಲ್ಲವೇ?' ಎಂದು ಸೋಜಿಗವಾಯಿತು. ಬಾಗಿಲು ತೆರೆದಾಗ ಅನಾಥಾಶ್ರಮಕ್ಕೆ ವಂತಿಗೆ ಕೇಳಲು ಬಂದಿದ್ದವರು ನನ್ನ ಹೊಸ ಊರುಗೋಲನ್ನು ನೋಡಿ ಕಕ್ಕಾಬಿಕ್ಕಿಯಾದರು. ತಿಂಗಳಿಗೊಮ್ಮೆ ರಸೀತಿ ಪುಸ್ತಕ ಮುಂದೆ ಹಿಡಿದು ದುಡ್ಡು ಕೇಳುತ್ತಿದ್ದವರ ಜೊತೆ ಕಳೆದ ಬಾರಿ ಸ್ವಲ್ಪ ಖಾರವಾಗಿ ಮಾತಾಡಿ ಕಳುಹಿಸಿದ್ದೆ. ನನ್ನ ಓಬವ್ವನ ಅವತಾರ ಕಂಡಾಗ ಅವರಿಗೆ ಗಾಬರಿಯಾಗಿದ್ದು ಸಹಜ. 'ಏನೋ ಕೆಲಸ ಮಾಡ್ತಿದ್ದೆ. ಹಾಗೇ ಬಂದೆ' ಎಂದು ಹೇಳಿದರೂ ಗಾಬರಿಯಿಂದ 'ಮೇಡಂ ಮುಂದಿನ ವಾರ ಬರ್ತೀವಿ. ತಮ್ಮ ಕೆಲಸ ಮುಗಿಸ್ಕೊಳ್ಳಿ' ಎಂದು ಧಡಧಡನೆ ಮೆಟ್ಟಲಿಳಿದು ಹೊರಟೇ ಹೋದರು. ಬಲಾತ್ಕಾರವಾಗಿ ಹಣ ಕೇಳುತ್ತಿದ್ದವರು ಒನಕೆ ದರ್ಶನದಿಂದ ಹೀಗೆ ಅದೃಶ್ಯರಾಗಿದ್ದು ನೋಡಿ ನನಗೆ 'ಅಯ್ಯೋ ಪಾಪ' ಎನ್ನಿಸಿತು. ಮಹಾಭಾರತದಲ್ಲಿ ವಿಶ್ವಾಮಿತ್ರನ ಶಾಪದಿಂದ ಒಬ್ಬ ಹುಡುಗ ಹೆತ್ತ ಒನಕೆಯೇ ಯದುವಂಶದ ನಾಶಕ್ಕೆ ಕಾರಣವಾದ ಕಥೆ ಇದೆ. ಈ ಕಲಿಯುಗದ ಒನಕೆಗೆ ಅನುಮಾನಾಸ್ಪದವಾಗಿ ವಂತಿಗೆ ಕೇಳುವವರನ್ನು ಅಟ್ಟುವ ಶಕ್ತಿಯಾದರೂ ಇದೆಯಲ್ಲಾ ಎಂದು ಹೆಮ್ಮೆಯಾಯಿತು.

ಇದೇ ಗುಂಗಿನಲ್ಲಿ, ಅದೇ ಭಂಗಿಯಲ್ಲಿ ನಿಂತಿದ್ದಂತೆಯೇ ನನ್ನ ಬರಹಗಾರ್ತಿ ಸ್ನೇಹಿತೆ ಗಾಯತ್ರಿ ಮೂರ್ತಿ ನಮ್ಮ ಮನೆಗೆ ಅಪರೂಪವಾಗಿ ಬಂದಿಳಿದಳು. ನನ್ನ ಅವತಾರ ಕಂಡು ಅವಳಿಗೂ ನಗು ಬಂತು. ಅವಳಿಗೆ ನನ್ನ ಒನಕೆಯ ಅನುಭವಗಳನ್ನು

ಹೇಳಿದೆ. ಅವಳು 'ಈಗಿನ ಮಕ್ಕಳು ಇಂತಹ ವಸ್ತುಗಳನ್ನು ನೋಡುವುದೇ ಅಪರೂಪ. ಹಂಡೆ, ತಂಬಿಗೆ, ಒರಳು, ಒನಕೆ ಇಂತಹ ಶಬ್ದಗಳು ಕನ್ನಡ ಭಾಷೆಯಿಂದಲೇ ಮರೆಯಾಗಿ ಹೋಗುವ ದಿನಗಳು ಬರಲಿವೆ. ಇಂತಹ ಪರ್ವ ಕಾಲದಲ್ಲಿ ನೀನು ಈ ಒನಕೆಯನ್ನು ಜೋಪಾನವಾಗಿಡು. ಮುಂದಿನ ಪೀಳಿಗೆಯವರಿಗೆ ನಮ್ಮ ಸಂಸ್ಕೃತಿಯನ್ನು ಪರಿಚಯಿಸಲು ಇಂತಹ ವಸ್ತುಗಳು ಅತ್ಯಗತ್ಯ' ಎಂದು ದೀರ್ಘ ಭಾಷಣವನ್ನೇ ಬಿಗಿದಳು. ಅಯ್ಯೋ, ಚಮಚ ಎನ್ನುವ ದಿನನಿತ್ಯ ಬಳಸುವ ವಸ್ತುವಿಗೆ 'ಸ್ಪೂನ್' ಎಂದೇ ಉಲಿಯುವ ಕನ್ನಡ ಕಂದಮ್ಮಗಳು ಒನಕೆಯನ್ನು ಒಲವಿನಿಂದ ಓಲೈಸುವರೇ ಎಂದು ಮನಸ್ಸಿನಲ್ಲೇ ವಿಲವಿಲಗುಟ್ಟಿದೆ. ನಾನು ಕನ್ನಡ ನಾಡಿನ ಚಿತ್ರದುರ್ಗದಲ್ಲೇ 'ಅ, ಆ. ಇ, ಈ' ತಿದ್ದಿದವಳಾದ್ದರಿಂದ, ವೀರರಮಣಿ, ಗಂಡು ಭೂಮಿಯ ವೀರನಾರಿ ಓಬವ್ವನ ಬಗ್ಗೆ ನನಗೆ ಅಪರಿಮಿತ ಅಭಿಮಾನ. ದೇಶಾಭಿಮಾನಿಯಾದ ನಾನು ಒನಕೆಯನ್ನು ಗೌರವಿಸುವುದಕ್ಕೆ ಹಿಂಜರಿಯುವೆನೇ? ಆಗಲಿ ಎಂದು ಒಪ್ಪಿಕೊಂಡೆ. ಅಷ್ಟರಲ್ಲಿ ಅವಳ ಪತಿ ಕೃಷ್ಣಮೂರ್ತಿ 'ಒನಕೆಯಲ್ಲಿ ಲಕ್ಷ್ಮಿ, ಗೌರಿ, ಸರಸ್ವತಿ- ಹೀಗೆ ಮೂರೂ ದೇವಿಯರ ಸಾನ್ನಿಧ್ಯವಿರುತ್ತದೆ. ಅದು ಪೂಜಾ ಯೋಗ್ಯವೆನ್ನುವುದರಲ್ಲಿ ಸಂದೇಹವೇ ಇಲ್ಲ' ಎಂದರು. ಗಾಯತ್ರಿ ಧ್ವನಿಗೂಡಿಸಿ 'ನಿಮ್ಮ ಮನೆಯ ಕಾಂಪೌಂಡಿನಲ್ಲಿ ಗುಡಿಯನ್ನು ಕಟ್ಟಿ, ಪ್ರತಿಷ್ಠಾಪಿಸು. 'ಒನಕೆ ದೇವಿ ಅಷ್ಟೋತ್ತರ' ನಾನೇ ಬರೆದು ಕೊಡುತ್ತೇನೆ' ಎಂದಳು. ಬಂದ ಆದಾಯದಲ್ಲಿ ತನಗೂ ಶೇಕಡ ಇಪ್ಪತ್ತು ಭಾಗವೆಂದು ಕರಾರು ಹಾಕುವುದನ್ನು ಮಾತ್ರ ಮರೆಯಲಿಲ್ಲ.

ಬೆಳಗ್ಗಿನಿಂದ ಸಾಯಂಕಾಲದವರೆಗೆ ಹತ್ತಾವತಾರ ತಾಳಿದ ಒನಕೆ ನನ್ನ ತಲೆಯಲ್ಲಿ ಬಲವಾದ ಹುಳವನ್ನೇ ಬಿಟ್ಟು ಅಲ್ಲಾಡಿಸಿತು. ಸಾಯಂಕಾಲ ಟಿವಿ ನೋಡುವಾಗ ಮಸಾಲೆ ಪುಡಿಗಳನ್ನು ಕುಟ್ಟಿ ಪುಡಿ ಮಾಡಿದರೆ ರುಚಿ ಜಾಸ್ತಿ ಎಂದು ಬಿತ್ತರಿಸುತ್ತಿದ್ದ ಜಾಹಿರಾತು ನನ್ನ ಗಮನ ಸೆಳೆಯಿತು. ಮಸಾಲೆ ಪುಡಿಗಳನ್ನು ಒನಕೆಯಲ್ಲಿ ಕುಟ್ಟಿ ಪುಡಿ ಮಾಡಿ, ರುಚಿ ರುಚಿಯಾಗಿ ಉಣ್ಣಬಹುಲ್ಲವೇ ಎನ್ನುವ ಆಲೋಚನೆ ಬಂತು. ಆದರೆ ಕುಟ್ಟುವುದಿರಲಿ, ಸ್ವಲ್ಪ ಜಾಸ್ತಿ ಪುಡಿಗಳನ್ನು 'ಮಿಕ್ಸಿಯ ಗುಂಡಿ ಒತ್ತಿ, ನುಣ್ಣಗೆ ಬೀಸಿದರೂ ಕೈಕಾಲು, ಮಂಡಿ ನೋವು ಬರುವ ವಯಸ್ಸಿನಲ್ಲಿ ಮಸಾಲೆಗಳನ್ನು ಕುಟ್ಟಿ ಪುಡಿ ಮಾಡುವುದು, ರುಚಿಯಾಗಿ ಅಡುಗೆ ಮಾಡುವುದು, ಹೊಟ್ಟೆ ತುಂಬಾ ಉಣ್ಣುವುದು ಎಲ್ಲವೂ ದೂರದ ಮಾತು. ನಾವು ಉಣ್ಣುವುದೆಲ್ಲವೂ 'ಡಯಟ್' ಮತ್ತು 'ಲಿಮಿಟ್'. ಕುಟ್ಟಿ ಪುಡಿ ಮಾಡುವುದಾದರೆ ಯದ್ವಾತದ್ವಾ ಧಾರಾವಾಹಿಗಳನ್ನು ಪ್ರಸಾರ ಮಾಡುವ ನಮ್ಮ ಮನೆಯ ಟಿವಿ ಪರದೆಯನ್ನು ಮಾತ್ರವೇ ಎಂದು ಒಳಗೊಳಗೇ ನಕ್ಕೆ.

ಸದ್ಯದಲ್ಲಿ ಒನಕೆಗೆ ಅರಿಶಿನ-ಕುಂಕುಮ ಹಚ್ಚಿ, ಹೂ ಮುಡಿಸಿ, ಆಯುಧ ಪೂಜೆಗೆ ಇಟ್ಟಿದ್ದೇನೆ. ಈ ಒನಕೆಯನ್ನು ವಂಶಪಾರಂಪರ್ಯವಾದ ಆಸ್ತಿಯೆಂದೂ, ಅದನ್ನು ನಮ್ಮ ವಂಶದವರೇ ಕಾಪಾಡಬೇಕೆಂದು ಅಮೆರಿಕದಲ್ಲಿರುವ ನನ್ನ ಮಗ-ಸೊಸೆಗೆ ಕೊಡೋಣವೆಂದಿದ್ದೇನೆ. ಅಷ್ಟರೊಳಗೆ ದಯವಿಟ್ಟು ನಮ್ಮ ಮನೆಗೆ ಬಂದು ನಮಸ್ಕರಿಸಿ, ಆಶೀರ್ವಾದ ಪಡೆಯಿರಿ.

ಏಕಲವ್ಯ

– ನಾಗರತ್ನ ಚಂದ್ರಶೇಖರ

ಅವನು ಏಕಲವ್ಯ
ಬಾಗಿಲು ತಟ್ಟದೇ ಮಾಳಿಗೆ ಏರದೆ
ಗುರಿಯಿಟ್ಟು ಎಸೆದರೆ ಅಷ್ಟೇ ಸಾಕು
ಸೂರ್ಯನಿಗೂ ಮೊದಲೇ ಅವನ ಸರ್ಕೀಟು

ಮಳೆಗಾಳಿಗೆ ಹೆದರದೆ ಸುರುಳಿಸುತ್ತಿದ
ಕಾಗದದೊಳಗೇನಿದೆ ತಿಳಿಯದೆ
ಸದ್ದಿಲ್ಲದೆ ಸುದ್ದಿಗಳ ಮುಟ್ಟಿಸುತ್ತಾ
ಊರೆಲ್ಲ ಸುದ್ದಿಯ ಕೈಗೆ ತಂದಿಡುವ
ಇವನದೇ ಸುದ್ದಿ ಯಾರೂ ತಿಳಿಯರು!
ಅವನೇ ನಮ್ಮೂರಿನ ಏಕಲವ್ಯ

ಶಾಲೆಯ ಫೀಸಿಗೆ ಅಮ್ಮನ ಕೆಮ್ಮಿಗೆ
ಇವನದೇ ದುಡಿಮೆಯ ಪುಡಿಗಾಸು.
ಯಾತಕ್ಕೂ ಸಾಲದು ಯಾರಿಗೂ ತಾಗದು
ಇದ್ದೀತು ಅವನಿಗೊಂದು ತನ್ನದೇ ಕನಸು.

ತನ್ನದೇ ಮಾಳಿಗೆ ಮನೆಯಲ್ಲಿ ಕೂತು
ಹುಡುಗನೊಬ್ಬ ತನ್ನಂತೆ ಎಸೆಯುವ
ಪತ್ರಿಕೆಯ ಓದುತ್ತ ಕೂಡಬೇಕೆಂಬ
ಬಯಕೆ ಇರಬೇಕು ಅವನಿಗು

ಒಲಂಪಿಕ್ಸ್ ಪದಕ ವೀರ ನೀರಜನಂತೆ
ಜೀವನದ ಗುರಿ ಸಾಧನೆಗೆ
ಶ್ರಮಗಳ ದಾರಿ ತೆರೆದರೆ ಇವನೂ ಆಗಬಲ್ಲ
ದೇಶಕ್ಕೇ ಏಕಲವ್ಯ.

*****

ಪಕ್ಷಾತೀತರಿವರು

– ನಾಗರತ್ನ ಚಂದ್ರಶೇಖರ

ಇವರಿಗೆ ದಿನಕ್ಕೆ ಮುನ್ನೂರು ಐನೂರು ಕೊಟ್ಟರೆ ಸಾಕು
ಪಕ್ಷಭೇದ ಮರೆತು ಕಾಸು ಕೊಟ್ಟು
ಕರೆಸಿಕೊಂಡವರಿಗೇ ಜೈ
ರಸ್ತೆ ರಸ್ತೆ ತಿರುಗುತ, ಕೈ ಮುಗಿಯುತ
ನಡು ಬಗ್ಗಿಸಿ ಮತ ಯಾಚಿಸುವರು
ಯಾರು ಗೆದ್ದರೂ ಸೋತರೂ ಚಿಂತಿಲ್ಲ
ಒಂದಷ್ಟು ದಿನ ಜೇಬು ತುಂಬಿದರೆ ಅಷ್ಟೇ ಸಾಕು.

ಮನೆಮಂದಿ ಹೆಚ್ಚಿದಷ್ಟು ಉಂಟು ಲಾಭ
ತಲೆಗೊಂದು ಗಾಂಧಿನೋಟು ಗ್ಯಾರಂಟಿ
ಲಾರಿಗಟ್ಟಲೆ ಬಂದಿಳಿದಿದೆ ತರತರದ ಗಿಫ್ಟು ಪ್ಯಾಕೆಟ್ಟು
ಹಳೆ ಕುಕ್ಕರು, ಮಿಕ್ಸಿಗಳಿಗೆಲ್ಲ ಟಿಕೆಟ್ಟು
ಬೇಳೆ ಬೆಂದರೆ ಸಾಕು ಖಾರ ಅರೆಯಲು ಮಿಕ್ಸಿ ಕೊಡುವರು
ಹೆಂಡತಿಯರು ಹಿಡಿಯುವರು ಸೌಟು ಹೊಸ ಸೀರೆಯುಟ್ಟು
ಕರೆಂಟು ಕೈಕೊಡದೆ ನೀರು ನಿಲ್ಲದಿದ್ದರೆ
ಸಾಕು ಚುನಾವಣೆ ಮುಗಿಯುವ ತನಕ.

ಮನೆಗೆಲಸದಾಕೆ ಆಗಾಗ ಮಾಯವಾಗಿ ಬಿಡುವಳು
ಚುನಾವಣೆಯಲ್ಲಿ ಕಂಡಂತಾಗುವುದವಳ ಮೋರೆ
ಒಂದಷ್ಟು ಪುಡಿಗಾಸು ಸಿಕ್ಕರೆ ಸಿಗಲಿ
ಎಂದು ಸುಮ್ಮನಿದ್ದುಬಿಡುವೆ
ಪಾಪ ಮತ್ತೆ ಐದು ವರ್ಷ ಕಾಯಬೇಕಲ್ಲ ಅವಳು.

ಗೆದ್ದವರ ಬಾಲ ಹಿಡಿಯುವ ಮರಿ ಪುಢಾರಿಗಳಿಗಂತೂ
ಸ್ವರ್ಗ ಎರಡೇ ಗೇಣು
ಬಿರಿಯಾನಿ, ಬಾಟಲಿಗಳಿಂದಾಚೆಗೂ
ಕಿಸೆಯೊಳಗೆ ಗರಿಗರಿಯಾದ ನೋಟುಗಳು.

ಈ ನೋಟುಗಳಿಗಿಲ್ಲ ಜಾತಿ ಮತ ಬೇಧ ಭಾವ
ನಾಚಿಕೆಬಿಟ್ಟು ಚುನಾವಣೆಯ ಆಚೆ–ಈಚೆ
ಚಲಾವಣೆಯಾಗುತ್ತಿರುವುದೇ ಅವುಗಳ ಧರ್ಮ–ಕರ್ಮ.

*****

ಸತ್ಯಂ ಸುಂದರಂ ಮಿತ್ರತ್ವಂ

- ರಾಧಿಕಾ

ನಾನು ಓದಿದ್ದು ಮೈಸೂರು ಕಿರ್ಲೋಸ್ಕರ್ ಟ್ರಸ್ಟ್ ನ ವತಿಯಿಂದ ನಡೆಯುತ್ತಿದ್ದ ಪ್ರತಿಷ್ಠಿತ ಎಂ.ಕೆ.ಟೀಸ್ ಎಲ್. ಕೆ. ಶಾಲೆಯಲ್ಲಿ. ಹರಿಹರದ ಕಿರ್ಲೋಸ್ಕರ್ ಒಡೆತನದ, ಅವರದ್ದೇ ಉದ್ಯೋಗಿಗಳ ಮಕ್ಕಳ ಸಲುವಾಗಿ ನಿರ್ಮಿತವಾದ ಸುಮಾರು ಒಂದು ಎಕರೆಯಷ್ಟು ವಿಶಾಲವಾದ ಶಾಲೆ ಹಾಗೂ ಆಟದ ಮೈದಾನದ ಆವರಣವದು. 4 ವರ್ಷದ



ಮಕ್ಕಳಿಗಾಗಿ ಇದ್ದ ಶಿಶುವಿಹಾರದಿಂದ ಆರಂಭವಾಗಿ, ಹತ್ತನೆಯ ತರಗತಿಯವರೆಗೂ ಅಲ್ಲಿ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು. ನಾವು ಅದೇ ಒಂದೈವತ್ತು ಗಂಡು ಹಾಗೂ ಹೆಣ್ಣು ಮಕ್ಕಳು ಸಹಪಾಠಿಗಳಾಗಿದ್ದೆವು. ಮಧ್ಯದಲ್ಲಿ ಸರ್ಕಾರಿ ಉದ್ಯೋಗಿಗಳ ಮಕ್ಕಳು, ಬ್ಯಾಂಕ್ ಉದ್ಯೋಗಿಗಳ ಮಕ್ಕಳು, ವ್ಯಾಪಾರಿಗಳ ಮಕ್ಕಳು, ಹೀಗೇ ಬೇರೆ ಬೇರೆ ಮಕ್ಕಳು ಬಂದು ಸೇರುವುದು, ಬಿಡುವುದು ನಡೆದಿರುತ್ತಿತ್ತು. ಒಮ್ಮೆ ಹತ್ತನೆಯ ತರಗತಿಯವರೆಗಿನ ಶಿಕ್ಷಣ ಮುಗಿಸಿ, ನಮ್ಮ ನಮ್ಮ ಉನ್ನತ ಶಿಕ್ಷಣಕ್ಕಾಗಿ ರೆಕ್ಕೆ ಬಿಚ್ಚಿ ಹಾರಿದ ನಾವೆಲ್ಲಾ ಸಹಪಾಠಿಗಳು ಮತ್ತೆ ಸೇರಿದ್ದು 2015 ರಲ್ಲಿ, ಅದೂ ಸಹಪಾಠಿಗಳ ವಾಟ್ಸ್ ಆ್ಯಪ್ ಗೋಡೆಯ ಮೇಲೆ.

ಅಂತೂ ಒಂದು ದಿನ ನಮ್ಮ ಸಹಪಾಠಿಯೊಬ್ಬ ಸಿಂಗಪೂರ್ ನಿಂದ ಬಂದಿದ್ದವನು, ನಮ್ಮಲ್ಲಿ ಬಿಡುವಾಗಿರುವವರನ್ನೆಲ್ಲಾ ಕರೆದು, ಬೆಳಗಿನ ಉಪಹಾರಕ್ಕೆ ಸೇರೋಣ ಎಂದು ನಿಗದಿಪಡಿಸಿದ. ಸರಿಸುಮಾರು ೩೦ ವರ್ಷಗಳ ನಂತರ ನಾವು ೯ ಜನ ಸ್ನೇಹಿತರು ಭೇಟಿಯಾಗಿದ್ದೆವು. ಎಲ್ಲರಲ್ಲೂ ಬಾಹ್ಯದ ಬದಲಾವಣೆಗಳಾಗಿದ್ದವು. ಆದರೆ ಅಂತರಂಗ ಅದೇ ಶುದ್ಧ ಬಾಲ್ಯದ್ದು. ನನಗಿಂತಲೂ ಕುಳ್ಳನಿದ್ದ ನನ್ನ ಸಹಪಾಠಿ, ಈಗ ಐದೂ ಮುಕ್ಕಾಲು ಅಡಿ ಇದ್ದ. "ಏ ನೀನು ಯಾವಾಗ ಬೆಳೆದೆಯೋ..?!" ಎಂದು ನಾನು ಕೇಳಿದಾಗ, ಆತ ಉರುಳಾಡಿ ನಕ್ಕಿದ್ದ.

ಹೀಗೇ ಮತ್ತೊಮ್ಮೆ, ನನ್ನ ಸಹಪಾಠಿಯೊಬ್ಬಳು, ನಾವೆಲ್ಲ ಬಹಳ ಜೀವ ತೇಯ್ದಾಗ, "ನಾನು ಕ್ಯಾನ್ಸರಿನಿಂದ ಪಾರಾಗಿ ಬದುಕಿದ್ದೀನಿ. ಚೂರು ಕರುಣೆ ಇರಲಿ ಕಣ್ರೋ.." ಎಂದು ಗೋಗರೆದಳು. ತಕ್ಷಣ ಪಕ್ಕದಲ್ಲಿದ್ದವ, "ಇಲ್ಲಿ ನಾವು ೩ ಜನ ಫ್ರೆಂಡ್ಸ್ ಸೇರಿ ದೇವರಿಗೆ ಹರಕೆ ಹೊತ್ತು, ಧ್ಲೋ...ಡ್ದ... ತ್ಯಾಗ ಮಾಡಿ, ಬಾಲ್ದಿ ಆಗಿದ್ದಕ್ಕೆ ನಿನಗೆ ಮತ್ತೆ ತಲೆಕೂದಲು ಬೆಳೆದಿದೆ, ಸುಮ್ನಿರೆ" ಅಂದ. ಅವಳಿಗೋ ಸಂತೋಷದ ಕಣ್ಣೀರು.

ಇವು ಬಾಲ್ಯದ ಸ್ನೇಹದ ಕೆಲವು ಝಲಕ್ ಗಳು ಅಷ್ಟೇ...ನಾನು ಹೇಳಬೇಕೆಂದು ಹೊರಟಿರುವ ವಿಷಯದ ಮುನ್ನುಡಿ.

ಬಾಲ್ಯದ ಸ್ನೇಹ ಬಹಳ ಮಜವಾಗಿರುತ್ತದೆ. ಅದೊಂದು ರೀತಿಯ ಅಡ್ಡಾದಿಡ್ಡಿ ಕುಪ್ಪಳಿಸುತ್ತಾ ಹೊರಟ ಕರುಗಳ ದಿಕ್ಕಿಲ್ಲದ ಓಟದಂತೆ. ಯಾರಿಗೂ ಬೆಲೆ ಕೊಡುವುದಿಲ್ಲ. ಏಕೆಂದರೆ ನಮಗೆ ಈ ಮುಗ್ಧ ಸ್ನೇಹದ ಬೆಲೆಯೇ ಗೊತ್ತಿರುವುದಿಲ್ಲ. ಸ್ನೇಹಿತ

ಇದ್ದರೆ ಇರಲಿ, ಇಲ್ಲ ಅಂದ್ರೆ ಕತ್ತೆ ಬಾಲ... ಕುದ್ರೆ ಜುಟ್ಟು... ಅನ್ನೋ ಬಿಂದಾಸ್ ಬುದ್ಧಿ. ಮುಂದಿನ ಯೋಚನೆ ಇರುವುದಿಲ್ಲ. ಖುಷಿಯಿತ್ತಾ.. ಆಟ, ಸಿಟ್ಟು ಬಂತಾ... ಟೂ.. ಟೂ.. ಬಿಟ್ಟ.

ಅದು ಹಾಗೆಯೇ ಇರುತ್ತದೆ. ಹಿಂದಿರುಗಿ ನೋಡಲು ಏನೂ ಇರುವುದಿಲ್ಲ. ಆಗಷ್ಟೇ ಆರಂಭವಾದ ಬದುಕು. ಅಪ್ಪ-ಅಮ್ಮನ ರಕ್ಷೆಯಲ್ಲಿರುವ ಡಬ್ಬದ ಏಡಿಯಾಗಿರುತ್ತೇವೆ. ಡಬ್ಬ ಹತ್ತಿ ನೋಡುವ ಅವಶ್ಯಕತೆ ಅಥವಾ ಬುದ್ಧಿವಂತಿಕೆ ಇರುವುದಿಲ್ಲ. ಡಬ್ಬದಲ್ಲಿಯ ಆ 50-100 ಜನರೇ ವಿಶ್ವ. ಸಾಗರದ ಕಲ್ಪನೆಯೂ ಇರುವುದಿಲ್ಲ.

ಆದರೆ ಬದುಕೆಂಬ ಪ್ರವಾಹದಲ್ಲಿ ನಿಧಾನವಾಗಿ ಮುಂದೆ ಹೊರಟ ನಾವು, ಯಾವಾಗ ಅಪ್ಪ-ಅಮ್ಮನ ಬೆರಳು ಬಿಟ್ಟು ಈಜಲು ಕಲಿತೆವು, ಯಾವಾಗ ನಲವತ್ತರ ವಯಸ್ಸು ದಾಟಿದೆವು, ಯಾವಾಗ ಸಾವಿರ ಸಾವಿರ ಜನರಿರುವ ಸಮಾಜವೆಂಬ ಸಮುದ್ರದ ತೆಕ್ಕೆಗೆ ಬಿದ್ದೆವು ಗೊತ್ತೇ ಆಗುವುದಿಲ್ಲ.

ನಲವತ್ತರ ನಂತರದ ನಮ್ಮ ಬದುಕಲ್ಲಿ ಈ ಬಾಲ್ಯದ ಸ್ನೇಹಿತರು ಎಲ್ಲಕ್ಕಿಂತ ಸಿಹಿಯಾದ ನೆನಪುಗಳನ್ನು ತಂದು ನಿಲ್ಲಿಸುವ ಸಂಬಂಧಿಗಳಾಗಿರುತ್ತಾರೆ. ಆ ಪುಟ್ಟ ಡಬ್ಬ ಕಳೆದುಹೋದ ನಂತರ, ಉಳಿದ ಬೆರಳೆಣಿಕೆಯ ಇವರೇ ಬಹಳ ನಮ್ಮವರಾಗಿರುತ್ತಾರೆ. ಆಸರೆ ಎನ್ನಿಸುತ್ತಾರೆ. ನಮ್ಮೊಳಗಿನ ಆರ್ದ್ರತೆಗಳ ಮೂಲ ಆಧಾರವಾಗಿರುತ್ತಾರೆ. ಇಲ್ಲಿ ಬಹಳ ಮುಕ್ತತೆ, ಸ್ವಾತಂತ್ರ್ಯ, ನಿರ್ಮೋಹವಿರುತ್ತದೆ. ಭೇದ-ಭಾವಗಳಿರುವುದಿಲ್ಲ. ಯಾವುದೇ ಸಾಮಾನ್ಯ, ಬಾಲಿಶ, ಕೇವಲ ವಿಷಯವನ್ನು ಹರಟಬಹುದು. ಮನಗಳಲ್ಲಿ ಪರದೆಗಳು ಬೇಕಿಲ್ಲ. ಕೇಳಲು ಕಾತುರರಿರುತ್ತಾರೆ. ಸಮಯ ನೀಡುತ್ತಾರೆ. ಸುಖ-ದುಃಖ ಹಂಚಿಕೊಂಡಾಗ ಅರಿತುಕೊಳ್ಳುತ್ತಾರೆ, ಮಥಿಸುತ್ತಾರೆ, ಸಮಾಧಾನ ಹೇಳುತ್ತಾರೆ. ವಿಪರೀತಗಳು ಇಲ್ಲವೆಂದೇನಿಲ್ಲ. ಸಿಟ್ಟು, ರೋಷ, ತಪ್ಪು ತಿಳುವಳಿಕೆ, ಚಾಡಿ, ಶರಂಪರ ಜಗಳ.. ಧಡಂ.. ಧುಡುಂ.. ಕೋಂಯ್.. ಕೊಟರ್...ಇರುತ್ತವೆ. ಆದರೆ, ಕ್ಷಮಿಸಿ ಅಪ್ಪುವ ನಿರ್ಭಿಡೆಯಿರುತ್ತದೆ. ನಾವು ಗಳಿಸುವ ಅಮೂಲ್ಯ ಆಕರಣೆಗಳಿಗೆ ಕಾಲದ ಮಿತಿಯಿರುತ್ತದೆ. ಸ್ನೇಹ, ಬಾಲ್ಯದ ಸಿಹಿಯನ್ನು ಕಾಲದ ಎಲ್ಲೆ ಮೀರಿ ತನ್ನಲ್ಲಿ ಅಡಗಿಸಿಕೊಂಡು, ಬೆಲೆ ಕಟ್ಟಲಾಗದ ಚಿಪ್ಪಿನೊಳಗಿನ ಮುತ್ತಾಗಿಸುತ್ತದೆ.

ಯಾರಿಗೂ ಯಾರೊಡನೆಯೂ ರಕ್ತ ಸಂಬಂಧವಿರುವುದಿಲ್ಲ. ಋಣಾನುಬಂಧ ನಮ್ಮನ್ನು ಈ ಜನ್ಮಕ್ಕೆ ಜೋಡಿಸಿರುತ್ತದೆ. ಆಯಸ್ಸಿನ ನಲವತ್ತರ ನಂತರ ಮುಕ್ತ ಮನದ ಸ್ನೇಹಿತರು ಸಿಗುವುದು ಕಡಿಮೆ. ಕಾರ್ಯಕಾರಣ ಗೆಳೆತನವೇ ಹೆಚ್ಚು. ಹತ್ತರಲ್ಲಿ ಒಬ್ಬರು ಆತ್ಮೀಯರಾಗುತ್ತಾರೆ. ಅಹಂಗೆ ಏನಾದರೂ ಕೊಂಚ ಅಡ್ಡಿಯಾದರೆ, ಒಂದು ಎಂದಿನ ಮುಂಜಾನೆ ನೋವಿಲ್ಲದೆ ಅವರನ್ನು ಪಟ್ಟನೆ ಕೈ ಬಿಟ್ಟಿರುತ್ತೇವೆ.

ಬದುಕಿನ ಈ ಪ್ರವಾಸದಲ್ಲಿ ಯಾರ ನಿಲ್ದಾಣ ಯಾವಾಗ ಬರುವುದೋ ಗೊತ್ತಿಲ್ಲ. ಬಾಲ್ಯದಿಂದ ಜೊತೆಯಿರುವ ಎಲ್ಲರೂ ಮನಸ್ಸಿನ ತಕರಾರುಗಳಿಗೆ, ಕಹಿಗಳಿಗೆ, ಭಿನ್ನಾಭಿಪ್ರಾಯಗಳಿಗೆ ಜಗ್ಗುವುದು ಬೇಡ. ಎಲ್ಲಾ ಆಸನಗಳಲ್ಲೂ ಸ್ನೇಹವೇ ವಿರಾಜಿಸಲಿ. ಒಂದಂತೂ ನಿಜ, ನಾವು ಸ್ನೇಹದಲ್ಲಿ ನಿಸ್ವಾರ್ಥರಾದಷ್ಟೂ, ಅಷ್ಟೇ ನಿಸ್ವಾರ್ಥ ಮಿತ್ರರು ಸಿಗುತ್ತಾ ಹೋಗುತ್ತಾರೆ. ಈ ಸ್ನೇಹಿತರ ಕಟ್ಟೆ ಎಂಬುದು, ಬದುಕಿನ ನೊಗವನ್ನು ಒಂದರೆಕ್ಷಣ ಕಳಚಿ ಕೂಡುವ ನೆಮ್ಮದಿಯ ತಾಣ.

ಸೈಕ್ಲಿಂಗ್ ಹವ್ಯಾಸ

– ಗುರುರಾಜ ಶಾಸ್ತ್ರಿ

ಇಸವಿ 2019, ಇಂಜಿನಿಯರಿಂಗ್ ಸೇರಿದ್ದ ಅಣ್ಣನ ಮಗ ಪ್ರಣವ ಅವನಪ್ಪನಿಗೆ ಸೈಕಲ್ ಕೊಡಿಸು ಎಂದು ಪೀಡಿಸತೊಡಗಿದ. ಈಗಿನ ಪೀಳಿಗೆಯವರು ಹೈಸ್ಕೂಲಿನಲ್ಲೇ ಸ್ಕೂಟರ್, ಬೈಕ್ ಬೇಕು ಎನ್ನುವಾಗ, ನನಗೆ ಪೆಟ್ರೋಲ್ ಸುಟ್ಟು ಭೂಮಿ ಹಾಳುಮಾಡಲು ಇಷ್ಟವಿಲ್ಲ ಹಾಗಾಗಿ ಸೈಕಲ್ ಓಡಿಸುತ್ತೇನೆ ಎಂದ ಪ್ರಣವ. ಮೊದಲೇ ಪಕ್ಕಾ ಪರಿಸರ ಪ್ರೇಮಿಯಾದ ನನ್ನಣ್ಣನಿಗೆ ಮಗನು ಕೊಟ್ಟ ಕಾರಣ ಕೇಳಿ ಬಹಳ ಸಂತೋಷವಾಯಿತು. ಅಂತರ್ಜಾಲದಲ್ಲಿ ಸಾಕಷ್ಟು ಸೈಕಲ್‌ಗಳ ಬಗ್ಗೆ



ಮಾಹಿತಿ ಹುಡುಕಿ, ಹಲವು ಸೈಕಲ್ ಅಂಗಡಿಗಳಿಗೆ ಭೇಟಿಕೊಟ್ಟು ಕಡೆಗೆ ಕ್ಯಾನನ್‌ಡೇಲ್ ಎಂಬ ಕಂಪನಿಯ ಸೈಕಲ್ 26 ಸಾವಿರ ರೂಪಾಯಿ ನೀಡಿ ಖರೀದಿಸಿದರು. ಕ್ಯಾನನ್‌ಡೇಲ್, ಸೈಕಲ್ ತಯಾರಿಸುವ ವಿಶ್ವದ ಐದು ಅಗ್ರ ಕಂಪನಿಗಳಲ್ಲಿ ಒಂದು. ಈ ಸೈಕಲ್ ಮೂಲ ಬೆಲೆ 38 ಸಾವಿರ, ಆದರೆ ಅವರ ಹೊಸ ಮಾಡಲ್ ಮಾರುಕಟ್ಟೆಗೆ ಬರುತ್ತಿದ್ದರಿಂದ ಇದನ್ನು 26 ಸಾವಿರ ರೂಪಾಯಿಗೆ ನೀಡಿದರು. ಸೈಕಲ್ ಖರೀದಿಸುವ ಎರಡು ತಿಂಗಳು ಮುಂಚೆ ಅಣ್ಣ ತನ್ನ ಕಛೇರಿಯ ಕೆಲಸದ ಮೇಲೆ ಅಮೇರಿಕಾಗೆ ಹೋಗಿದ್ದು ಅಲ್ಲಿಂದ ಸೈಕ್ಲಿಂಗ್ ಹೆಲ್ಮೆಟ್ ಕೂಡಾ ತಂದಿದ್ದ.

ಮನೆಯಲ್ಲೇ ಸೈಕಲ್‌ಗೆ ಪೂಜೆ ಮಾಡಿ ಅಣ್ಣನ ಮಗ ಸೈಕ್ಲಿಂಗ್‌ಗೆ ಸಹಾಯವಾಗುವಂತಹ ಬಣ್ಣಬಣ್ಣದ ಉಡುಪು ಧರಿಸಿ, ಹೆಲ್ಮೆಟ್ ಹಾಕಿಕೊಂಡು ರಸ್ತೆಯಲ್ಲಿ ಆಕರ್ಷಕವಾದ ಸೈಕಲ್ ಹೊಡೆಯುತ್ತಾ ಹೋಗುವುದನ್ನು ನೋಡಿದರೆ ನಮಗೇನೋ

ಸಂತೋಷ. ಸೈಕಲ್‌ಗಳ ಕಳ್ಳತನ ಇತ್ತೀಚೆಗೆ ಹೆಚ್ಚಾಗಿದ್ದು ಸೈಕ್ಲಿಂಗ್ ಮುಗಿದ ಮೇಲೆ ಸೈಕಲ್ಲನ್ನು ಮನೆಯ ಒಳಗೇ ಇಡಲು ಹೇಳಿದೆವು. ಒಂದೆರೆಡು ಸಲ ಕಾಲೇಜಿಗೆ, ಮತ್ತೊಂದೆರೆಡು ಸಲ ಮೋಜಿಗಾಗಿ ಹಾಗೇ ಜಯನಗರದ ತನಕ (ಅಂದರೆ ಸುಮಾರು 12 ಕಿಲೋಮೀಟರ್ ಒಟ್ಟು) ಸೈಕ್ಲಿಂಗ್ ಮಾಡಿದ ಅಣ್ಣನ ಮಗನ ಸೈಕ್ಲಿಂಗ್ ಆಸಕ್ತಿ ಅಲ್ಲಿಗೆ ಮುಗಿಯಿತು. ಮುಂದೆ ಎರಡು ವರ್ಷ ನಾವು ಸೈಕಲ್ ಹೊರಗೆ ತೆಗೆದದ್ದು ದಸರಾದ ಆಯುಧ ಪೂಜೆ ದಿನ ಮಾತ್ರ. ಈ ರೀತಿ ಯಾವುದೋ ಒಂದು ವಿಷಯದ ಬಗ್ಗೆ ಅತಿಯಾದ ಆಸಕ್ತಿ ತೋರಿಸಿ ಅದರ ಬಗ್ಗೆ ಅತಿ ಬೇಗ ವೈರಾಗ್ಯ ಹೊಂದುವುದು ಅಣ್ಣನ ಮಗನಿಗೆ ಹೊಸದೇನಲ್ಲ. ನಾನು ಮತ್ತು ನನ್ನ ಅಣ್ಣನೂ ಕೂಡ ಇದಕ್ಕೆ ಹೊರತಲ್ಲ.

ಆಗಸ್ಟ್ 2021ರಲ್ಲಿ ನನ್ನ ಗೆಳೆಯರಿಬ್ಬರು ಸೈಕ್ಲಿಂಗ್ ಆರಂಭಿಸಿದರು. ತಾವು ಎಷ್ಟು ದೂರ ಸೈಕಲ್ ಹೊಡೆದರು, ಎಷ್ಟು ಸಮಯ ತೆಗೆದುಕೊಂಡಿತು, ಎಷ್ಟು ಎತ್ತರಕ್ಕೆ ಇಂದು ಸೈಕಲ್ ಹೊಡೆದಿದ್ದಾರೆ ಮತ್ತು ಅವರು ಇಂದು ಸೈಕ್ಲಿಂಗ್ ಮಾಡಿದ ಗೂಗಲ್ ನಕ್ಷೆ, ಈ ಎಲ್ಲಾ ವಿಷಯಗಳನ್ನು ಸ್ಟ್ರಾವಾ ಎಂಬ ಮೊಬೈಲಿನ ತಂತ್ರಾಂಶ ಬಳಸಿ ಅದರಲ್ಲಿ ಬಂದ ರಿಪೋರ್ಟ್‌ನ್ನು ಫೇಸ್ಬುಕ್ ಮತ್ತು ವಾಟ್ಸಾಪಿನಲ್ಲಿ ಹಂಚಿಕೊಂಡರು.

ಮೊದಲ ದಿನ ಐದು ಕಿಲೋಮೀಟರ್ ಓಡಿಸಿದ್ದ ಅವರು ಆಮೇಲೆ ಒಂದು ದಿನಕ್ಕೆ 50 ಕಿಲೋಮೀಟರ್ ವರೆಗೆ ಸೈಕಲ್ ಓಡಿಸಿದ್ದರ ರಿಪೋರ್ಟ್ ನೋಡಿ ನಾನೂ ಪ್ರೇರಣೆಗೊಂಡು ಮನೆಯಲ್ಲಿದ್ದ ಸೈಕಲ್ ಟೈರ್‌ಗೆ ಗಾಳಿ ಹಾಕಿಸಿ ಸೈಕ್ಲಿಂಗ್ ಆರಂಭಿಸಿಯೇ ಬಿಟ್ಟೆ. ಭುಜಂಗಯ್ಯನ ದಶಾವತಾರ ಎಂಬಂತೆ ಬ್ಯಾಂಕ್ ಕೆಲಸ ಬಿಟ್ಟ ಮೇಲೆ ಈ ಸೈಕ್ಲಿಂಗ್ ನನ್ನ ಆರನೇ ಅವತಾರ. ನಮ್ಮ ವೇದಿಕೆಯ ಹಿರಿಯ ಸದಸ್ಯರಾದ ಶ್ರೀ ಗುರುಪ್ರಸಾದ್ ಅವರು ತಮ್ಮ ಎಪ್ಪತ್ತನೇ ವಯಸ್ಸಿನಲ್ಲಿ ದಿನಕ್ಕೆ 15ರಿಂದ 20 ಕಿಲೋಮೀಟರ್ ಸೈಕಲ್ ಹೊಡೆಯುತ್ತಿದ್ದದ್ದು ನೋಡಿ, ನಾನೂ ಸೈಕ್ಲಿಂಗ್ ಮಾಡಬಹುದು ಎಂಬ ಹುಮ್ಮಸ್ಸು ಬಂದಿತ್ತು. ಗುರುಪ್ರಸಾದ್ ಅವರ ಪ್ರೇರಣಾ ನುಡಿಗಳು ನನ್ನ ಹೊಸ ಹವ್ಯಾಸಕ್ಕೆ ಸಹಾಯವಾಯಿತು. ತಾವು ಒಂದೆರೆಡು ಸಲ ತಮ್ಮ ಪರಿಚಯದವರ ಮನೆಗೆ ಸೈಕಲ್ ಓಡಿಸಿಕೊಂಡು ಹೋದಾಗ ಅವರೆಲ್ಲಾ ಆಶ್ಚರ್ಯಪಟ್ಟಿದ್ದರು ಎಂದು ಗುರುಪ್ರಸಾದ್ ಹೇಳಿದ್ದು ನನ್ನ ಮೆದುಳಿನಲ್ಲಿ ಹೊಸ ಹುಳ ಬಿಟ್ಟಂತಾಗಿತ್ತು.

ಮೊದಲ ದಿನ 3 ಕಿಲೋಮೀಟರ್ ಓಡಿಸಿ, ಕ್ರಮೇಣ ಹೆಚ್ಚಿಸಿಕೊಳ್ಳುತ್ತಾ ಈಗ ದಿನಕ್ಕೆ 35 ಕಿಲೋಮೀಟರ್ ಏನೂ ಸುಸ್ತಾಗದೆ ಸೈಕಲ್ ಹೊಡೆಯುವ ಮಟ್ಟಕ್ಕೆ ಬಂದಿದ್ದೇನೆ. ಈ ವಯಸ್ಸಿನಲ್ಲಿ ಸೈಕಲ್ ಹೊಡೆದರೆ ಮಂಡಿ ಮತ್ತು ಕಾಲುಗಳ ಮೇಲೆ ಹೆಚ್ಚು ಒತ್ತಡ ಬೀಳುತ್ತದೆ ಎಂದು ನಮ್ಮ ರವೀಂದ್ರ ಸರ್ ಹೇಳಿದಾಗ, ಒಂದು ಆರ್ತೋಪೆಡಿಕ್ ವೈದ್ಯರ ಬಳಿ ವಿಚಾರಿಸಿದೆ. ಈಗ ಸೈಕಲ್‌ಗಳ ವಿನ್ಯಾಸ ಬಹಳ ಬದಲಾಗಿದೆ. ಮಂಡಿಗಳ ಮೇಲೆ ಹೆಚ್ಚು ಒತ್ತಡ ಬೀರುವುದಿಲ್ಲ, ಅದಲ್ಲದೇ ಬೆಂಗಳೂರಿನ ಸಮವಾದ ರಸ್ತೆಗಳಲ್ಲಿ ಸೈಕಲ್ ಹೊಡೆದರೆ ತೊಂದರೆ ಏನಿಲ್ಲ ಮತ್ತು ಆದಷ್ಟು ಸೈಕ್ಲಿಂಗ್ ಮಾಡುತ್ತಾ ಬೆಟ್ಟ ಹತ್ತುವುದೆಲ್ಲಾ ಮಾಡಕೂಡದು ಎಂದು ತಿಳಿಸಿದರು. ಏಷ್ಯನ್ ಗೇಮ್ಸ್‌ನ ಸೈಕ್ಲಿಂಗ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ ದೆಹಲಿಯಲ್ಲಿ ನೆಲೆಸಿರುವ ನನ್ನ ಗೆಳತಿ ಜಾಸ್ಮೀನ್ ಕೂಡಾ ಅದೇ ಸಲಹೆ ನೀಡಿದಳು. ಬೆಳಗ್ಗೆ 6 ರಿಂದ 7 ಗಂಟೆವರೆಗೆ ಯೋಗಾಸನ, ನಂತರ 2 ಗಂಟೆಗಳ ಸೈಕ್ಲಿಂಗ್ ಆರಂಭಿಸಿಯೇಬಿಟ್ಟೆ. ಸೈಕ್ಲಿಂಗ್ ಮಾಡುವ ವೈಜ್ಞಾನಿಕ ರೀತಿ ಮತ್ತು ಕೂರುವ ಸೀಟು ಯಾವ ಎತ್ತರದಲ್ಲಿ ಇರಬೇಕು ಎಂಬುದನ್ನೆಲ್ಲಾ ನಮ್ಮ ಬ್ಯಾಂಕಿನಿಂದ ಇತ್ತೀಚೆಗೆ ನಿವೃತ್ತಿಯಾದ ಗೆಳೆಯ ರಾಮ್

ನಾರಾಯಣ್ ತಿಳಿಸಿಕೊಟ್ಟರು. 60 ವರ್ಷದ ರಾಮ್ ಮತ್ತು 58 ವರ್ಷದ ಅವರ ಪತ್ನಿ ಈಗ 3 ವರ್ಷಕ್ಕೆ ಮುಂಚೆ ಸೈಕ್ಲಿಂಗ್ ಪ್ರಾರಂಭಿಸಿ 3 ಸಲ ಸೈಕಲ್ಲಿನಲ್ಲೇ ಮೈಸೂರಿಗೆ ಹೋಗಿ ಬಂದಿದ್ದಾರೆ. ನಮ್ಮ ಬ್ಯಾಂಕಿನ ಹಲವರಿಗೆ ಈ ಜೋಡಿ ಸೈಕ್ಲಿಂಗ್ ಮಾಡಲು ಪ್ರೇರಣೆ ನೀಡಿದೆ.

ಈಗ ಮುಖ್ಯವಾದ ವಿಷಯಕ್ಕೆ ಬರೋಣ. ಗುರುಪ್ರಸಾದ್ ಅವರು ನನ್ನ ಮೆದುಳಿಗೆ ಬಿಟ್ಟಿದ್ದ ಹುಳದ ನೆನಪಾಯಿತು. ಭಾನುವಾರಗಳಂದು ನಾನೂ ನನ್ನ ಬಳಗದವರ, ಗೆಳೆಯರ ಮನೆಗಳಿಗೆ ಸೈಕಲ್ಲಿನಲ್ಲಿ ಹೋಗಲು ನಿರ್ಧರಿಸಿದೆ. ಹಾಗೇ ಹೋದಾಗ ನನ್ನ ಸೈಕ್ಲಿಂಗ್ ಹೆಲ್ಮೆಟ್ ಧರಿಸಿಯೇ ಅವರೊಂದಿಗೆ ಸ್ವಯಂ ಅಂದರೆ ಸೆಲ್ಫಿ ಫೋಟೋ ತೆಗೆದುಕೊಂಡು SMILES ON MILES ಎಂಬ ಶೀರ್ಷಿಕೆಯಡಿ ನನ್ನ ಫೇಸ್‌ಬುಕ್ಕಿನಲ್ಲಿ ಹಂಚಿಕೊಳ್ಳಲು ಆರಂಭಿಸಿದೆ. ಆರಂಭದಲ್ಲಿ ಕೆಲವು ಗೆಳೆಯರಿಗೆ ಇದು ಹುಚ್ಚು ಅನಿಸಿದರೂ ಇತ್ತೀಚೆಗೆ ನನ್ನ ಈ ಸೆಲ್ಫಿ ಫೋಟೋಗಳು ಸಾಕಷ್ಟು ಹೊಗಳಿಕೆಗಳನ್ನೂ ಗಳಿಸಿವೆ. ಹಾಗೆಯೇ ಎಷ್ಟೋ ವರ್ಷಗಳಿಂದ ಮನೆಗಳಿಗೆ ಭೇಟಿಯೇ ನೀಡದೆ ಕೇವಲ ಮದುವೆ, ಉಪನಯನ ಕಾರ್ಯಕ್ರಮಗಳಲ್ಲಿ ಭೇಟಿಯಾಗುತ್ತಿದ್ದಂತಹ ಹಲವರ ಮನೆಗಳಿಗೆ ಹೋಗುವ ಪಟ್ಟಿ ಈಗಾಗಲೇ ಸಿದ್ಧವಾಗಿದೆ.

ಅಕ್ಟೋಬರ್ 2 ರಂದು ಒಟ್ಟು 1000 ಕಿಲೋಮೀಟರ್ ಸೈಕ್ಲಿಂಗ್ ಮುಗಿಸಿದ್ದೇನೆ ಮತ್ತು ಸುಮಾರು 20 ಪರಿಚಯದವರ ಮನೆಗಳಿಗೆ ಭೇಟಿ ನೀಡಿದ್ದೇನೆ.

ವೇದಿಕೆಯ ಸದಸ್ಯರ ಮನೆಗಳಿಗೂ ಭೇಟಿ ನೀಡುವ ಆಸಕ್ತಿ ಇದೆ. ಈಗಾಗಲೇ ನಮ್ಮ ಇಬ್ಬರು ಸದಸ್ಯರು ಶ್ರೀ ಶಂಕರ್ ರಾವ್ ಮತ್ತು ಗುರುರಾಜ ಎಸ್ ಅವರ ಮನೆಗಳಿಗೆ ಭೇಟಿ ನೀಡಿದ್ದಾಗಿದೆ. ಇವರುಗಳ ಮನೆಯಲ್ಲಿ ನಾನು ಕಳೆದ ಸುಮಾರು ಇಪ್ಪತ್ತು ನಿಮಿಷಗಳು ನನ್ನ ಜೀವನದ ಅತಿ ಸಂತೋಷದ ಸಮಯಗಳಲ್ಲೊಂದು ಎಂದರೆ ತಪ್ಪೇನಿಲ್ಲ. ಮನೆಗೆ ಬಂದಾಗ ಒಂದು ಲೋಟ ಕಾಫಿ ಬಿಟ್ಟು ಬೇರೇನೂ ತೆಗೆದುಕೊಳ್ಳುವುದಿಲ್ಲ. ಏನಾದರೂ ತಿಂದರೆ ಮತ್ತೆ ಮನೆಗೆ ಸೈಕಲ್ ಹೊಡೆದುಕೊಂಡು ಬರುವುದು ಕಷ್ಟವಾಗುತ್ತದೆ. ನಿಮ್ಮ ಮನೆಗೂ ನಾನು ಸೈಕ್ಲಿಂಗ್ ಮಾಡಿ ಬರಬೇಕೆ, ನೀವು ನನ್ನೊಂದಿಗೆ ಬೆಳಗಿನ ಕಾಫಿ ಸವಿದು ಸೆಲ್ಫಿ ಫೋಟೋ ಕ್ಲಿಕ್ಕಿಸಲು ಇಚ್ಚಿಸುವಿರಾ, ನಿಮ್ಮ ಮನೆಯ ಲೊಕೇಶನ್ ನನ್ನೊಂದಿಗೆ ಹಂಚಿಕೊಳ್ಳಿ. ಮುಂಗಡವಾಗಿ ತಿಳಿಸಿಯೇ ಬರುತ್ತೇನೆ, ಹೆದರುವುದು ಬೇಡ.

****

“ಢಂಢಂ... ಟಢಂ... ಟಕ್ಕೆ...!”

- ಎನ್.ವಿ.ರಘುರಾಂ

ಢಂಢಂ... ಟಢಂ... ಟಕ್ಕೆ...!

ಈ ಶಬ್ದ ಬಂತೆಂದರೆ ಗೊತ್ತು ಇದು ಹುಲಿ ವೇಷದ ವಾದ್ಯದ ಶಬ್ದ ಎಂದು! ಈ ದಿನ ವಿಜಯ ದಶಮಿ. ಎಂಥ ಸಂಭ್ರಮ!

ಬೆಳಗ್ಗೆ ಎದ್ದು ಅಮ್ಮ ಕರೆದಿಟ್ಟಿದ್ದ ನೊರೆ ಹಾಲಿಗೆ ಸ್ವಲ್ಪ ಡಿಕಾಕ್ಷನ್ ಬೆರೆಸಿ ಬಿಳಿ ಕಾಫಿ ಕುಡಿಯುವ ವೇಳೆಗೆ ಕೇಳಿಸಿತು ಪಕ್ಕದ ಮಾವನ ಮನೆಯಿಂದ ಢಂಢಂ... ಟಢಂ... ಟಕ್ಕೆ! ಹುಲಿ ವೇಷದ ವಾದ್ಯದ ಶಬ್ದ.

ಊರಿನ ಹೊರ ಬಡಾವಣೆ ಕುರುವಳ್ಳಿಯಲ್ಲಿದ್ದ ರಾಮ, ಹುಲಿ ವೇಷ ಧರಿಸಿ ನಮ್ಮ ಮನೆ ಪಕ್ಕದಲ್ಲೇ ಇದ್ದ ನಮ್ಮ ಮಾವನ ಮನೆ ಭೇಟಿ ಮುಗಿಸಿ, ದೊಡ್ಡಯ್ಯನೋರು ಎಂದು ಹೇಳುತ್ತಾ ನಮ್ಮ ಮನೆಗೆ ಬೆಳಗ್ಗೆ ಆರುವರೆಗೆ ಹಾಜರ್. ಈ ರಾಮ ಕಂಟ್ರಾಕ್ಟರಾದ ನಮ್ಮ ಮಾವನ ಬಳಿ ಕೆಲಸ ಮಾಡುತ್ತಿದ್ದ. ಸಾಹುಕಾರ್ರು ಎಂದು ಮಾವನ ಮನೆಯಿಂದ ಆಶೀರ್ವಾದ ಪಡೆದು ನಮ್ಮ ಮನೆಗೆ ಬಂದು ಅಪ್ಪನ ಕಾಲಿಗೆ ಬಿದ್ದು ಕುಣಿಯಲು ಪ್ರಾರಂಭ ಮಾಡಿದರೆ ದಸರಾ ಆರಂಭ ಆಯಿತು ಎಂದರ್ಥ! ಒಂದು ರೂಪಾಯಿಯ ಒಂದು ನೋಟು ಕೊಟ್ಟರೆ ತಲೆ ಅಲ್ಲಾಡಿಸುತ್ತಾ ಮತ್ತೆ ಜೋರಾಗುತ್ತಿತ್ತು ವಾದ್ಯ. ಎರಡು ನಿಮಿಷದ ನಂತರ ಇನ್ನೊಂದು ರೂಪಾಯಿ ನೋಟು ಕೊಟ್ಟರೆ ಮತ್ತೊಮ್ಮೆ ಸಲಾಂ ಹಾಕಿ ಹೊರಡುತ್ತಿದ್ದ!

ಹೌದು! ನಮ್ಮೂರು ತೀರ್ಥಹಳ್ಳಿಯ ದಸರಾ ಹಬ್ಬದಲ್ಲಿ ವಿಜಯದಶಮಿ ದಿನ ಬರುವ ಹುಲಿ ವೇಷ ಬಹಳ ವಿಶಿಷ್ಟ. ದಸರಾ ಎಂದರೆ ಹುಲಿ ವೇಷದ ಸಂಭ್ರಮ ನಮಗೆಲ್ಲ. ಮೊದಲು ಮನೆಯಲ್ಲಿ ಏನಾದರೂ ತೊಂದರೆ ಆದರೆ ದಸರಾದಲ್ಲಿ ಹುಲಿ ವೇಷ ಹಾಕಿ ದೇವರ ಸೇವೆ ಮಾಡುತ್ತೇನೆ ಎಂದು ಹರಕೆ ಮಾಡಿಕೊಳ್ಳುತ್ತಿದ್ದರಂತೆ. ಹುಲಿಗಳು ರಾತ್ರಿ ಎಲ್ಲ ಬಣ್ಣ ಹಚ್ಚಿಕೊಂಡು ಬಣ್ಣ ಒಣಗಲು ಕಾಯಬೇಕಂತೆ, ಆಗ ಬಾಳೆ ಎಲೆ ಮೇಲೆ ಬೇಕಾದರೆ ಮಲಗಬಹುದಿತ್ತು ಎಂದು ಹೇಳುವುದಿತ್ತು. ಬೆಳಿಗ್ಗೆ ಮುಂಚೆ ತೀರ್ಥಹಳ್ಳಿ ಆದಿದೇವತೆ ಶ್ರೀ ರಾಮೇಶ್ವರ ದೇವಸ್ಥಾನದ ಮುಂದೆ ಕುಣಿದು, ಹರಕೆ ಸಲ್ಲಿಸಿ, ಅಲ್ಲಿಂದ ತಮ್ಮ ಯಜಮಾನರ ಮನೆಯ ಹತ್ತಿರ ಹೋಗಿ ಅವರ ಆಶೀರ್ವಾದ ಪಡೆದು, ನಂತರ ಊರೆಲ್ಲ ಪ್ರದಕ್ಷಿಣೆ ಹೋಗುವ ಪದ್ದತಿ ಬಹಳ ವರುಷಗಳಿಂದ ನಡೆದು ಬಂದ ಪದ್ಧತಿ.

ಅಪ್ಪ, ಮಾವ ಊರಿಗೇ ಹಳಬರು. ಹಾಗಾಗಿ ಬಹುತೇಕ ಹುಲಿಗಳು ನಮ್ಮ ಮನೆಗೆ ಬರುತ್ತಿದ್ದವು. ಎಲ್ಲಾ ಹುಲಿಗಳು ಮುಂದುಗಡೆ ಅಂಗಳದಲ್ಲಿ ಅಥವಾ ವರಾಂಡದಲ್ಲಿ ಕುಣಿದು ಹೋದರೆ, ಬೆಳಿಗ್ಗೆ ಸುಮಾರು ಎಂಟೂವರೆ ಹೊತ್ತಿಗೆ ಪ್ರತಿ ವರ್ಷ ಹುಲಿವೇಷ ಧರಿಸಿ ಬರುತ್ತಿದ್ದ ಕಾಡಶೆಟ್ಟರಿಗೆ ಮಾತ್ರ ನಮ್ಮ ಮನೆಯ ಹಾಲಿಗೆ ಪ್ರವೇಶವಿತ್ತು. ನೆಲದ ಮೇಲೆ ಒಂದು ರೂಪಾಯಿ ನೋಟು ಇಟ್ಟರೆ, ಕಾಡಶೆಟ್ಟರು ಅದರ ಸುತ್ತ ಕುಣಿದು, ಅದನ್ನು ಕ್ಷಣ ಮಾತ್ರದಲಿ ಬಗ್ಗಿ ತುಟಿಯ ಮಧ್ಯೆ ಸಿಗಿಸಿಕೊಂಡು ಎತ್ತಿಬಿಡುತ್ತಿದ್ದರು. ಆ ಸಮಯದಲ್ಲಿ ಜೋರಾಗಿ ಬಾರಿಸುವ "ಢಂ ಢಂ ಟ ಢಂ..." ಬಹಳ ಹೊತ್ತು ಕಿವಿಯಲ್ಲಿ ಕೊಂಯಿಗೊಡುತ್ತಿತ್ತು. ಇವರೊಬ್ಬರಿಗೆ ಮಾತ್ರ ಬಹುಶಃ ಎರಡು ರೂಪಾಯಿಯ ಎರಡು ನೋಟು

ಕೊಡುತ್ತಿದ್ದುದು! ನೆಲದ ಮೇಲೆ ಒಂದು ನಿಂಬೆ ಹಣ್ಣು ಇಟ್ಟರೆ ಆಗ ಹುಲಿ ಕುಣಿತಕ್ಕೆ ಒಂದು ಮಜ ಬರುವುದು. ಆ ನಿಂಬೆ ಹಣ್ಣಿನ ಸುತ್ತಾ ಕುಣಿಯುತ್ತಾ, ಯಾವುದೋ ದೊಡ್ಡ ಬೇಟೆಯೊಂದನ್ನು ಹೊಂಚುಹಾಕಿ ಹಿಡಿಯುವಂತೆ ಅಭಿನಯಿಸುತ್ತಾ, ಚಕ್ಕನೆ ಬಗ್ಗಿ ಭುಜದಲ್ಲಿ ಚಚ್ಚಿದರೆ, ನಿಂಬೆ ಹಣ್ಣು ಪಚಕ್ ಎಂದು ಒಡೆದು ಆಷ್ಟು ದೂರ ರಸ ಚಿಮ್ಮುತ್ತೆ. ಆಗ ಹುಲಿಯ ಮುಖದಲ್ಲಿ ವಿಜಯದ ನಗು! ಆದರೆ ನಿಂಬೆ ಹಣ್ಣು ಒಡೆದರೆ ಐದು ರೂಪಾಯಿಯ ನೋಟು ಕೊಡಬೇಕು. ತೆಳ್ಳಗೆ ಇದ್ದ ಕಾಡುಶೆಟ್ಟರು ಹುಲಿ ವೇಷ ಧರಿಸಿ ಬಂದರೆ ಹುಲಿಯ ಪರಕಾಯ ಪ್ರವೇಶ ಮಾಡಿಬಿಡುತ್ತಿದ್ದರು. ಇವರು ಹುಲಿ ವೇಷ ಹಾಕದ ದಸರಾ ಇರುವುದು ಸಾಧ್ಯವೇ?

ಇತ್ತ ಸ್ನಾನ ಮಾಡಿ ಉಬ್ಬಿನ ರೊಟ್ಟಿಗೆ ಎಣ್ಣೆ ಚಟ್ನಿಪುಡಿ ಹಾಕಿಕೊಂಡು ತಿನ್ನುತ್ತಿರುವಾಗ ದೂರದಲ್ಲಿ ಎಲ್ಲೋ ಮತ್ತೆ ಹುಲಿ ವೇಷದ ವಾದ್ಯದ ಶಬ್ದ. ಗಬಗಬನೆ ತಿಂದು ಗೇಟ್ ಬಳಿ ಬರುವುದಕ್ಕೂ ಹುಲಿ ನಮ್ಮ ಮನೆ ಹತ್ತಿರವೇ ಇದ್ದ ಕೊಪ್ಪ ರಸ್ತೆಯ 'ಕಾಲ್ ಟೆಕ್ಸ್' ಕಂಪನಿಯ ಪೆಟ್ರೋಲ್ ಬಂಕ್ ಬಳಿ ಬರುವುದಕ್ಕೂ ಸರಿಯಾಯಿತು. ಓ, ಈ ಹುಲಿ ಹೊತೆ ಒಬ್ಬ ಹುಡುಗ ಕೋವಿ ಹಿಡಿದು ಅದರ ಅಕ್ಕಪಕ್ಕ ಓಡಾಡುತ್ತ ಹುಲಿಗೆ ಗುರಿ ಇಟ್ಟು ಶಿಕಾರಿ ಮಾಡಲು ಪ್ರಯತ್ನ ಪಡುತ್ತಿದ್ದಾನೆ! ಎರಡು ಅಡಿ ಉದ್ದದ ಕಟ್ಟಿಗೆ ಕೋಲಿನ ತುದಿ ಚೂಪು ಮಾಡಿ ಅದಕ್ಕೆ ಇದ್ದಲಿನ ಮಸಿ ಬಳಿದರೆ ಕೋವಿ ತಯಾರು. ಕೆಲವೊಮ್ಮೆ ದೀಪಾವಳಿಯಲ್ಲಿ ಕೇಪು ಹೊಡೆಯುವ ದೊಡ್ಡ ಕೋವಿ ಸಿಕ್ಕರೆ ಅವನೇ ದೊಡ್ಡ ಬೇಟೆಗಾರ. ಅದರ ಜೊತೆಗೆ ದೊಡ್ಡದಾದ ಗಿರಿಜಾ ಮೀಸೆ ಬಳಿದುಕೊಂಡು, ಜೇಮ್ಸಬಾಂಡ್ ತರಹ ಕೋವಿ ಹಿಡಿದು ಕೊಂಡು ಹುಲಿಯ ಹತ್ತಿರ ಸುತ್ತುತ್ತಾ, ಹುಲಿವೇಷಕ್ಕೆ ದುಡ್ಡು ಕೊಟ್ಟವರ ಬಳಿ ಹೋಗಿ, ನಮಸ್ಕಾರ ಮಾಡಿ, ಐದು ಅಥವಾ ಹತ್ತು ಪೈಸೆಯೋ ತೆಗೆದು ಕೊಂಡು ನಗೆ ಬೀರುವ ಪರಿ ಬಹಳ ಚೆನ್ನಾಗಿರುತ್ತದೆ. ಯಾರಾದ್ರೂ ನಾಲ್ಕಾಣೆ ಕೊಟ್ಟರೆ ತಾನು ಸಣ್ಣವನು ಎಂದು ಕೂಡ ಪರಿಗಣಿಸದೆ ಅವರಿಗೇ ಆಶೀರ್ವಾದ ಮಾಡುವ ಪರಿ ಎಲ್ಲರ ನಗು ಉಕ್ಕಿಸುತ್ತಿತ್ತು. ಇದನ್ನು ಇನ್ನೂ ನೋಡುತ್ತಿರು ವಂತೆಯೇ ಆ ಕಡೆ ತುಂಗಾ ಸೇತುವೆ ಕಡೆಯಿಂದ ಇನ್ನೊಂದು ಹುಲಿ ವೇಷದ ವಾದ್ಯದ ಶಬ್ದ ಬರಲು ಪ್ರಾರಂಭ.

ಈ ಶಬ್ದಗಳ ನಡುವೆಯೇ ಮೆಲ್ಲನೆ ಬಂದ ಇಬ್ಬರು ಪುಟ್ಟ ಹುಡುಗರು ಕೈಯಲ್ಲಿ ಬಿದಿರಿನ ಕಡ್ಡಿಯಿಂದ ಗೋಪುರದಂತಹ ಅಕಾರ ಮಾಡಿ ಅದಕ್ಕೆ ಹೂಗಳನ್ನು ಸಿಕ್ಕಿಸಿ "ಮಾರ್ ನೌಮಿ ಬಂತು..." ರಾಮಾಯಣದ ಹಾಡು ಹೇಳಲು ಪ್ರಾರಂಭ. ತಲೆಯ ಮೇಲೆ ಗಾಂಧಿ ಟೋಪಿ!. ಇಬ್ಬರು ಹುಡುಗರು ಬಂದರೆ ಎಂಟಾಣೆ. ಆದರೆ ಈ ಹುಡುಗರು ನಮ್ಮ ಹಳ್ಳಿ ಪಕ್ಕದಲ್ಲಿದ್ದ ಅರಳಸುರಳಿ ಗ್ರಾಮದಿಂದ ಬಂದವರು ಎಂದರೆ ಅವರಿಗೆ ಮಾತ್ರ ಒಂದು ರೂಪಾಯಿ ಕೊಡುತ್ತಿದ್ದರು.

ಈಗ ಕೇಳಿಸುತ್ತಿದೆ ಪೀಪಿ ಶಬ್ದ! ಇದೋ ಕರಿ ವೇಷ. ಮೈಯಲ್ಲಾ ಇದ್ದಿಲು ಬಳಿದುಕೊಂಡು ತಲೆಗೆ ಹಾಳೆ ಟೋಪಿ, ಕುತ್ತಿಗೆಗೆ ಒಂದು ಸೇವಂತಿಗೆ ಹೂವಿನ ಹಾರ. ಇವನಿಗೆ ಎಲ್ಲರೂ ನಾಲ್ಕಾಣೆ, ಎಂಟಾಣೆ ಬೇಗ ಕೊಡುತ್ತಾರೆ! ಯಾಕಂದ್ರೆ ಎಲ್ಲಿ ಅವನು ಬಗ್ಗಿ ನಮಸ್ಕಾರ ಮಾಡುವಾಗ ನಮಗೂ ಕರಿ ಮೆತ್ತುತ್ತಾನೋ ಎಂದು ಭಯ!

ಹಿಂದಿನಿಂದ ಬಂತೈ ಮಕ್ಕಳ ಹೋ, ಹಾ ಎಂದು ಕೂಗುವ ಶಬ್ದ. ಈ ಶಬ್ದ ಬಂದರೆ ಗೊತ್ತು, ಈಗ ಬಂದವನು ಸೀತೆಯನ್ನು ಹುಡುಕಿಕೊಂಡು ಹೊರಟಿರುವ ಆಂಜನೇಯ ಎಂದು! ಹುಲಿಯ ಹತ್ತಿರ ಹೋಗಲು ಹೆದರುತ್ತಿದ್ದ

ನಾವು ಹುಡುಗರ ಹಿಂಡು ಕಟ್ಟಿಕೊಂಡು ಅವನ ಹಿಂದೆ ಹೋಗಿ ಬಾಲ ಎಳೆದು ಕೀಟಲೆ ಮಾಡುತ್ತಿದ್ದೆವು! ಬಾಲ ಎಳೆದಾಗ ಅವನ ಹುಸಿಕೋಪ ನೋಡಿ ಮತ್ತಷ್ಟು ಚೇಷ್ಟೆ!

ಮಧ್ಯಾಹ್ನ ಬಿಸಿಲೇರುತ್ತಿದ್ದಂತೆ ಅಜಾದ್ ರಸ್ತೆಯಲ್ಲಿ ಜನಸಂದಣಿ ಜಾಸ್ತಿ ಆಗುತ್ತಾ ಹೋಗುತ್ತದೆ. ಅದು ಊರಿನ ಮುಖ್ಯ ರಸ್ತೆ. ಆ ಸಮಯದಲ್ಲೇ ಅಲ್ಲಿಗೆ ಹುಲಿಗಳು ಬರಲು ಪ್ರಾರಂಭ ಆಗುವುದು. ಕೆಲವೊಂದು ಹುಲಿಗಳು ಒಂದು ಕೊಡಪಾನ ತುಂಬ ತಣ್ಣೀರು ತಲೆಯ ಮೇಲೆ ಸುರಿದುಕೊಂಡು ಜೋರಾಗಿ ಕುಣಿಯುತ್ತಿದ್ದವು. ನಿಂಬೆಹಣ್ಣು ಎಡಗೈಲಿ ಹಿಡಿದು ಹುಲಿಗಳು ಆಗಾಗ ಹಲ್ಲುಗಳ ಮಧ್ಯೆ ನಿಂಬೆಹಣ್ಣು ಇಟ್ಟುಕೊಂಡು ಅದರ ರಸ ಒಂದು ಚೂರು ನಾಲಿಗೆಗೆ ತಾಗಿಸಿಕೊಳ್ಳು ತ್ತಿದ್ದರು. ಬಿಸಿಲು, ಮೈಉರಿಯ ನಡುವೆ ಈ ನಿಂಬೆಹಣ್ಣು ಪಿತ್ತಹರವಂತೆ. ಇನ್ನು ಕೆಲವು ಹುಲಿಗಳು ಹಿಂದಿನ ರಸ್ತೆಯಲ್ಲಿ ರುವ ತೀರ್ಥದ ಅಂಗಡಿಗೆ ಭೇಟಿ! ಒಟ್ಟಿನಲ್ಲಿ ಮೈ ತಂಪಾಗಿಸಲು ಏನಾದರೂ ಮಾಡಲೇಬೇಕಲ್ಲವೇ? ಆಗಲೇ ಮಧ್ಯಾಹ್ನ ವಾಯಿತಲ್ಲ. ಚಿತ್ರಾನ್ನ ಕಡ್ಲೆಬೇಳೆ ಪಾಯಸದ ಊಟದ ನಡುವೆಯೂ ಢಂಢಂ..ಟರ... ಶಬ್ದ ಕಿವಿಗೆ ಬೀಳುತ್ತಲೇ ಇತ್ತು.

ಈಗ ಬನ್ನಿಮಂಟಪಕ್ಕೆ ಹೊರಡುವ ಸಂಭ್ರಮ! ಕೊಪ್ಪ ಸರ್ಕಲ್ ಬಳಿ ಸೇರುತ್ತಿರುವ ಜನ. ದೇವರ ಮುಂದೆ ಕುಣಿದುಕೊಂಡು ಬರುತ್ತಿರುವ ವಿವಿಧ ವೇಷಗಳು. ಆದೋ ಅಲ್ಲಿ ನೋಡು ಬಾಲದ ಹುಲಿ. ಬಿದಿರಲ್ಲಿ ಮಾಡಿರುವ ಹುಲಿಯ ಬಾಲ ಕನ್ನಡದ 'ಲ' ಆಕಾರದಲ್ಲಿ! ಇದನ್ನು ಅರ್ಧ ವೃತ್ತಾಕಾರದಲ್ಲಿ ಎಡದಿಂದ ಬಲಕ್ಕೆ, ಬಲದಿಂದ ಎಡಕ್ಕೆ ತಿರುಗಿಸುತ್ತಾ ಬಂದರೆ ಎಲ್ಲರೂ ಮೈ ಮರೆತು ಒಂದು ಕ್ಷಣವಾದರೂ ನೋಡಿ ಹೋಗುತ್ತಿದ್ದರು. ಆ ಹುಲಿಯ ವಾದ್ಯ ವೃಂದಕ್ಕೆ ಓಲಗದವರು ಕೂಡ ಇದ್ದಾರೆ! ಈ ಕಡೆ ನೋಡಿದರೆ ಮರಿಹುಲಿ. ಸುಮಾರು ೮ ವರುಷದ ಬಾಲಕ ಹಾಕಿರುವ ಹುಲಿವೇಷ, ಎಲ್ಲರ ಅಚ್ಚುಮೆಚ್ಚು. ಈಗ ಬರುತ್ತಿದೆ ನೋಡಿ ಬ್ಯಾಂಡ್ ಸೆಟ್ ಜೊತೆ ಬಂದಿರುವ ಜೋಡಿ ಹುಲಿ! ಬೇರೆಯವರು ತಮ್ಮಟೆ ಬಾರಿಸಿದರೆ ಇವರದು ಬ್ಯಾಂಡ್ ಸೆಟ್. ಇವರು ಹಿಂದಿ ಸಿನಿಮಾ ಹಾಡನ್ನು ಬಾರಿಸುತ್ತಾರೆ. ಇವರೆಲ್ಲಾ ಎರಡು ರೂಪಾಯಿ ಕಡಿಮೆ ತೆಗೆದುಕೊಳ್ಳಲು ಒಪ್ಪುತ್ತಿರಲಿಲ್ಲ.

ಕೊನೆಯಲ್ಲಿ ಬರುತ್ತಿರುವುದೇ ಪಲ್ಲಕ್ಕಿಯಲ್ಲಿ ಶ್ರೀ ರಾಮೇಶ್ವರ! ದೇವರ ಮುಂದೆ ನಾದಸ್ವರ. ಪಕ್ಕದಲ್ಲಿ ಊರಿನ ಗಣ್ಯರು. ಎಲ್ಲರ ದೌಡು, ಕುಶಾವತಿ ನದಿ ಹತ್ತಿರದಲ್ಲಿ ಬನ್ನಿಮಂಟಪ ಇರುವ ನಮ್ಮೂರಿನ ಉದ್ಯಾನವನಕ್ಕೆ. ಊರಿನ ಏಕೈಕ ಬನ್ನಿ ಮರ ಅಲ್ಲೇ ಇರುವುದು. ಪಲ್ಲಕ್ಕಿಯನ್ನು ಅಲ್ಲಿರುವ ಮಂಟಪದಲ್ಲಿ ಇಳಿಸಿ, ಬನ್ನಿ ಮರಕ್ಕೆ ಪೂಜೆ ಮಾಡಿದ ಅರ್ಚಕರು ಬನ್ನಿ ಸೊಪ್ಪನ್ನು ಪಲ್ಲಕ್ಕಿಯ ಹತ್ತಿರ ಇದ್ದ ಊರಿನ ಗಣ್ಯರಿಗೆ ಕೊಟ್ಟ ಕೂಡಲೇ ಬನ್ನಿ ಮರದ ಮೇಲೆ ಹುಡುಗರ ಹಿಂಡೇ ದಾಳಿ. ಹತ್ತು ನಿಮಿಷದಲ್ಲಿ ಮರದಲ್ಲಿರುವ ಎಲೆಗಳು ಖಾಲಿ!

ಈಗ ಎಲ್ಲರಿಗೂ ಬನ್ನಿ ಕೊಡುವ ಸಂಭ್ರಮ. ಕೊಟ್ಟ ಬನ್ನಿಯಲ್ಲೇ ಅರ್ಧ ಇಟ್ಟುಕೊಂಡು ಇನ್ನರ್ಧ ಅವರಿಗೇ ಕೊಟ್ಟು "ಪ್ರೀತಿ ವಿಶ್ವಾಸ" ಇರಲಿ ಎನ್ನುವ ಜಾಣತನ!. ದೊಡ್ಡವರ ಕಾಲು ಮುಟ್ಟಿ ನಮಸ್ಕರಿಸುವ ಪರಿ. ಜನ, ಜನ, ಜನ.. ಎಲ್ಲಿ ನೋಡಿದರೂ ಜನ!.

ಈ ಜನರಾಶಿಯಲ್ಲೇ ಹುಟ್ಟುವುದು ಪ್ರೀತಿ! ಜೊತೆಯವರ ಕಣ್ಣು ತಪ್ಪಿಸಿ ಹೇಗೋ ಮಾಡಿ ಪ್ರೀತಿ ವಿಶ್ವಾಸ ಯಾವಾಗಲೂ ಇರಲಿ ಎಂದು ಹೇಳುತ್ತಾ ತನ್ನ "ಕ್ರಷ್" ಗೆ ಬನ್ನಿ ಕೊಡುವ ವರುಷದ ಏಕೈಕ ಅವಕಾಶ!! 'ಕ್ರಷ್' ಕೊಟ್ಟ ಬನ್ನಿಯನ್ನು ಬೇರೆ ಯಾರಿಗೂ ಕೊಡದೆ ಜೋಪಾನವಾಗಿ ಪೇಪರಿನಲ್ಲಿ ಮಡಿಸಿಟ್ಟುಕೊಂಡು ಬಂದು ಪುಸ್ತಕದ ಮಧ್ಯ ಇಟ್ಟು ಕಾಪಾಡುವ ಗೀಳು!

ರಾತ್ರಿ ಊಟ ಮಾಡುವಾಗ ಗಾಂಧಿ ಚೌಕದಲ್ಲಿ ಹುಲಿಗಳು ಕುರಿ ಕಚ್ಚಿ ಎಸಿತಾವಂತೆ ಎನ್ನುವ ಕಥೆಗಳ ಮಧ್ಯೆ ದಸರಾ ಮುಗಿಯುತ್ತದೆ.

ಒಂದು ಕಿವಿಯಲ್ಲಿ ಢಂ ಢಂ ಟರ.. ಶಬ್ದ ಮಾರ್ದನಿಸುತ್ತಿದೆ, ಇನ್ನೊಂದು ಕಿವಿಯಲ್ಲಿ "ಯಾವಾಗಲೂ ಪ್ರೀತಿ ಇರಲಿ" ಎನ್ನುವ ಧ್ವನಿ ಪಿಸುಗುಟ್ಟುತ್ತಿದೆ. ಇನ್ನೊಮ್ಮೆ ಆ ಶಬ್ದ, ಈ ಧ್ವನಿ ಕೇಳಲು ಇನ್ನೊಂದು ವರುಷ ಕಾಯಲೇಬೇಕು!!! ***

ಟಿಕ್ ಟಿಕ್

– ಎನ್. ಶಂಕರರಾವ್

ಹೃದಯದ ಮಿಡಿತ
ಗಡಿಯಾರದ ಬಡಿತ
ಟಿಕ್ ಟಿಕ್ ತರಂಗದ
ಸುಳಿಯಲಿ
ಸಾಗುತಿಹುದು ಜೀವನ //

ಭೂತ ಭವಿಷ್ಯದ ಸಂದಿಗ್ಧತೆಯಲಿ
ವರ್ತಮಾನವದು ನಿರ್ಲಿಪ್ತ
ಅನಿಶ್ಚಿತೆಯ ಬಾಳ ಪಯಣದಲಿ
ಸವೆಯುತಿದೆ ಜೀವನ ಸಂಧ್ಯಾಕಾಲ //

ಮತ್ತೆ ಬಾರದೆ ವಸಂತ
ಆಷಾಢದ ಸುಂಟರಗಾಳಿಗೆ
ಸಿಲುಕಿದಾ ಮನಕೆ
ಶ್ರಾವಣದ ತಂಪನೆರೆದು
ಟಪ್ ಟಪ್ ಸುರಿಯೆ ಚಿಗುರೊಡೆದು//

ಗಡಿಯಾರದ ಮುಳ್ಳುಗಳ ಚಲನೆಯೊಂದಿಗೆ
ಹಗಲು ರಾತ್ರಿ ವಾರ ತಿಥಿಗಳ ಸಂಚಲನ
ದಿನ ರಾತ್ರಿಗಳ ಪರವೆಯಿಲ್ಲ
ಋತುಮಾನವೂ ಆವರ್ತದ ಚರಣ //

ಚೆಲುವಯ್ಯ ಚೆಲುವೋ....

- ಎಲ್. ಗಿರಿಜಾ ರಾಜ್

ಅದೇ ಚೆಲುವಯ್ಯ, ಗೊತ್ತಿಲ್ಲವೇ? ಮಾತು ಮಾತಿಗೆ ಗಾದೆ ಹೇಳುವ ಕುಡಿಮೀಸೆ ಹೈದ! ಚೆಂದುಳ್ಳಿ ಚೆಲುವ, ಪಾಪ! ಸಾಧು ಹಸುವಿನ ಹಾಗೆ! ಅದಕ್ಕೇ ತಾನೆ ರಕ್ಕಸನಂಥ ಅವನಣ್ಣನಿಂದ ಒಂದು ಅಂಗುಲದಷ್ಟು ನೆಲವೂ ಅವನ ಹೆಸರಿಗೆ ದಕ್ಕಿಲ್ಲದಿರುವುದು. ಈ ಚೆಲುವಣ್ಣನ ಸಿರಿಮಾರಿಗೆ ಒಲಿದ ಗಡುಸುಗಾತಿ ದೇವೀರಿ ಎಷ್ಟೇ ಧೈರ್ಯ ತುಂಬಿದರೂ ಅಣ್ಣನೆದುರಿಗೆ ತೊಡೆ ತಟ್ಟಿ ನಿಲ್ಲುವ ದಮ್ಮು ಅವನಿಗೆ ಬರಲೇ ಇಲ್ಲ.

"ಹುಟ್ಟು ಗುಣ ಸುಟ್ರೂ ಹೋಗಲ್ಲ ನಿನ್ನ ಜನ್ಮಕ್ಕಿಷ್ಟು!" ಎಂದು ಛೀಮಾರಿ ಹಾಕಿದ್ದಳು ದೇವೀರಿ. ಹಸುಗೂಸಿನಂಥ ತಮ್ಮಂಗೆ ಸಲ್ಲದ್ದು ಯೋಳಿ ತನ್ನೆದುರು ಛೂ ಬಿಡಾಕೆ, ಮೀಸೆ ತಿರುವೋಕೆ ಏಳ್ಕೊಡ್ತಾ ಔಳೆ ಅಂತ ಸುದ್ದಿ ಕಿವಿ ತುಂಬ ಕೂದಲಿರೋ ಚೌಡಯ್ಯನ ಕಿವೀಗೆ ಬೀಳಾದೆ ತಡ, ತಟ್ಟಂತ ದೇವೀರಿ ಕೇರಿಗೆ ಬಂದು ಅವರ ವಂಸದ ಮರ್ಯಾದೆ ಎಲ್ಲ ಬಾಯಲ್ಲೇ ಜಾಲಾಡಿ, ಅವ್ವ, ಅಪ್ಪನ ಜೊತೆ ಊರು ಬುಟ್ಟು ಓಗೋ ಅಂಗೆ ಮಾಡಿದ್ದ ಕಿರಾತಕ, ಚೆಲುವನನ್ನು ಕರೆದು" ಏಯ್,ಚೆಲ್ವ.ಗಾದೆಗೀದೆ ಯೋಳ್ಕಂಡು ಎಂಗಾನಬಿದ್ದಿರು ಅದ್ಬುಟ್ಟು ಅವರಿವ್ರ ಮಾತ್ ಕೇಳಿ ಸುಮ್ಕಿರ್ದೆ ಕಿತಾಪತಿ ತೆಗುದ್ರೆ ಎರಡೊತ್ತು ಅನ್ನಕ್ಕೂ ಬಂದಾತು ಬನ್ನ ಉಸಾರ್ ಎಂದು ಹೆದರಿಸಿದ್ದ.

ನಾನು ಪಟ್ಟಣದಲ್ಲಿ ಕೆಲಸ ಸಿಕ್ಕಿದ ಮೇಲೆ ಹಳ್ಳಿ ಬಿಟ್ಟು ಮಡದಿ, ಮಕ್ಕಳ ಜೊತೆ ದಿಳ್ಳಿ ಸೇರಿದ್ದೆ. ಚೆಲುವಯ್ಯನನ್ನು ಕಂಡ್ರೆ ನನ್ನ ಮಕ್ಕಳಿಬ್ಬರಿಗೂ ತುಂಬ ಖುಷಿ. ಹಳ್ಳಿಯಲ್ಲಿ ಇದ್ದಾಗಲಂತೂ ಜಾತ್ರೆ ಸಮಯಗಳಲ್ಲಿ ಮಕ್ಕಳನ್ನು ಹೆಗಲಮೇಲೆ ಕೂರಿಸಿಕೊಂಡು ಎಲ್ಲ ಕಡೆ ಸುತ್ತಿಸುತ್ತಿದ್ದ. ಇವೂ ಖುಷಿ ಹೆಚ್ಚಾಗಿ "ಅಂಗಣ್ಣ-ಮಂಗಣ್ಣಗಳಂತೆ ಅವನ ಹೆಗಲೇರಿ ಇಳಿಯುತ್ತಲೇ ಇರಲಿಲ್ಲ. ನಾವು ಪಟ್ಟಣಕ್ಕೆ ಬಂದ ಮೇಲೂ ಹಳ್ಳಿ ಸಮೀಪವಿದ್ದುದರಿಂದ ಆಗಾಗ ನಮ್ಮ ಮನೆಗೆ ಬಂದು ಕಷ್ಟ ಸುಖ ಮಾತಾಡಿ ಮಕ್ಕಳನ್ನು ಆಟವಾಡಿಸಿ ಹೋಗುತ್ತಿದ್ದ. ಅವನು ಯಾವಾಗ ಬಂದರೂ ಬರೀ ಕೈಯಲ್ಲಿ ಬಂದವನಲ್ಲ, ಬೆಳೆದ ಕಾಳುಕಡ್ಡಿ, ದವಸ ಧಾನ್ಯ ಒಂದಿಷ್ಟು ಪ್ರೀತಿಯಿಂದ ಹೊತ್ತು ತರುತ್ತಾನೆ, ಅದರ ಜೊತೆ ಗಾದೆಗಳ ಮೂಟೆಯನ್ನೂ ಮನಸಿನಲ್ಲಿ ಹೊತ್ತು ತಂದು ಅದರಿಂದ ರಸಗವಳ ತೆಗೆದು ಬಡಿಸಿ, ನಮ್ಮಲ್ಲಿ ಖುಷಿಯ ಕಾರಂಜಿಯ ಊಟೆ ಚಿಮ್ಮಿಸಿ ಮುದಗೊಳಿಸುತ್ತಿದ್ದ. ನನ್ನ ಮಕ್ಕಳಬ್ಬರಿಗೂ ಅವನು ಬಂದರೆ ಹಿಗ್ಗೋ ಹಿಗ್ಗು! ಅವನ ತೊಡೆಯ ಮೇಲೆ ಕುಳಿತು ಅವನೆಷ್ಟು ಗಾದೆ ಹೇಳುತ್ತಾನೆ ಎಂದು ಬೆರಳಲ್ಲಿ ಒಂದು, ಎರಡು ಮೂರು ಎಂದು ಎಣಿಸಿಕೊಂಡು ಕೂಡುತ್ತಾರೆ. ಅವನನ್ನು ಅವರು ಗಾದೆಯಪ್ಪ ಎಂದೇ ಕರೆವರು.

ಒಂದು ಟವಲನ್ನು ತಲೆಗೆ ರುಮಾಲಿನಂತೆ ಕಟ್ಟಿ,ಒಂದು ಪಟ್ಟಪಟ್ಟೆಯ ದೊಡ್ಡ ಲಕ್ಕನ ಚಡ್ಡಿ, ಚೌಕುಳಿಯ ತುಂಬು ತೋಳಿನ ಷರಟು, ಕಿವಿಗಳಲ್ಲಿ ಲಕಲಕ ಹೊಳೆಯುವ ಒಂಟಿ ನಡುವಿಗೊಂದು ತೆಳುವಾದ ಟವಲು ಬಿಗಿದಿರುತ್ತಾನೆ. ಮಹಾ ವಾಚಾಳಿಯಾದರೂ ಮುಗ್ಧ, ಚೆಲುವ. ಚೆಲುವನಾದರೂ ಒಂದಿಷ್ಟು ಕೊಳಕಂಭಟ್ಟನೇ ಸರಿ. ನಡುವಿಗೆ ಕಟ್ಟಿರುವ ತೆಳು ಟವಲನ್ನು ಬಿಚ್ಚುತ್ತ, ಕಟ್ಟುತ್ತ ಒಮ್ಮೊಮ್ಮೆ ಹೆಗಲ ಮೇಲೆ ಹಾಕಿಕೊಳ್ಳುತ್ತ, ಅದರಲ್ಲೇ ಮುಖದ ಬೆವರನ್ನೂ ಒರೆಸುತ್ತ, ಅಪರೂಪಕ್ಕೆ ಮೂಗಿನಲ್ಲಿ ತುಪ್ಪ ಇಳಿದರೆ (ಮಳೆಗಾಲದಲ್ಲಿ ಅನ್ನಿ) ಅದನ್ನೂ ಅದರಲ್ಲೇ ಒರೆಸುವ ಗಾದೆಯಪ್ಪ ಅಂದು ಬಂದಾಗ ಎಲ್ಲಿದ್ದವೋ ಮಕ್ಕಳು "ಗಾದೆಯಪ್ಪ ಬಂದ್ರು" ಅಂತ ಖುಷಿಯಿಂದ ನೆಗೆದು ಬಂದು ನನಗೆ ಸುದ್ದಿ ತಿಳಿಸಿದರು.

"ನಮಸ್ಕಾರ. ಅಡ್ಡಬಿದ್ದೆ ದ್ಯಾವ್ರು" ಎಂದು ತನ್ನದೇ ವಿಶಿಷ್ಟ ಶೈಲಿಯಲ್ಲಿ ಹೇಳುತ್ತ ಅಡ್ಡವೇನೂ ಬೀಳದೆ, ಬರಿದೇ ಕೈ ಮುಗಿದು, "ಸುನಿತವ್ವ ಬನ್ರವ್ವ, ಒಂದೀಟು ಕಾಳು ಕಡ್ಡಿ ತರಕಾರಿ ಎಲ್ಲ ಒಳಿಕ್ಕೆ ಮಡಿಕ್ಕಳಿ" ಅಂದದ್ದೇ ತಡ, ಸುನಿತವ್ವ ಅಂದ್ರೆ ನನ್ನವಳು ಮುಖ ಅರಳಿಸುತ್ತ "ಅಯ್ಯೋ ಯಾಕೆ ಬೇಕಿತ್ತು ಇವೆಲ್ಲ? ತುಂಬ ಚೆನ್ನಾಗಿದೆ ತರಕಾರಿ. ಅಂತೂ ಬರಿಗೈಲಿ ಬರೋನೇ ಅಲ್ಲಬಿಡು ನೀನು. ಅಯ್ಯೋ... ಅಯ್ಯೊ... ಕುಂಬಳ ಕಾಯಿ ನೋಡ್ರಿ ಎಷ್ಟ್ ದಪ್ಪ, ಪಡವಲಕಾಯಿ ಎಷ್ಟುದ್ದ ಇದೆ" ಎನ್ನತ್ತ ಸಂತಸದಿಂದ ಬಡಬಡಿಸುತ್ತ ತರಕಾರಿ ಪ್ರಿಯೆ ಸುನಿ ಎಲ್ಲ ಒಳಗಿಟ್ಟುಕೊಂಡಳು.

ಹಸಿದಂತೆ ಕಾಣುತ್ತಿದ್ದ. ಅವನನ್ನು ನೋಡಿ ನಾನು "ಸುನಿ, ಚೆಲುವಯ್ಯನಿಗೆ ಊಟಕ್ಕೆ ಕೊಡು ಎಂದೆ. ಅವನು ಕೈ ಹೊಸೆಯುತ್ತ ಸಂಕೋಚದಿಂದ ನಗುತ್ತ "ಹಿಟ್ಟಿನೊತ್ತಿಗೆ ಸರಿಯಾಗಿ ಬಂದ ಚಟ್ಟಳ್ಳಿ ಹೈದ ಅಂತ ಬೈಕೋ ಬ್ಯಾಡಪ್ಪೋ" ಎಂದ.

ಸುನಿ "ಕೈ ಕಾಲು ತೊಳಕೋ ಚೆಲುವಯ್ಯ, ನೀನೇನು ದೂರದವನೇ ನಮಗೆ" ಎನ್ನುತ್ತ, ಹಪ್ಪಳ ಕರಿದು ಸಡಗರದಿಂದ ಊಟಕ್ಕೆ ನೀಡಿದಳು. ಸುನಿ ಉಪ್ಪು ಇಡುವುದು ಮರೆತಾಗ "ಸುನಿತವ್ವ, ತಾಯಿಗಿಂತ ಬಂಧುವಿಲ್ಲ, ಉಪ್ಪಿಗಿಂತ ರುಚಿಯಿಲ್ಲ ಅಂತ ಕೇಳಿಲ್ವ? ಉಪ್ಪು ತಾರವ್ವ" ಅಂದಾಗ ಮಕ್ಕಳು "ಓಹೋ ಎರಡಾಯ್ತು ಎರಡಾಯ್ತು!" ಎಂದು ಕುಣಿಯುತ್ತಿದ್ದವು. ಚೆಲುವಯ್ಯನ ಹೊಲದ ಪಡುವಲಕಾಯಿ ಬಲು ರುಚಿ ಎಂದು ಸವಿದಿದ್ದ ಸುನಿ ಅದರಿಂದ ಕೂಟು ಮಾಡುವ ಕಲ್ಪನೆಯಲ್ಲಿಯೇ ಸುಖಿಸುತ್ತಿದ್ದಳು.

ಚೆಲುವಯ್ಯ ಊಟ ಮಾಡುತ್ತಿರುವಂತೆಯೇ ನಾನು "ಏನ್ ಚೆಲುವಯ್ಯ, ಈಗಾದ್ರೂ ಮದ್ವೆ ಗಿದ್ವೆ ಅಂತ ಮಾಡ್ಕೊಂಡು, ಅಚ್ಚುಕಟ್ಟಾಗಿ ಸಂಸಾರ ಅಂತ ಮಾಡ್ಕೊಂಡು ಇರ್ತೀಯೋ, ಇಲ್ಲ ಇಂಗೇ ಒಳ್ಳೆ ಬಸವನಂಗೆ ತಿರುಕ್ಕೊಂಡು ಜೀವಮಾನ ಎಲ್ಲಾ ಕಳೆದುಬಿಡ್ತೀಯೊ ಹೇಗೆ?" ಎಂದೆ.

ಚೆಲುವ ಬಾಯಿ ತುಂಬ ನಕ್ಕು ಬಿಟ್ಟ. "ಅಲ್ಲಪ್ಪೋ, ನೀನೊಳ್ಳೆ ಚೆನ್ನಾಗಿ ಯೋಳ್ದೆ ಬುಡು, ನಂಗ್ಯಾರು ಎಣ್ಣು ಕೊಟ್ಟಾರು? ಆ ದೇವೀರಿ ನನ್ ಅಚ್ಕೊಂಡು ಬುಟ್ಟಿದ್ಲು, 'ಮನದಾಗೆ ಬಂದೋಳು ಮನೆಯಾಗೆ ಬರೋದು ಏಟೊತ್ತು?' ಅಂತ ಆಕಿದ್ದ ಲೆಕ್ಕಾಚಾರೆಲ್ಲ ತಳಕೆಳಗಾಯ್ತು. ನಂಗೆ ಮದುವೆ ಮಾಡಾಕೆ ನಮ್ ಚೌಡಣ್ಣಂಗೆ ಇರೊ ಆಸೆ ಅಷ್ಟರಾಗೆ ಐತಿ ಬುಡಿ ಇಷ್ಟ್ ದಿವ್ಸವೇ ಕಳೀತು ಇನ್ನೇನು ಇಂಗೆ ಕಳೀತದೆ. 'ಮನೆಮನೇಲಿ ಮುದ್ದೆ, ಮಾರಿಗುಡೀಲಿ ನಿದ್ದೆ, ಇದ್ದರಿದ್ದೆ, ಎದ್ದರೆದ್ದೆ..' ಅಂತ ಎಂಗೋ ಆಯ್ತದೆ ಬುಡಿ" ಎಂದು ಮತ್ತೊಮ್ಮೆ ಬಾಯಿತುಂಬ ನಕ್ಕುಬಿಟ್ಟ. ಇಂಥ ಸೊಗಸಾದ ಮುಖ, ಹಸುಗೂಸಿನಂಥ ಮನಸ್ಸು ಇದ್ದು ಗಂಡಾಗೋ ಬದ್ಲು ಹೆಣ್ಣಾಗಿದ್ರೆ ಎಷ್ಟ್ ಚೆನ್ನಾಗಿತ್ತು ಎಂದು ನಗುತ್ತಿದ್ದ ಆ ಮುಖ ನೋಡಿ ಒಂದು ತಮಾಷೆ ಆಲೋಚನೆ ಸುಳಿದುಹೋಯ್ತು. ಬ್ರಹ್ಮನೆಲ್ಲೋ ಆ ಸಮಯದಲ್ಲಿ ಮಡದಿಯೊಡನೆ ಮುನಿಸಿಕೊಂಡು ಹೆಣ್ಣಾಗಿ ಮಾಡುವುದನ್ನು ಮರೆತನೇನೋ ಎನ್ನಿಸಿತು. ಅವನ ಗಾದೆ ಮಾತು ಕೇಳಿ "ಅದಕ್ಕೆ ಕಣಯ್ಯ ನಿನಗೆ ಒಂದು ಮೂಗುದಾರ ಹಾಕೋಣ ಅಂತ್ಲೇ ಹೇಳಿದ್ದು" ಎಂದೆ.

ಅವನು ಕೊಂಚ ರಂಗಾಗಿ "ನಂಗೇನೋ ಇಷ್ಟನೇಯ... ನಮ್ಮಣ್ಣ ನನಿಗೆ ಲಗ್ನ ಮಾಡಾನ ನಂಬ್ಕೆ ಇಲ್ಲ ತೆಗೀರಿ, ಕಾರ್ಕೋಟಕ್ಕ ಅವ್ನು, 'ಬಾಯಾಗೆ ಬಸಪ್ಪ ಎದೆಯಾಗೆ ಇಸಪ್ಪ' "ಇದ್ದಂಗೆ ಎಂದ. ಸುನಿ "ಅವ್ನು ಬಿಡು, ನಿನ್ನ ಅತ್ತಿಗೇನೂ ಒಳ್ಳೆಯವಳಲ್ವ?" ಎಂದಳು.

"ಅಯ್ಯೊ, ಸುಮ್ಕಿರಿ, ಆ ಮಾಯಾಂಗನೆ ಯಾ ಮೂರ್ತದಾಗೆ ಕಾಲಿಟ್ಟಳೋ, ಚೆನ್ನದಂತ ಅಣ್ಣ ಬದಲಾಯಿಸಿಬುಟ್ಟ, ಬೆಳಗಿನಿಂದ ದುಡಿದು ಸಾಕಾಗಿ ಬಂದು, 'ಉಣ್ಣಕ್ಕಿಕ್ಕು' ಅಂದ್ರೆ ಏನನಬೇಕು ಆ ಮಾಯಾಂಗನೆ. 'ತೋಟಕ್ ಹೋಗಿ ತೊಕ್ ಅಂದ, ಮನೆಗೆ ಬಂದು ಇಕ್ ಅಂದ' ಅನ್ನಂಗೆ "ಏನ್ ಕದ್ದು ಬಂದ್ಯಪ್ಪ, ಇಷ್ಟ್ ಬಿರೀನೆ ಬಂದು ಉಣ್ಣಿಕಿಕ್ಕು ಅಂತ ಮಾರಾಜನಂಗೆ ಉಣ್ಣಾಕೆ ಕುಂತ್ಬುಟ್ಟೆ" ಅಂತಾಳೆ. ನಮ್ಮಣ್ಣನ ಹೈದ ಐತಲ್ಲಾ ಅದು ಇರವಾರ ಸೋಮಾರಿ ಅಂತೀನಿ, ಅವನೆಂಥೊನು ಅಂದ್ರೆ, "ಕರ ಕಟ್ಟಿ ಹಾಕ್ಲ ಬೊಮ್ಮ ಅಂದ್ರೆ ಕಾಲ್ ತುಳೀತದೆ ಕಣಮ್ಮ, ತಟ್ಟೆ ತಕ್ಕೊಳ್ಳ ತಿಮ್ಮ ಅಂದ್ರೆ, ಹಂಗೇಳು ನಮ್ಮಮ್ಮ ಅನ್ನೋ ಜಾತೀಗೆ ಸೇರಿದವನು. ಒಟ್ನಾಗೆ ಆ ಮನೆಯಾಗೆ ನೆಮ್ಮದಿ ಇಲ್ಲ".ಅಂದ

ನಾನು "ಅಲ್ಲಯ್ಯ, ನಿಮ್ಮಪ್ಪ ಮಾಡಿಟ್ಟ ಆಸ್ತೀಲಿ ನಿನಗೂ ಪಾಲಿಲ್ಲವೇ? ನೀನೂ ಮಗ ಅಲ್ವೆ? ಇಷ್ಟ್ ಮೆತ್ತಗಿದ್ರೆ ಆಗಲ್ಲ ಚೆಲುವಯ್ಯ, ಸ್ವಲ್ಪ ಜೋರು ಮಾಡಬೇಕು ನೀನು" ಎಂದು ಕಿವಿಮಾತು ಹೇಳಿದೆ.

"ಬುಡಿ ಅಯ್ಯ, ನೀವು ಮೊದಲಿಂದ್ಲೂ ಏಳುತ್ಲೇ ಇವ್ರೀ..ದೇವೀರೀನು ಇದೇ ವಿಸಯಕ್ಕೆ ಬೋ ಜಗಳ ಮಾಡ್ತಿದ್ಲು ನನ್ ಕುಟ್ಟೆ, ಜೋರು ಮಾಡಾದು ಬರ್ನೇ ಇಲ್ಲ ನಂಗೆ. ನಾನು ಎಷ್ಟಾದ್ರೂ ಮಲಮಗ, ತಾಯೀನೂ ಕಳ್ಕೊಂಡ ತಬ್ಬಲಿ. ಅದ್ಕೇ ತಾತ್ಸಾರ, 'ನಿಂತಿರೋದು ನೆಲದ ಮ್ಯಾಲೆ, ಮಾತಾಡೋದು ಕುದುರೆ ಮ್ಯಾಲೆ' ಅಂತ ಆಸ್ತಿ ಗೀಸ್ತಿ ಅಂತ ದೊಡ್ಡ ಏಚ್ನೆಗಳು ಯಾಕೆ ನಂಗೆ? ಎರಡೊತ್ತು ಅನ್ನ ಆಕುದ್ರೆ ಸಾಕಲ್ಲವ?" ಎಂದ ಅಮಾಯಕನಂತೆ.

"ಅಯ್ಯೋ ಪೆದ್ದ, ನಿನಗೆ ಹೇಗೆ ಹೇಳಲಿ? ಈಗ ಜನ ಹೆಂಗಿದಾರೆ ಗೊತ್ತಾ? ಕಾಲಿಗೆ ಬಿದ್ರೆ ಜುಟ್ಟು ಹಿಡೀತಾರೆ, ಜುಟ್ಟು ಹಿಡಿದರೆ ಕಾಲಿಗೆ ಬೀಳ್ತಾರೆ" ಎಂದೆ. ಸಹವಾಸದಿಂದಲೋ, ಸಮಯ ಸ್ಫೂರ್ತಿಯಿಂದಲೋ ನನ್ನ ಬಾಯಿಂದಲೂ ಒಂದು ಗಾದೆ ಹೊರ ಬಿದ್ದುದನ್ನ ನೋಡಿ ಮಕ್ಕಳು ಚಪ್ಪಾಳೆ ತಟ್ಟಿ, ಕೂಗಿ ಸಂತಸ ತೋರಿದರು.

ಚೆಲುವಯ್ಯ,"ಅಯ್ಯಾ ಮೆಲ್ಲಗೆ ಯೋಳಿ, ಏನೋ ಕೆಲ್ಸ ಐತೆ ಅಯ್ಯ ಅವರತ್ರ, ನಾನೂ ಬರ್ಬೇಕು ಅಂತಿದ್ದ ಅಣ್ಣ, ಬಂದ್ಗಿಂದಾನು, 'ಪಿಸಿಪಿಸಿ ಗುಟ್ಟು ಪಿರಿಯಾಪಟ್ಟಣಕ್ಕೆ ಕೇಳಿಸಿತು' ಅಂತ ಅವನಿಗೇನಾದರೂ ಗೊತ್ತಾತೊ ನನ್ನ ನಡ ಮುರ್ದು ಬುಡ್ತಾನೆ. 'ಬಡವ ನೀ ಮಡಗಿದಂಗಿರು' ಅಂತ ಇದ್ದುಬುಡ್ತೀನಿ, ದುಷ್ಟರನ್ನು ಕಂಡ್ರೆ ದೂರ ಇರ್ಬೇಕು ಅಲ್ವಾ?" ಎಂದು ನನ್ನೇ ಪ್ರಶ್ನೆಮಾಡಿದಾಗ "ಸರಿಯಾದ ತಮ್ಮ ಸಿಕ್ಕಿದೀಯ ಬಿಡು' ಎಂದೆ.

ಅಷ್ಟು ಹೊತ್ತಿಗೆ ಮಕ್ಕಳಿಬ್ಬರೂ "ಗಾದೆಯಪ್ಪ, ಗಾದೆಯಪ್ಪ, ಹತ್ತು ಗಾದೆ ಹೇಳಿದ್ರಿ ನೀವು" ಎಂದು ಅವನ ಹೆಗಲಿಗೆ ಜೋತು ಬಿದ್ರು. "ಬನ್ರೋ ನನ್ನ ಮುದ್ದಾಣಿಗಳಾ" ಅಂತ ಮುದ್ದುಮಾಡಿ, "ಬರ್ತೀನಿ ದೇವ್ರು, ಆ ಕಿರಾತಕ ಏನಾರ ಬಂದು ಬಿಟ್ನಾನು, ನೆನೆದವರ ಮನದಲ್ಲಿ ಅಂತ ಎಂದು ಜನಪದ ಹಾಡೊಂದನ್ನು ಗುನುಗುತ್ತಾ ಹೊರಟ ಚೆಲುವ - "ಕಿನ್ನುರಿ ನುಡಿಸೋನ ದನಿ ಚೆಂದವೋ.."

ವಾಟ್ಸಾಪ್ ಚರಿತೆ

– ರಾಜೇಂದ್ರ ಪ್ರಸಾದ್

ಈ ವಾಟ್ಸಪ್ ಐಕಾನಿಗೆ ರುಂಡಮಾತ್ರವಿದೆ ಮುಂಡವಿಲ್ಲ
ಎಲ್ಲದಕು ಮೂಗು ತೂರಿಸಲು ಮೂಗಿದೆ
ಅದೂ ನೇರವಿರದೆ ಬಲಕ್ಕೆ ತಿರುಗಿದೆ
ಬೋಳು ತಲೆಯಿದೆ ಒಳಗೆ ಸ್ವಂತದ್ದೇನೂ ಇಲ್ಲ
ಎರಡು ಕಣ್ಣಿದೆ ಬಾಯಿಲ್ಲ ಕಿವಿಯಂತೂ ಇಲ್ಲವೇ ಇಲ್ಲ
ವಾಟ್ಸಪ್ ಭೂತದ ದೇಹ ರಚನೆಯಿದು.

ನಾವು ವಾಟ್ಸಪ್ ಗುಂಪಿನಲಿ ಬೆರೆತ ಜೀವಿಗಳು
ನಮಗೆ ಮೆದುಳಿದ್ದರೂ ಯೋಚಿಸುವುದ ಮರೆತಿಹೆವು
ಬಾಯಿದ್ದರೂ ನುಡಿಯ ಮರೆತಿಹೆವು
ಕಿವಿಯಿದ್ದರೂ ಕಿವುಡರಾಗಿಹೆವು
ಹೃದಯವಿದ್ದರೂ ಮಿಡಿಯಲಾರೆವು
ನಾವು ವಾಟ್ಸಪ್ಪಿನವರು ಜೀವಜಲ ಬತ್ತಿದವರು.

ಮನೆಯಿರಲಿ ಕಛೇರಿಯಿರಲಿ
ಅತಿಥಿಗಳ ಮುಂದಿರಲಿ ಪೂಜೆಯಲಿರಲಿ
ಕ್ಷಣಕ್ಷಣಕು ಸವರುತಿರು
ಎನುವುದೀ ವಾಟ್ಸಪ್ ಭೂತ.
ವಾರ್ಷಿಕೋತ್ಸವವೊ ಹುಟ್ಟು ಹಬ್ಬವೊ
ವಿಜಯವೊ ಆಹ್ವಾನ ಪತ್ರಿಕೆಯೊ
ಎಲ್ಲದಕೂ ಒಂದೆರಡು ಪದ ಗೀಚಿ
ಮೊಬೈಲಿಂದ ದೂಕಿದರಾಯ್ತು.
ಅದೂ ಕಷ್ಟವಾದರೆ ಒಂದು ನಮಸ್ಕಾರ ಮುದ್ರೆ.
ಜ್ಞಾನ ಮುದ್ರೆ ಅಥವಾ ಆಕಾಶಕ್ಕೆ ಹೆಬ್ಬೆರಳು.
ನಾವು ವಾಟ್ಸಪ್ಪಿನವರು ಜೀವಜಲ ಬತ್ತಿದವರು.

ಯಾವುದೋ ಚೆಂದದ ವೀಡಿಯೋ ಅಂದದ ಘಟನೆ
ತಿಳುವಳಿಕೆ ಸಾಲು ಇಷ್ಟವಾದೊಡನೆ
ಕಾಪಿ ಪೇಸ್ಟ್ ಮಾಡಿ ತಳ್ಳಿದರೆ
ತಲುಪುವುದು ಗುಂಪಿನೆಲ್ಲರಿಗೂ.
ಅಳಲೊಂದು ನಗಲೊಂದು ಛೇಡಿಸಲು ಮತ್ತೊಂದು
ಭೇಷ್ ಎನಲು ಇನ್ನೊಂದು
ಎಲ್ಲ ಭಾವಕೂ ಒಂದೊಂದು
ಸ್ಮೈಲಿಗಳೇ ನಮ್ಮ ರಾಯಭಾರಿಗಳು
ಒತ್ತಿ ತಳ್ಳಿದರಲ್ಲಿಗೆ ನಾವು ಧನ್ಯರಾದಂತೆ.
ನಾವು ವಾಟ್ಸಪ್ ಗುಂಪಿನಲಿ ಬೆರೆತ ಜೀವಿಗಳು.

ಏಳು ಸುಮುದ್ರದ ಆಚೆ ಪ್ರಾಣಪಕ್ಷಿಯನಿಟ್ಟ
ಮಾಂತ್ರಿಕಳ ಕತೆಯಂತೆ
ಪಾಪ ಪುಣ್ಯಗಳೆರಡರ ಲೆಕ್ಕ ಚಿತ್ರಗುಪ್ತರ ಕೈಯಲಿದ್ದಂತೆ.
ನಮ್ಮೆದೆಯ ತುಡಿತಗಳು ಮನದ ಮಿಡಿತಗಳು
ಎಲ್ಲವೂ ವಾಟ್ಸಪ್ಪಿನಲಿ ಸದಾ ಬಂಧಿ
ಬಿಡುಗಡೆಯದೆಂತೋ ಬಲ್ಲವರಾರು
ನಾವು ವಾಟ್ಸಪ್ ಗುಂಪಿನಲಿ ಬೆರೆತ ಜೀವಿಗಳು

ಎದ್ದೇಳಿ ಬಂಧುಗಳೆ
ನಮ್ಮನೀ ವಾಟ್ಸಪ್ ಭೂತ
ಪೂರ್ಣ ನುಂಗುವ ಮೊದಲೆ.
ಒಟ್ಟಾಗಿ ಬೆರೆಯೋಣ ಕಲೆತು ನಲಿಯೋಣ
ಸಂಬಂಧಗಳಲಿನಿತು ಭಾವಗಳ ತುಂಬೋಣ
ಮನಸಾರೆ ನುಡಿಯೋಣ ಹೃದಯಗಳ ಬೆಸೆಯೋಣ
ಸವಿಯೋಣ ಮತ್ತೊಮ್ಮೆ ಈ ಯಾಂತ್ರಿಕ
ವಾಟ್ಸಪ್ಪಿನಾಚೆಯ ನೈಜ ಬದುಕಿನ ಸವಿಯ

*****

ನಮ್ಮೂರ ಮಗ

- ರೇಣುಕಾ ದೇಸಾಯಿ

ಹದಿನೈದು ವರ್ಷಗಳ ಹಿಂದೆ ನಿಗಿನಿಗಿ ಯೌವನ ತುಂಬಿದ ಸದೃಢಕಾಯದವನಾದ ಶಂಕರ್ ಕೈಲ್ಲೊಂದು ಡಿಗ್ರಿ ಹಿಡಿದು ಕೊಂಡು ಅನೇಕ ಆದರ್ಶಗಳನ್ನು ಮೈಮನದಲ್ಲಿ ತುಂಬಿಕೊಂಡು ದೇಶದ ಸೈನ್ಯಕ್ಕೆ ಭರ್ತಿಯಾಗುತ್ತಾನೆ. ಇಂದು ಕರ್ನಲ್ ಶಂಕರ್ ಆಗಿ ಹೊರ ಜಗತ್ತಿಗೆ ಬರುತ್ತಿದ್ದಾರೆ. ಮುಖದಲ್ಲಿ ಅದೇ ಗಾಂಭೀರ್ಯ ಅದೇ ದೃಢತೆ, ಅದೇ ಆದರ್ಶ. ಆದರೆ ಮಾಗಿದ ಮನಸ್ಸು.

''ಇಂದು ನನಗೆ ನಿವೃತ್ತಿ, ನಾನು X-Army Officer, ಕರ್ನಲ್ ಶಂಕರ್... ಯುದ್ಧದಲ್ಲಿ ಭಾಗಿಯಾಗಿ ವೀರ ,ಶೂರ ಸೇನಾನಿ ನಾನು ಎನ್ನುವದಕ್ಕೆ ಈ ಕುಂಟಗಾಲು... ಓಡಾಡಲಾರೆ, ಆದರೆ ಜಗತ್ತನ್ನೇ ಜಯಿಸಬಲ್ಲೆ ಎನ್ನುವ ಆತ್ಮ ವಿಶ್ವಾಸವಿದೆ ನನ್ನಲ್ಲಿ... ನಿವೃತ್ತಿಯ ನಂತರ ನನ್ನ ತಾಣ ಯಾವುದು ಎಂದು ಚಿಂತಿಸಿದವನಲ್ಲ... ನನ್ನ ಮಿಲಿಟರಿ ತಾಣ ನನಗೆ ಚಿಂತಿಸುವದಕ್ಕೆ ಎಡೆಯನ್ನೇ ಕೊಟ್ಟಿರಲಿಲ್ಲ"

"ಅಷ್ಟು busy ನಾssss ನೀನು?"

" ಯಾರು ? ಯಾರು ಕೇಳಿದ್ದು?"

" ನಿನ್ನ ಮನಸ್ಸೇ ಕಣೋ ಶಂಕರ್ "

"ಹೌದು ನನ್ನ ಕರ್ತವ್ಯದಲ್ಲಿ ನನಗೆ ನಾಳೆ ಏನು ಎನ್ನುವದನ್ನು ಚಿಂತಿಸುವದಕ್ಕೂ ಸಮಯವಿರಲಿಲ್ಲ. ದೇಶಸೇವೆ ಅಂದ್ರೆ ಅದೇ ಅಲ್ಲವೇ? ನನ್ನದು ತನ್ನದು, ನಾಳೆ ನಾಡಿದ್ದು ಯಾವುದಕ್ಕೂ ಅಲ್ಲಿ ಸ್ಥಾನವಿರಲ್ಲ"

"ಸಾಹೇಬ್ ಏನ್ ಯೋಚಿಸ್ತಾ ಇದೀರಿ?''

''ಎಲ್ಲಿಗೆ ಹೋಗೋಣ?"

"ನೀವು ಹೋಗುವ ತಾಣದವರೆಗೂ ನಿಮ್ಮೊಂದಿಗಿದ್ದು ನಿಮ್ಮನ್ನು ಜಾಗ್ರತೆಯಾಗಿ ತಲುಪಿಸಬೇಕೆಂದು ನನಗೆ ಮೇಲಾಧಿಕಾರಿಯ ಅಪ್ಪಣೆ ಇದೆ."

'ದೇಶ ಸೇವೆ ಮಾಡುತ್ತಾ ನಾನು ಅಂಗವಿಕಲನಾದಾಗಿನಿಂದ ಈ ವೀರ ಸಿಪಾಯಿ ನನ್ನ ಜೊತೆಗಾರ, ನನ್ನ ಸರ್ವಸ್ವ. ಯಾವ ಜನ್ಮದ ಋಣಾನುಬಂಧವೋ.. ನನ್ನನ್ನು ತಂದೆ ತಾಯಿಯಾಗಿ ಸಲಹುತ್ತಿದ್ದಾನೆ.'

"ಮಹೇಶ್ssss"

“ಸಾಹೇಬ್ “

“ನನ್ನ ಸೇನಾ ನೆಲೆ, ನನ್ನ ತಾಯಿ ನೆಲವಾದ ಕನ್ನಡದ ರಾಜಧಾನಿ ಬೆಂಗಳೂರಿನವರೆಗೆ ವಿಮಾನ ಟಿಕೆಟ್ ಕಾದಿರಿಸಿದೆ ಅಲ್ಲಿಗೆ ತಲುಪೋಣ, ನಂತರ ಎಲ್ಲಿಗೆ ಎಂದು ಹೇಳುತ್ತೇನೆ.”

“ಆಯ್ತು ಸಾಹೇಬ್ “

“ಅಯ್ಯೋ ದೇವರೇ, ಈ ನಮ್ಮ ದೇವರಿಗೆ ಎಲ್ಲಿಗೆ ಹೋಗಬೇಕು ಅನ್ನುವುದೇ ಗೊತ್ತಿಲ್ಲ. ಕರ್ತವ್ಯದಲ್ಲಿದ್ದಾಗ ಒಂದು ದಿನವೂ ತನ್ನ ಬಗ್ಗೆ, ತನ್ನವರ ಬಗ್ಗೆ ಹೇಳಿಕೊಂಡವರೇ ಅಲ್ಲ. ಕರ್ತವ್ಯವೊಂದೇ ಅವರ ಗುರಿ.”

ಸರಕಾರಿ ಕಾರಿನಲ್ಲಿ ವಿಮಾನ ನಿಲ್ದಾಣ ತಲುಪಿ, ಬೆಂಗಳೂರಿಗೆ ಹೋಗುವ ನಿಗದಿತ ವಿಮಾನದಲ್ಲಿ ಕುಳಿತದ್ದಾಯ್ತು .

“ಸಾಹೇಬ್ ನೀವು ಕುಳಿತುಕೊಳ್ಳಿ” ಎನ್ನುತ್ತಾ ಕರ್ನಲ್ ಶಂಕರ್ ಅವರನ್ನು ವೀಲ್ ಚೇರಿನಿಂದ ಅವರ ಆಸನದಲ್ಲಿ ಕುಳ್ಳಿರಿಸಿದ ಮಹೇಶ್, ಪಕ್ಕದಲ್ಲಿ ಅವನಿಗೂ ಒಂದು ಆಸನ ಕಾಯ್ದಿರಿಸಿದ್ದರೂ ನಿಂತೇ ಇದ್ದ, ಮಹೇಶ್. ಮಿಲಿಟರಿಯ ಶಿಸ್ತು ಮೈಗೂಡಿಸಿಕೊಂಡಿದ್ದ ಮಹೇಶ್, ಸಾಹೇಬರ ಪಕ್ಕದಲ್ಲಿ ಕುಂತಾನಾದರೂ ಹೇಗೆ?

“ಹೇ ಮಹೇಶ್ ಬಾ ಕುಳಿತುಕೋ. “ನೀನು ಎದ್ದು ನಿಂತರೆ ವಿಮಾನದ ಸಿಬ್ಬಂದಿ ನಿನ್ನನ್ನು ಹೊರಗೆ ಕಳಿಸುತ್ತಾರೆ, ನಂತರ ನನಗ್ಯಾರು ಗತಿಯಪ್ಪಾ“

“ಸಾಹೇಬ್ ನೀವು ದೊಡ್ಡ ಆಫೀಸರ್, ಯಾರು ಗತಿಯೆಂದು ಅಂದುಕೊಳ್ಳಬಾರದು”

“ಅಯ್ಯೋ.. ..ನಾನು ಈಗ ಸಾಹೇಬ್ ಅಲ್ಲ, ನಿವೃತ್ತ , ಸಾಮಾನ್ಯ”

“ಇದು ನಿಮ್ಮ ದೊಡ್ಡ ಗುಣ, ಆದರೆ ನೀವು ಎಂದೆಂದೂ ನನಗೆ ಸಾಹೇಬ್”

“ಸರಿ, ಆರ್ಡರ್ ಮಾಡ್ತಾ ಇದೀನಿ, ಪಕ್ಕದ ಸೀಟಿನಲ್ಲಿ ಕುತ್ಕೊ”

“ಎಸ್ ಸಾರ್” ಎಂದು ಸೆಲ್ಯೂಟ್ ಹೊಡೆದು ಕುಳಿತಕೊಂಡ ಮಹೇಶ್. ಬೆಂಗಳೂರು ತಲುಪಲು ಆರು ತಾಸಿನ ದಾರಿ ಕ್ರಮಿಸಬೇಕು.
ಬೀಳ್ಕೊಡುಗೆ ಸಮಾರಂಭ, ಎಲ್ಲರನ್ನು ಬಿಟ್ಟು ಬರುವ ದುಃಖ, ತನ್ನದು ಎಂದು ಎನನ್ನೂ ಯೋಚಿಸದೆ ಕರ್ತವ್ಯದೊಡನೆ ಬೆಸೆದುಕೊಂಡ ಜೀವ, ನಲವತ್ತೈದು ವರುಷದ ಶಂಕರ್ ತಕ್ಷಣದಲ್ಲಿ ಏಕಾಂಗಿ. ಆಯಾಸಗೊಂಡ ಕರ್ನಲ್ ಹಾಗೇ ಲಘು ನಿದ್ದೆಗೆ ಜಾರಿದರು.

"ಸಾಹೇಬ್ರ, ಊರಿಗೆ ಊರೇ ಸಂಭ್ರಮದಲ್ಲಿದೆ, ನೀವು ಊರಿಗೆ ಬಂದು ಹತ್ತು ವರ್ಸಆಯ್ತು, ಊರ ಹಿರಿಯರು ಕಿರಿಯರು ಹಳ್ಳಿಯ ಎಲ್ಲಾ ರಸ್ತೆಗಳನ್ನು ಮಾವಿನ ತಳಿರು, ಹೂಗಳಿಂದ ಶೃಂಗರಿಸಿದಾರ. ಪಂಚಾಯತಿ ಆಫೀಸ್ ಹೊರಗಡೆ ದೊಡ್ಡ ಅಭಿನಂದನಾ ಸಭೆ ಏರ್ಪಡಸ್ಯಾರ, ಭರ್ಜರಿ ಒಬ್ಬಟ್ಟಿನ ಊಟದ ಎರ್ಪಾಡ ಆಗೇದ"

"ಸಾಹೇಬ್ರ ಏಳ್ರಿ, ಎಣ್ಣೆ ಸ್ನಾನ ಮಾಡಿ ತಯಾರಾಗಬೇಕು" ಎಂದು ಸಂತೋಷದಿಂದ ಗಡಿಬಿಡಿಯಲ್ಲಿ ಅಡ್ಡಾಡುತ್ತಿದ್ದಾನೆ ಶಂಕರ್ ಅವರ ಆಪ್ತ ಸಹಾಯಕ ವೀರಣ್ಣ.

"ನನ್ನದು ಎಂತಹ ಋಣಾತ್ಮಕ ಚಿಂತನೆ? ಹತ್ತು ವರ್ಷದ ಹಿಂದೆ ಸೈನ್ಯದಿಂದ ಹೊರಗೆ ಬಂದಾಗ ನಾನು ಏಕಾಂಗಿ ಎನ್ನುವ ದುಃಖದ ಭಾವ ಇಂದೇಕೆ ನೆನಪಾಗಿ ಕಾಡಬೇಕು? "

"ಕರ್ನಲ್ ಸಾಹೇಬ್ರ.sssss... " ಕೂಗು ಹೊರಗಡೆ, ಹೌದು, ಊರ ಪಂಚಾಯಿತಿ ಅಧ್ಯಕ್ಷ ಸೋಮೇಶ ಗೌಡ್ರ ಧ್ವನಿ .
ಶಂಕರ್ ತನ್ನ ವೀಲ್ ಕುರ್ಚಿಯನ್ನು ತಳ್ಳುತ್ತಾ ಗಡಿಬಿಡಿಯಿಂದ ಹೋಗಲು ಅನುವಾದಾಗ ವೀರಣ್ಣ ಓಡೋಡಿ ಬಂದ.
"ಸಾಹೇಬರೆ ಇರಿ , ನಾನೇ ಅಧ್ಯಕ್ಷರನ್ನು ಒಳಗೆ ಕರೆದು ತರುತ್ತೇನೆ, ನೀವೇಕೆ ತಳ್ಳುಕುರ್ಚಿಯಲ್ಲಿ ಹೋಗುವಿರಿ?"

ಮನದಲ್ಲಿ ನಕ್ಕ ಕರ್ನಲ್. ಈ ವೀರಣ್ಣನದು ನನ್ನದು ಯಾವ ಜನ್ಮದ ಋಣಾನುಬಂಧವೋ ಆ ಭಗವಂತನೇ ಹೇಳಬೇಕು. ಅಂದು ನನ್ನೊಂದಿಗೆ ಬಂದ ಮಹೇಶ್ ಸರಕಾರಿ ನೌಕರ. ನಾನು ಹೇಳಿದಂತೆ ನನ್ನ ಹಳ್ಳಿಗೆ ತಲುಪಿಸಿದ ಮರು ಗಳಿಗೆಯಲ್ಲೇ ನನ್ನ ಸಹಾಯಕ್ಕೆ ಟೊಂಕ ಕಟ್ಟಿ ನಿಂತವ ಈ ವೀರಣ್ಣ, ನನ್ನೂರಿನವ, ನನ್ನ ಹಿತೈಷಿ. ಹೆಜ್ಜೆ ಹೆಜ್ಜೆಗೂ ನನ್ನ ಎಲ್ಲಾ ಬೇಕು ಬೇಡ ನೋಡಿಕೊಳ್ಳುತ್ತಾ, ಈ ಹತ್ತು ವರ್ಷದಲ್ಲಿ ನನ್ನ ಒಂದು ಅಂಗವೇ ಆಗಿಹೋಗಿದ್ದಾನೆ. ಅವನ ನನ್ನ ಬಂಧ ಯಾವ ರಕ್ತ ಸಂಬಂಧವನ್ನೂ ಮೀರಿದಂತಹುದು.

"ನಮಸ್ಕಾರ "

"ಬನ್ನಿ ಅಧ್ಯಕ್ಷರೇ, ಒಳಗೆ ಬನ್ನಿ "

"ತೆಗೆದುಕೊಳ್ಳಿ ಈ ಪಂಚೆ ಜುಬ್ಬ ಮತ್ತು ಶಲ್ಯ "

"ಅರೇ !!! ಇದೆಲ್ಲಾ ಯಾಕೆ ?"

"ಕರ್ನಲ್ ಸಾಹೇಬರೆ ಇಂದಿಗೆ ಸರಿಯಾಗಿ ಹತ್ತು ವರ್ಷವಾಯ್ತು ನಮ್ಮ ಹಳ್ಳಿಗೆ ತಾವು ಬಂದು "

"ಅದಕ್ಕೇನಂತೆ?"

"ಕರ್ನಲ್, ನೀವು ಈ ಹಳ್ಳಿಯ, ನಮ್ಮೆಲರ ಭಾಗ್ಯದ ಬಾಗಿಲು. ಈ ಹಳ್ಳಿಯ ವೀರ ಪುತ್ರ. ಸೇನೆಗೆ ಸೇರಿ ಹಳ್ಳಿಯ ಗೌರವ ದಿಲ್ಲಿಯವರೆಗೆ ಒಯ್ದಿರಿ.. ಈಗ ದೇಶಸೇವೆ ಮುಗಿಸಿ ನಿಮ್ಮ ಹಳ್ಳಿಗೆ ಬಂದು, ಈ ಹತ್ತು ವರ್ಷದಲ್ಲಿ ಸಕಲ ಸೌಲತ್ತು ನಮ್ಮ ಹಳ್ಳಿಗೆ ಬರುವಂತೆ ಮಾಡಿದ್ರಿ... ರಾಜಧಾನಿಯಲ್ಲಿರುವ ಮಂತ್ರಿ ಮಹೋದಯರ ಹತ್ತಿರ ಹಗಲು ರಾತ್ರಿ ಮಾತನಾಡಿ, ಕಾಗದ ಪತ್ರ ವ್ಯವಹಾರ ಮಾಡಿ ಎಲ್ಲ ರೀತಿಯಿಂದ ಹಳ್ಳಿಯನ್ನು ಅಭಿವೃದ್ಧಿಪಡಿಸಿದಿರಿ... "ಹಳ್ಳಿಗೆ ಆರೋಗ್ಯ ಕೇಂದ್ರ, ಸಹಕಾರಿ ಸಂಘ, ಶಾಲೆ ಕಾಲೇಜುಗಳು ಅವುಗಳಿಗೆ ಅನುದಾನ, ಗ್ರಾಮೀಣ ಅಭಿವೃದ್ಧಿ ಬ್ಯಾಂಕ್, ಮಕ್ಕಳಿಗೆ ಕ್ರೀಡಾ ತರಬೇತಿ ಸೌಲಭ್ಯ, ತರಬೇತುದಾರರು, ಒಂದೇ ಎರಡೇ ಹತ್ತು ವರುಷದಲ್ಲಿ ಹಗಲು ರಾತ್ರಿ ಎನ್ನುವ ಬೇಧವಿಲ್ಲದೆ ದುಡಿದು ಮಾದರಿ ಹಳ್ಳಿಯನ್ನಾಗಿಸಿದ್ದೀರಿ... ಅಷ್ಟೇ ಅಲ್ಲಾ ನಿಮ್ಮ ಈ ಪತ್ರ ವ್ಯವಹಾರವನ್ನು ಅನುಸರಿಸಿ ನಮ್ಮ ಸುತ್ತಮುತ್ತ ಇರುವ ಅನೇಕ ಹಳ್ಳಿಯವರು ಎಷ್ಟೋ ಸರಕಾರಿ ಸೌಲಭ್ಯಗಳ ಬಗೆಗೆ ಅರಿತು, ಅದನ್ನು ಅಳವಡಿಸಿಕೊಂಡು ತಮ್ಮ ಜೀವನ ಹಸನು ಮಾಡಿಕೊಂಡಿದ್ದಾರೆ."

"ಇದರಲ್ಲಿ ನನ್ನದೇನು ದೊಡ್ಡಸ್ತಿಕೆ ಅಧ್ಯಕ್ಷರೇ, ನೀವೆಲ್ಲಾ ಒಳ್ಳೆಯವರು, ನನ್ನ ಮಾತು ಕೇಳಿದಿರಿ, ಒಗ್ಗಟ್ಟಿನಿಂದ ಕೈ ಜೋಡಿಸಿದಿರಿ ಆಯ್ತು."

"ಇದು ನಿಮ್ಮ ಔದಾರ್ಯ.. ಈ ಹತ್ತು ವರ್ಷದಲ್ಲಿ ನಮ್ಮ ಹಳ್ಳಿಯ ಮಕ್ಕಳು ಸುಮಾರು 20 ಜನ ದೇಶದ ಮೂರು ಪಡೆಗಳಲ್ಲಿ ದೇಶ ಸೇವೆಗೆ ಸೇರಿದರು. ಮೂರ್ನಾಲ್ಕು ಯುವಕರು ಒಳ್ಳೆಯ ಕಸರತ್ತು ಪಡೆದು ನಿಮ್ಮ ಮಾರ್ಗದರ್ಶನದಲ್ಲಿ ರಾಷ್ಟ್ರೀಯ ಆಟಗಾರರಾದರು. ಒಂದೇ ಎರಡೇ , ಒಟ್ಟಿನಲ್ಲಿ ಈ ಹಳ್ಳಿಯ ಸೌಭಾಗ್ಯ ನೀವು ."

"ಏನೇ ಆಗಲಿ ಸೋಮಣ್ಣನವರೆ, ನನಗೆ ಈ ಉಡುಗೊರೆ ಬೇಡ. ನಾನು ನಿಮ್ಮ ಅಭಿನಂದನೆ ಸ್ವೀಕರಿಸುತ್ತೇನೆ ಆದರೆ ನನಗೆ ನನ್ನ ದೇಶ ಕೊಟ್ಟ ಈ ವರ್ಧಿಯಲ್ಲೇ ಸುಖ. ಇದು ನನಗೆ ಮೈ ಮೇಲಿದ್ದರೆ ಆನೆ ಬಲ."

"ಕರ್ನಲ್, ನೀವು ಭಾರತ ಮಾತೆಯ ಮಗ ಹೇಗೋ ಹಾಗೇ ಈ ಹಳ್ಳಿಯ ಮಗ .. ಇಂದಿನ ಸಂಭ್ರಮದಲ್ಲಿ ನೀವು ಹಳ್ಳಿಯ ಮಗನಾಗಿ ನಮ್ಮೊಂದಿಗೆ ಇರಬೇಕು ಅನ್ನುವುದೆ ನಮ್ಮ ಇಡೀ ಹಳ್ಳಿಯ ತೀರ್ಮಾನ."

"ಅಪ್ಪಾ sss ಅರೆ!! ಈ ಹೊಸ ಬಟ್ಟೆ ಎಷ್ಟು ಚೆನ್ನಾಗಿದೆ, ಮೃದುವಾಗಿದೆ, ನಿನಗಾ ?"

ಮುದ್ದಾದ ಸುಮಾರು ಎಂಟು ವರುಷದ ಹೆಣ್ಣು ಮಗು ಕರ್ನಲ್ ಮೈ ಮೇಲೆ ಬಿದ್ದು ಅವರ ತೊಡೆಯೇರಿ ಪುಟ್ಟ ಗೌರಿಯಂತೆ ಕುಳಿತಿತು.

"ಲಕ್ಷ್ಮಿ ಈ ಹೊಸ ಬಟ್ಟೆಯನ್ನು ಒಳಗೆ ದೇವರ ಮನೆಯಲ್ಲಿ ದೇವರ ಮುಂದೆ ಮಣೆ ಮೇಲಿಡು." ಸಡಗರದಿಂದ, ಸಂಭ್ರಮದಿಂದ ಹೊಸ ಬಟ್ಟೆಯ ಡಬ್ಬ ಹಿಡಿದು ಒಳಗೆ ಹೋಯಿತು ಮಗು.

"ನೋಡಿ ಕರ್ನಲ್ ಆಗತಾನೇ ಜನ್ಮವೆತ್ತು, ಬೇಲಿ ಬದಿಯಲ್ಲಿ ಅಳುತ್ತಿದ್ದ ಈ ಕೂಸು ಹಳ್ಳಿಗರೆಲ್ಲರ ತಾತ್ಸಾರಕ್ಕೆ ಒಳಗಾಗಿತ್ತು. ನೀವು ಆ ಮಗುವಿನದೇನು ತಪ್ಪು ಎಂದು ಪ್ರಶ್ನೆ ಹಾಕಿದಿರಿ ಮತ್ತು ಈ ಹಳ್ಳಿಯ ಲಕ್ಷ್ಮಿ ಎಂದು ಕರೆದಿರಿ. ನೀವೇ ಸಾಕಿ ಸಲುಹಿದಿರಿ. ಈಗ ಇವಳು ಬೆಳೆದು ದೊಡ್ಡವಳಾಗಿದ್ದಾಳೆ, ಸುಸಂಸ್ಕೃತಳಾಗಿದ್ದಾಳೆ."

"ಹೌದು ಸೋಮೆಶ್ ಗೌಡ್ರೆ, ದೇವರೇ ನನ್ನ ಒಂಟಿ ಜೀವನಕ್ಕೆ ಆಸರೆಯಾಗಲಿ ಎಂದು ಕಳಿಸಿದ ನನ್ನ ಭಾವಿ ತಾಯಿ ಆ ಮಗು."

"ಬಿಡ್ತು ಅನ್ನಿ ಕರ್ನಲ್, ನೀವು ಒಂಟಿಯಲ್ಲಾ ಇಡೀ ಹಳ್ಳಿ ನಿಮ್ಮದು, ಇಲ್ಲಿರುವ ತಾಯಿ, ತಂದೆ, ಅಣ್ಣ ತಮಂದಿರೆಲ್ಲ ನಿಮ್ಮವರೆ, ಇನ್ನೆಂದೂ ಒಂಟಿ ಅನ್ನಬಾರದು."

ಅಧ್ಯಕ್ಷ ಸೋಮೆಶ್ ಗೌಡ್ರ ಮಾತು ಕೇಳಿ ಕರ್ನಲ್ ಶಂಕರ್ ಕಣ್ಣು ತುಂಬಿ ಬಂತು.

ಅಷ್ಟರಲ್ಲಿ ವೀರಣ್ಣ "ಧಣಿ ಏಳಿ .. .. ಬೇಗ ಬೇಗ ಏಳಿ. ಹಿಂದುಗಡೆ ದೊಡ್ಡ ಹಂಡೆ ತುಂಬಾ ನೀರು ಕಾಯಿಸಿ , ಎಣ್ಣೆ ಕಾಯಿಸಿರುವೆ. ತಲೆಗೆ ಎಣ್ಣೆ ನೀರು ಹಾಕುತ್ತೇನೆ."

"ಹೌದು ಸಮಾರಂಭಕ್ಕೆ ತಡವಾಗಬಾರದು ನೀವು ತಯಾರಾಗಿರಿ. ನಾಗಸ್ವರದೊಂದಿಗೆ ನಿಮ್ಮ ಸ್ವಾಗತಕ್ಕೆ ಯುವಕರ ತಂಡ ನಿಮ್ಮಲ್ಲಿಗೆ ಬಂದು ಗೌರವಾದರಗಳಿಂದ ಕರೆ ತರುತ್ತದೆ. ಅದಕ್ಕೆ ಈ ಉಡುಗೊರೆ ತಲುಪಿಸಲು ಖುದ್ದಾಗಿ ಬಂದೆ." ಎಂದು ಹೇಳುತ್ತಾ ಮಾದರಿ ಹಳ್ಳಿಯ ಪಂಚಾಯತಿ ಅಧ್ಯಕ್ಷರು ಎದ್ದರು.

ಅಭ್ಯಂಗ ಮಾಡಿ, ಮೈಸೂರು ಸಿಲ್ಕ್ ಪಂಚೆ, ಜುಬ್ಬ, ಶಲ್ಯ ಹೊದ್ದು ಹಣೆಯ ಮೇಲೆ ಕುಂಕುಮದ ನಾಮ. ಗಾಲಿ ಖುರ್ಚಿಯಲ್ಲಿ ಕುಳಿತ ಕರ್ನಲ್ ಶಂಕರ್. ಮುಖದ ಮೇಲೆ ಅದೇ ವೀರ ಯೋಧನ ಕಳೆ, ತಳ್ಳು ಕುರ್ಚಿಯ ತಳ್ಳುತ್ತಿರುವ ಆತ್ಮೀಯ ಬಂಧು ವೀರಣ್ಣ, ಪಕ್ಕದಲ್ಲಿ ಬಟ್ಟಲು ಕಣ್ಣಿನ ಮುದ್ದಿನ ಮಗಳು ಲಕ್ಷ್ಮಿ, ಮುಂದೆ ನಾಗಸ್ವರದ ತಂಡ, ಹಿಂದೆ ಯುವಕರ ದಂಡು.

ಓಟ ಕಲಿಸಿದ ಪಾಠ

- ವಿಜಯಕುಮಾರಿ

ನಾವು ಮೊದಲ ಬಾರಿ ಅಮೇರಿಕಾ ಪ್ರಯಾಣ ಮಾಡಿದ್ದು ಏಪ್ರಿಲ್ 2010ರಲ್ಲಿ. ಅದು ನಮ್ಮ ಮೊದಲ ವಿಮಾನ ಪ್ರಯಾಣವೂ ಹೌದು. ನಮ್ಮದು ಅಪ್ಪಟ ಭಾರತೀಯ ಮನಸ್ಥಿತಿ. ಅಮೇರಿಕಾದಲ್ಲಿನ ಜನರ ಮನಸ್ಥಿತಿಯ ಅರಿವು ನಮಗೆ ಇರಲೇ ಇಲ್ಲ. ಅಲ್ಲಿನ ವಾತಾವರಣ, ಜನರ ಮನಸ್ಥಿತಿಯ ಹಿನ್ನೆಲೆಯನ್ನು ಅರಿತುಕೊಳ್ಳದೆ ನಾವು ವ್ಯವಹರಿಸಿದಾಗ ಅನೇಕಬಾರಿ ಪೇಚಿನ ಪ್ರಸಂಗಗಳನ್ನು ಎದುರಿಸಿದ್ದೂ ಇದೆ. ಅಂತಹ ಒಂದು ಪ್ರಸಂಗವನ್ನು ಈಗ ನಾನು ನಿಮ್ಮೊಡನೆ ಹಂಚಿಕೊಳ್ಳ ಬಯಸುತ್ತೇನೆ.

ನಾಸಾ ಸಂಸ್ಥೆಯವರು ಸ್ಯಾನ್ಫ್ರಾನ್ಸಿಸ್ಕೋನಲ್ಲಿ ಒಂದು ವಸ್ತು ಸಂಗ್ರಹಾಲಯವನ್ನು ತೆರೆದಿದ್ದಾರೆ. ಅದು ಬಹಳ ಭೋಧಪ್ರದವಾಗಿದೆ. ಈ ಸಂಗ್ರಹಾಲಯಕ್ಕೆ ನಾನೂ ನನ್ನ ಯಜಮಾನರೂ ದಿನಾಂಕ 05.08.2010 ರಂದು ಭೇಟಿ ನೀಡಲು ನಿರ್ಧರಿಸಿದೆವು. ಬೆಳಿಗ್ಗೆ ಬೇಗ ಎದ್ದು ಎಲ್ಲ ಕೆಲಸ ಮುಗಿಸಿ ಉಪ್ಪಿಟ್ಟನ್ನು ಡಬ್ಬಿಗೆ ಹಾಕಿಕೊಂಡು ಮದ್ಯಾಹ್ನ 12 ಗಂಟೆಗೆ ಬಸ್ ನಿಲ್ದಾಣಕ್ಕೆ ಹೊರಟೆವು.

ನಮ್ಮ ಮಗಳ ಮನೆ ಇದ್ದದ್ದು ಸನ್ನಿವೇಲ್ ನ ಒಂದು ಅಪಾರ್ಟ್ ಮೆಂಟಿನಲ್ಲಿ. ಅಲ್ಲಿಂದ ಬರ್ನಾಡೋ ಮುಖ್ಯ ರಸ್ತೆಗೆ ಎರಡು ನಿಮಿಷದ ನಡಿಗೆ. ಬಸ್ ನಿಲ್ದಾಣಕ್ಕೆ ಬಂದ ಕೂಡಲೆ ಬರ್ನಾಡೋ ಎಲ್ಕೆಮಿನೋ ಕ್ಯಾಸ್ಟ್ರೋಗೆ ಹೋಗುವ ಬಸ್ಸು (22ನೇ ನಂಬರ್) ಕೂಡಲೇ ಬಂದಿತು. ಆ ಬಸ್ಸಿನಲ್ಲಿ ಪಯಣಿಸಿ ಎಲ್ಕೆಮಿನೊಕ್ಯಾಯಸ್ಟ್ರೋನಲ್ಲಿ ಇಳಿದು 51ನೇ ನಂಬರ್ ಬಸ್ ಹಿಡಿದು ನಾಸಾ ಮ್ಯೂಸಿಯಂ ಗೇಟ್ ಬಳಿ ಇಳಿದುಕೊಂಡೆವು.

ನಾಸಾದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಗಳಿಗೆಲ್ಲಾ ಅಲ್ಲಿಯೇ ವಸತಿ ಗೃಹಗಳನ್ನು ನಿರ್ಮಿಸಿದ್ದಾರೆ. ಆದ್ದರಿಂದ ಒಳಗೆ ಹೋಗಲು ಭದ್ರತಾ ಸಿಬ್ಬಂದಿಯ ತಪಾಸಣೆಗೆ ಒಳಪಡಲೇಬೇಕಾಗುತ್ತದೆ. ಭದ್ರತಾ ಸಿಬ್ಬಂದಿಯು ನಮಗೆ ಮ್ಯೂಜಿಯಂ ಒಳಗೆ ಹೋಗುವ ದಾರಿಯನ್ನು ತೋರಿಸಿದರು. ಮ್ಯೂಜಿಯಂ ಒಳಗೆ ಪ್ರವೇಶಿಸಿದೆವು. ಅಲ್ಲಿ ಪ್ರದರ್ಶಿತವಾಗಿದ್ದ ಎಲ್ಲಾ ಚಚಿತ್ರಗಳನ್ನೂ ವೀಕ್ಷಿಸಿದೆವು. ನಾಸಾದಿಂದ ಉಡ್ಡಯನವಾದ ಮೊದಲ ಬಾಹ್ಯಾಕಾಶ ನೌಕೆ, ಚಂದ್ರನಿಂದ ತಂದ ಕಲ್ಲೊಂದರ ಮಾದರಿ ಎಲ್ಲವನ್ನೂ ವೀಕ್ಷಿಸಿದೆವು. ಅವೆಲ್ಲಾ ಆಸಕ್ತಿದಾಯಕ ಹಾಗೂ ಭೋದಪ್ರದವಾಗಿತ್ತು. ಅಲ್ಲಿ ಶೂನ್ಯ ಗುರುತ್ವಾಕರ್ಷಣ ಸಾಧನವಿತ್ತು. ಆದರೆ ಅದರ ಅನುಭವವನ್ನು ಪಡೆದುಕೊಳ್ಳುವ ಆಸೆಯನ್ನು ವ್ಯಕ್ತಪಡಿಸಿದಾಗ ಅದಕ್ಕೆ ಅನುಮತಿ ದೊರೆಯಲಿಲ್ಲ. ಅಷ್ಟು ಹೊತ್ತಿಗೆ ಸುಮಾರು ನಾಲ್ಕು ಗಂಟೆಯಾಗಿತ್ತು. ಮ್ಯೂಸಿಯಂನಿಂದ ಹೊರಬಂದು ತಂದಿದ್ದ ಉಪ್ಪಿಟ್ಟನ್ನು ಖಾಲಿಮಾಡಿ ಹೊರಡಲು ಅನುವಾದೆವು.

ಹೊರಗೆ ಬಂದು ಭದ್ರತಾ ಸಿಬ್ಬಂದಿಯನ್ನು ದಾಟಿ ಮುಂದೆ ರಸ್ತೆ ದಾಟಿ ಬಸ್ ನಿಲ್ದಾಣಕ್ಕೆ ಹೋಗಬೇಕಿತ್ತು. ಅಷ್ಟರಲ್ಲಿ 51ನೇ ನಂಬರ್ ಬಸ್ ನನ್ನ ಕಣ್ಣಿಗೆ ಬೀಳಬೇಕೇ. ನನ್ನ ಹೊಟ್ಟೆಯಲ್ಲಿ ತಳಮಳ. ಬಸ್ ತಪ್ಪಿ ಹೋಗುವುದೆಂಬ ಚಿಂತೆ.

ಬಸ್ ಹೊರಡುವ ಮುಂಚೆ ಅದನ್ನು ಹಿಡಿಯಲೇಬೇಕೆಂಬ ಛಲ. ಹೇಗೂ ಬೆಂಗಳೂರಿನಲ್ಲಿ ಓಡಿ ಬಸ್ಸು ಹಿಡಿಯುತ್ತಿದ್ದ ಅಭ್ಯಾಸ. ಮೆದುಳು ಮನಸ್ಸನ್ನು ಪ್ರೇರೇಪಿಸಿ ಓಡು ಓಡು ಎಂದು ಹುರಿದುಂಬಿಸುತ್ತಿತ್ತು. ನಾವಿರುವುದು ಅಮೇರಿಕಾದಲ್ಲಿ ಎಂಬುದೇ ಮರೆತುಹೋಯಿತು. ನಾವಿಬ್ಬರೂ ಕೈ ಕೈ ಹಿಡಿದು ಓಡತೊಡಗಿದೆವು.

ಆಗ ನೋಡಿ, ಅಲ್ಲಿ ಸುತ್ತಮುತ್ತಲಿದ್ದ ಎಲ್ಲಾ ಭದ್ರತಾ ಸಿಬ್ಬಂದಿಗಳೂ ಓಡಿ ಬಂದು ನಮ್ಮಿಬ್ಬರನ್ನು ಮುತ್ತಿಗೆ ಹಾಕಿದರು. ನಾವು ಎಂತಹ ಅಪಾಯದಲ್ಲಿದ್ದೇವೆ ಎಂಬ ಅರಿವು. ನನ್ನಲ್ಲಿ ಮೂಡಲೇ ಇಲ್ಲ. ಬಸ್ಸು ಹೊರಟುಬಿಡುವುದಲ್ಲಾ ಎಂಬ ಸಂಕಟವೇ ಹೆಚ್ಚಾಗಿ, 'We want to catch the bus" ಎಂದು ನನ್ನ ಸಂಕಟವನ್ನು ತೋಡಿಕೊಂಡೆ. ಆದರೆ ಆಭದ್ರತಾ ಸಿಬ್ಬಂದಿ ಮಹಾಶಯ, 'No problem, another bus will come, show me your I.D" ಎಂದು ಪ್ರಶ್ನಿಸಲು ಪ್ರಾರಂಭಿಸಿದ. ಆಗ ವಾಸ್ತವಕ್ಕಿಳಿದ ನನಗೆ ಏನಾಗುತ್ತಿದೆ ಎಂಬ ಜ್ಞಾನೋದಯವಾಯಿತು. ಬೇಗ ಬೇಗ ನನ್ನ ಕೈಚೀಲವನ್ನೆಲ್ಲಾ ಹುಡುಕಿದೆ. ನನ್ನ ಪಾಸ್ಪೋರ್ಟ್ ದೊರಕಲೇ ಇಲ್ಲ. ನಾನದನ್ನು ಮನೆಯಲ್ಲೇ ಮರೆತುಬಂದಿದ್ದೆ. ನನ್ನ ಕೈಕಾಲುಗಳೆಲ್ಲಾ ತಣ್ಣಗಾಯಿತು. ಮಾತು ಹೊರಡುತ್ತಿಲ್ಲ. ಹಣೆಯಲ್ಲಿ ಬೆವರಿಳಿಯುತ್ತಿದೆ. ಏನಪ್ಪ ಗತಿ ಶ್ರೀನಿವಾಸ ಎಂದು ಮೊರೆಯಿಟ್ಟೆ. ನನ್ನನ್ನು ಪಕ್ಕದಲ್ಲಿ ನಿಲ್ಲಿಸಿ ಯಜಮಾನರ ತಪಾಸಣೆ ಪ್ರಾರಂಭಿಸಿದರು. ಪುಣ್ಯಕ್ಕೆ ಅವರು ಪಾಸ್ಪೋರ್ಟ್ ತಂದಿದ್ದರು. ಮದ್ಯಾಹ್ನ ನಮಗೆ ದಾರಿತೋರಿದ ಸಿಬ್ಬಂದಿ ಇವರ ಪಾಸ್ಪೋರ್ಟ್ ಪರಿಶೀಲಿಸಿ 'Who is she' ಎಂದು ಯಜಮಾನರನ್ನು ಪ್ರಶ್ನಿಸಿ ನಾನು ಅವರ ಪತ್ನಿ ಎಂದು ಖಾತ್ರಿಪಡಿಸಿಕೊಂಡು ನಮ್ಮನ್ನು ಅಲ್ಲಿಂದ ಹೋಗಲು ಅನುಮತಿಸಿದರು. ನಮಗೆ ಹೋದ ಜೀವ ಬಂದಂತಹ ಅನುಭವವಾಯಿತು. ಈಗಲೂ ಈ ಪ್ರಸಂಗ ನೆನೆಪಿಗೆ ಬಂದರೆ ಆಕ್ಷಣದಲ್ಲಿ ನಾವು ಅನುಭವಿಸಿದ ಭಯ ಕಾತುರತೆಗಳ ನೆನಪಾಗುತ್ತದೆ.

ಎಂತಹ ಪರಿಸ್ಥಿತಿಯಲ್ಲಿಯೂ ಆತುರಪಡದೆ ವ್ಯವಹರಿಸಬೇಕೆಂಬ ಪಾಠವನ್ನು ಅಂದು ನಾನು ಕಲಿತುಕೊಂಡೆ. ಪರದೇಶದಲ್ಲಿ ಎಲ್ಲಿ ಹೋದರೂ ನಮ್ಮ ಗುರುತಿನ ಚೀಟಿಯನ್ನು ಮರೆಯಬಾರದೆಂಬ ಪಾಠವನ್ನೂ ಈ ಪ್ರಸಂಗ ನನಗೆ ಕಲಿಸಿತು. ಮದ್ಯಾಹ್ನ ನಮ್ಮನ್ನು ಯಾವುದೇ ಪರಿಶೀಲನೆಗೆ ಒಳಪಡಿಸದೆ ಒಳಗೆಬಿಟ್ಟ ಸಿಬ್ಬಂದಿ ನಾವು ಓಡಲು ಪ್ರಾರಂಭಿಸಿದ ಕ್ಷಣದಲ್ಲಿ ನಮ್ಮನ್ನು ಸುತ್ತುವರಿದು ಪರಿಶೀಲಿಸಿದ ಪರಿ 'ಅಲ್ಲಿನ ಜನ ಅವರಿಗೆ ನೀಡಿರುವ ಸೂಚನೆಗಳನ್ನು ಎಷ್ಟು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ' ಎಂಬ ಬಗ್ಗೆಯೂ ಅರಿವು ಮೂಡಿಸಿದವು. 'ರೋಂನಲ್ಲಿರುವಾಗ ರೋಮನ್ನನಂತೆಯೇ ಇರು' ಎಂಬ ಗಾದೆಯ ಸರಿಯಾದ ತಿಳಿವನ್ನು ನನ್ನಲ್ಲಿ ಮೂಡಿಸಿದ ಪ್ರಸಂಗವಿದು.

ಮಹಾದೇವ ದಂಡಕ

– ರತ್ನ

ಶಿವ ಶಿವ ಮಹಾದೇವ, ದೇವದೇವೇಶ, ಈಶ ಸರ್ವೇಶ, ಗೌರೀಶ ಗಿರಿಜೇಶ, ಭೂತಭಾವೇಶ, ಜೀವಜೀವೇಶ, ಅಮಿತ ಮುದಿತ ಶರದಿಂದು ಸಂಕಾಶ, ದಿವ್ಯ ರಜತಗಿರಿವಾಸ, ಸ್ಥಾಣವೇ ಪಶುಪತೀಶಾ;

ಜಯ ವೃಷಭರೂಪ, ಜಯ ವೃಷಭ ವಾಹ, ಜಯ ವಜ್ರಹಸ್ತ, ಜಯ ಪಂಚವಕ್ತ್ರ, ಜಯ ಪಕ್ಷರೂಪ, ಜಯ ಭಿಕ್ಷುರೂಪ, ಜಯ ವಿಶ್ವನಾಥ, ಜಯ ಊರ್ಧ್ವರೇತ, ಜಯ ವಾಮದೇವ, ಜಯ ವಿಶ್ವರೂಪ, ಸಾರಂಗಧರನೆ, ಭವಭಯಹರ, ಅರಿಭಯಂಕರ, ಸರ್ವಭೂತಹರ, ನಿಖಿಲ ಲೋಕಧರ, ಸಂಕಲ್ಪಮಾತ್ರ ಸಂಹಾರ, ಭವಭಯತಾರಕ ಸುಂದರೇಶ್ವರಾ, ಕಾಶಿವಿಶ್ವೇಶ್ವರಾ, ಮಹಾಕಾಳೇಶ್ವರಾ, ಗೌರಿ ಹೃದಯೇಶ್ವರಾ, ಸರ್ವ ಜಗದೀಶ್ವರಾ, ನಾಗಲಿಂಗೇಶ್ವರಾ;

ಸರ್ವಭೂತಾತ್ಮ, ಸರ್ವ ವಿಶ್ವಾತ್ಮ, ಸರ್ವ ಮುನಿರಾತ್ಮ, ದೇವದೇವಾತ್ಮ, ದೇವ ಪರಮಾತ್ಮ, ಇಷ್ಟಪ್ರದಾತ, ಶಕ್ತಿಧರ ತಾತ, ಲೋಕ ವಿಖ್ಯಾತ, ಕೃಶಾನುರೇತ, ನೀಲಲೋಹಿತಾ, ಮೇಧಾ ಕಳತ್ರ, ಜಗನ್ನಾಟಕ ಸೂತ್ರಧಾರಾ, ಕಾಯೋ ಘೃಶ್ಣೇಶ್ವರಾ, ನೀಲಕಂಠೇಶ್ವರಾ, ಶೃಂಗ ಶೈಲೇಶ್ವರಾ, ಹರಸು ಅಮೃತೇಶ್ವರಾ ನೀನೆ ಪುರಹರೇಶ್ವರ, ಸ್ವಾಮಿ ದಿಗ್ದಿಗಂಬರಾ, ಪಾರ್ವತೀ ಮನೋವಿಹಾರಾ;

ಅಂಧಕನ ಕೊಂದವನೆ, ನಾ ಕಂದ ನೀ ತಂದೆ, ನೀನೆನ್ನ ತಂದೆ, ನಿನ್ನಡೆಗೆ ಬಂದೆ, ನೊಂದೆ ಬಹು ಬೆಂದೆ, ಕಾಪಾಡು ಎಂದೆ, ನಾನಹೆನು ಪಂದೆ, ನಿನ್ನಾಜ್ಞೆಯಿಂದೆ ಈ ಜಗದ ನಿಂದೆ, ಸಹಿಸುತಲಿ ನಿಂದೆ, ಕೈ ನೀಡು ಎಂದೆ, ನೀನೆ ನಡೆಸೆಂದೆ, ಪಾಪಕೂಪದಿ ಎನ್ನ ಪಾರು ಮಾಡೈ ಇಂದೆ, ಜಗದ ಸಾಗರದಲ್ಲಿ ಕ್ಷುದ್ರಕಣಕಿಂ ಕೀಳು, ನಾ ನಿನ್ನ ಆಳು, ನೀನೆನ್ನನಾಳು ಪ್ರಭೋ ಪಾಹಿಮಾಂ ಶರಣು ಶರಣೆಂದೆ;

ರಜನಿಪತಿಧರನೆ, ದಿವ್ಯ ಮಹಿಮಾನ್ವಿತನೆ, ನಿನ್ನ ಕೀರ್ತಿ ಅಪಾರ, ಕರುಣ ಪಾರಾವಾರ, ಗೂಢಪಾದಧರಾ, ಚಂದ್ರಮೌಳೀಶ್ವರ, ಭೋಗಲಿಂಗೇಶ್ವರ, ವೈದ್ಯನಾಥೇಶ್ವರ, ರಾಮನಾಥೇಶ್ವರ, ಸೋಮನಾಥೇಶ್ವರಾ, ಮಹಾಕಾಳೇಶ್ವರಾ, ಅರ್ಧನಾರೀಶ್ವರಾ; ಸಲಹು ಸಲಹೊ ಸಲಹು ಶಿವ ಶಂಕರಾ, ಸ್ವಾಮಿ ಅಭಯಂಕರಾ, ಓಂಕಾರ ಓಂಕಾರ, ಓಂಕಾರಾ;

ಸುರತಟಿನಿಧರನೆ ಶುಭ್ರಾಂಶುಧರನೆ, ನೀ ಭಸ್ಮಧಾರಿ, ಗಜಚರ್ಮಧಾರಿ, ಶಿವಧನುರ್ಧಾರಿ ನೀ ಗಂಧಧಾರಿ, ಮನ್ಮಥವಿದಾರಿ, ಮೃಗಧಾರಿ, ಪುರವೈರಿ, ರುದ್ರಾಕ್ಷಮಾಲಾ, ತಾಂಡವ ವಿಲೋಲ, ನೀ ಕಾಲ ಕಾಲ, ನಿನಗಾಭೂಷ ವ್ಯಾಲಾ;

ಹರಿಮಿತ್ರಬಂಧು, ಕಾರುಣ್ಯ ಸಿಂಧು, ಸತಿಯಳಳಿಯೆ ನೊಂದು, ಹಿಮಗಿರಿಗೆ ಬಂದು, ತಪದಲ್ಲಿ ನಿಂದು ಕಾಯುತಿರಲಂದು , ತನ್ನ ನೀನೊಲಿಯೆಂದು, ಉಮೆ ಬಂದು ತಪನಿಂದು, ಬಲವಂದು ಛಲದಿಂದ ನಿನ್ನ ಗೆಲಿದಂದು ಜಗಕೆ ಮಂಗಳವಾಯ್ತು ಗಂಗಾಧರಾ, ಆರ್ದ್ರ ಚರ್ಮಾಂಬರಾ;

ಅಂಧಕನ ಕೊಂದು ಜಗಕೆ ನೆಮ್ಮದಿ ತಂದ ಕಪಾಲಹಸ್ತ, ಉಪಮನ್ಯು ಬಾಲ ಶೋಕ ಶಮನ ಉದಾರಿ ಕ್ಷೀರಾಬ್ಧಿಯಿತ್ತ ಸುವಿಶಾಲ ಚಿತ್ತಾ; ತಾಂಡವ ಪ್ರಮತ್ತಾ;

ಸೋಮಾಕ್ಷ ಸೋಮ, ದಿನಪಾಕ್ಷ ಭೀಮ, ನಿಟಿಲಾಕ್ಷ ಉಗ್ರ ಮಹದೇವದೇವ, ಕಾಮಾಂಧಹರ ರುದ್ರ, ವಿಷಮಾಕ್ಷ ವಿಷಕಂಠ ಶಿತಿಕಂಠ ಗೌರೀವರ ಶರ್ವಾಣಿ ವದನಾಂಬುಜ ಮುದಿತ ಮುಕುಲಿತ ತೇಜಪುಂಜ ಬಿಡೌಜಾನುಜ ಪ್ರೀತ, ಭಸಿತ ಭೂಷಿತ, ಗಾಂಡೀವೀ ಪಾಶುಪತಾಸ್ತ್ರಪ್ರದಾತ ಪಾಂಡವ ಪಕ್ಷ ಸಂರಕ್ಷ, ನೇತ್ರಾಗ್ನಿ ಸಂದಗ್ಧ ಮದನ ಸತಿ ದುಃಖಶಮನ ಉಮಾವರಣ ಸ್ಕಂದ ಜನನ ಕಾರಣ, ಪಾರ್ವತೀ ಕೃತ ಬಾಲ ಶಿರಹರಣ, ಮಾತಂಗ ವದನ ಜೀವನಕಾರಣ, ವಾರಣಾಜಿನ ಧಾರಣ, ನಿಖಿಲ ನಿರ್ಜರ ಭೀತಿ ಹರಣ, ದುರ್ಜನ ಭಯ ಕಾರಣಾ;

ಜನಪದರ ಅಧಿದೈವ ಬಹುಜನರ ಕುಲದೈವ ಶ್ರಿತಜನರ ಕಾವ, ನಂದ ನಂದನ ಭಾವ, ಎನ್ನಯ್ಯ ಸಾಂಬಯ್ಯ ಲೋಕೈಕ ಚೆಲುವಯ್ಯ, ಕಾವರಿನ್ನಿಲ್ಲಯ್ಯ ಅನ್ಯರನು ನಾ ಬೇಡೆನಯ್ಯ, ನೀನೆನ್ನ ಕಾಯಬೇಕಯ್ಯ, ನಾ ದಾಸನಯ್ಯ, ನೀನೆನ್ನ ಒಡೆಯನಯ್ಯ; ಅಹಂಮ್ಮಿರದ, ನೋವಿರದ, ಭಯವಿರದ, ಭವವಿರದ, ನಾವೆಯನ್ನಿತ್ತು ಶಾಶ್ವತದ ತಾವನ್ನು ಇತ್ತು ಸಲಹು ಸಲಹಯ್ಯ, ಎನಗೇನು ಬೇಕೆಂದು ನಿನಗಷ್ಟೆ ಗೊತ್ತು, ನಂಬಿಕೆಯ ಬಿತ್ತು, ದುರ್ದಶೆಗೆ ನಾನಾಗದೊಲು ತುತ್ತು, ಎತ್ತೆತ್ತು ಪಾಪ ಕೂಪದಿಂದ ಎನ್ನ ಮೇಲೆತ್ತು, ಈ ಹೊತ್ತು ಆ ಹೊತ್ತು ಎನ್ನದಲೆ ಈಗಲೀಗಲೆ ಎತ್ತು ಕೃತ್ತಿವಾಸಾ;

ಗುಣವೃಂದ ಸಂಪನ್ನ, ಸತ್ಕೀರ್ತಿ ಸಂಪನ್ನ, ಬಲವೀರ್ಯ ಸಂಪನ್ನ, ಶೌರ್ಯ ಸಂಪನ್ನ, ಕಾರುಣ್ಯ ಸಂಪನ್ನ, ಆಪನ್ನ ರಕ್ಷಕನೆ ದುಷ್ಟಜನ ಶಿಕ್ಷಕನೆ ಕಾಯೊ ಕಾಯೊ ಪದಕಮಲ ಭೃಂಗವಾಗೆನ್ನ ನೀ ಮಾಡಯ್ಯ, ವಿಹರಿಸುವೆ ಮೈಮರೆತು, ಇಹ ಮರೆತು, ಭಯ ಮರೆತು, ಭವ ಮರೆತು, ತ್ರಾಹಿಮಾಂ ತ್ರಾಹಿಮಾಂ ತ್ರಿಪುರಸುಂದರೀ ರಮಣ, ಚೆನ್ನಕೇಶವ ಸಖನೆ ಮೃತ್ಯುಂಜಯಾ ಶೂಲಪಾಣೇ ಶರಣು ಶರಣು ಶರಣು.

*****

ನೀ ಕರೆಯುವ ತನಕ . . .

- ಟಿ.ಎಸ್. ಶ್ರವಣಕುಮಾರಿ

ಸೀತಾರಾಮರಾಯರು ಎಂದಿನಂತೆಯೇ ಸಂಜೆ ವಾಕಿಂಗ್‌ಗೆ ಹೊರಟಾಗ ಸೊಸೆ ಗಿರಿಜಾಗೆ ಆತಂಕವಾಯಿತು. ಕಳೆದ ವಾರವಷ್ಟೇ ಆಸ್ಪತ್ರೆಯಿಂದ ಮನೆಗೆ ಬಂದಿರುವುದು. ಅದೂ ಮನೆಗೆ ಕಳಿಸುವ ಮುನ್ನ ಡಾಕ್ಟರು ಅದೆಷ್ಟು ಎಚ್ಚರಿಕೆ ಕೊಟ್ಟಿದ್ದಾರೆ. 'ಇದೇ ಸ್ಥಿತಿಯಲ್ಲಿ ತುಂಬಾ ದಿನ ಮುಂದುವರೆಯಲು ಸಾಧ್ಯವಿಲ್ಲ; ನಾಲ್ಕು ಬ್ಲಾಕ್‌ಗಳಿವೆ. ಎಲ್ಲಾ ೯೦% ಮೇಲೇನೆ ಇದೆ. ಬೈಪಾಸ್ ಆಗ್ಲೇಬೇಕು. ಇಲ್ದಿದ್ರೆ ಯಾವಾಗ್ಬೇಕಾದ್ರೂ ಮತ್ತೊಮ್ಮೆ ಅಟ್ಯಾಕ್ ಆಗ್ಬಹುದು. ಉಳ್ಕೊಳ್ಳೋದೇ ಕಷ್ಟವಾಗಬಹುದು' ಎಂದೆಲ್ಲಾ ಹೇಳಿದ್ದಾರೆ. ಇವರು ನೋಡಿದ್ರೆ ಹೀಗೆ ಹೊರಟು ನಿಂತಿದಾರಲ್ಲ ಅನ್ನಿಸಿ ತಡೆಯಲಾಗದೆ "ಮಾವ, ಒಂದು ಸ್ವಲ್ಪ ದಿನ ಮನೇಲಿ ರೆಸ್ಟ್ ತೊಗೊಳಿ. ಆಪರೇಶನ್ ಆಗಿ ನೀವು ಹುಷಾರಾದ್ಮೇಲೆ ವಾಕಿಂಗ್ ಹೋಗೋರಂತೆ" ಎಂದಳು. ಚಪ್ಪಲಿಯನ್ನು ಮೆಟ್ಟಿಕೊಳ್ಳುತ್ತಾ "ಇನ್ನೆಷ್ಟು ದೂರ ಹೋಗ್ತೀನಮ್ಮ, ರೋಡ್ ಕೊನೇಲಿರೋ ಪಾರ್ಕಿಗ್ಹೋಗಿ ಒಂದ್ ಸ್ವಲ್ಪ ಹೊತ್ತು ಕೂತಿದ್ದು ಬರ್ತೀನಿ. ಹದಿನೈದು ದಿನದಿಂದ ಕಟ್ಟಿ ಹಾಕ್ದಂಗೆ ಆಗ್ಬಿಟ್ಟಿದೆ. ಕಾಲಾಡಿಸ್ಕೊಂಡು ಬಂದ್ರೆ ಹಗುರಾಗುತ್ತೆ" ಎನ್ನುತ್ತಾ ಹೊರಟೇಬಿಟ್ಟರು. 'ಏನು ಹಿಡಿದು ನಿಲ್ಸೋಕಾಗತ್ತಾ, ಸುಧೀರನಾದ್ರೂ ಸ್ಕೂಲಿಂದ ಬಂದಿದ್ರೆ ಜೊತೆಗ್ಹೋಗು ಅಂತ ಕಳಿಸ್ಬೋದಿತ್ತು. ಇನ್ನಿವ್ರು ಬಂದ್ಮೇಲೆ ನೀನ್ಯಾಕ್ಬಿಟ್ಟೆ ಅಂತ ನನ್ಮೇಲೇ ರೇಗ್ತಾರೆ' ಅಂದುಕೊಂಡ ಗಿರಿಜಾ ಅವರು ಬೀದಿಕೊನೆಯಲ್ಲಿ ಮರೆಯಾಗುವ ತನಕವೂ ನೋಡುತ್ತಾ ನಿಂತಳು.

ಎಂದಿನಂತೆಯೇ ಪಾರ್ಕಿನಲ್ಲಿ ಒಂದು ಸುತ್ತು ನಿಧಾನವಾಗಿ ಓಡಾಡಿಕೊಂಡು ಬಂದು ತಮ್ಮ ಮಾಮೂಲಿ ಕಲ್ಲುಬೆಂಚಿನ ಮೇಲೆ ಉಸ್ಸಪ್ಪಾ ಎನ್ನುತ್ತಾ ಕುಳಿತು ಹಾಗೆಯೇ ಯೋಚನೆಗೆ ಬಿದ್ದರು. 'ಈಗ ಹದಿನೈದು ದಿನಕ್ ಮುಂಚೆ ಎಷ್ಟರಾಮಾಗಿ ಓಡಾಡ್ಕೊಂಡಿದ್ದೆ. ಮೆಟ್ಲು ಹತ್ತೋವಾಗ ಏರಿನ ರಸ್ತೆ ಬಂದ್ರೆ ಸ್ವಲ್ಪ ಮೇಲುಸ್ರು ಬಂದ್ಹಂಗೆ ಆಗ್ತಿತ್ತಷ್ಟೆ. ವಯಸ್ಸಾಗ್ಲಿಲ್ವೆ, ಹೋದ ನವೆಂಬರ್ಗೇ ಎಪ್ಪತ್ನಾಲ್ಕು ತುಂಬಿ ಎಪ್ಪತ್ತೈದು ನಡೀತಿದೆ. ಆದ್ರೂ ಹೋದ ವರ್ಷ ಇದ್ದ ಆರೋಗ್ಯ ಈಗಿಲ್ಲಾಂತ ಗೊತ್ತಾಗ್ತಿದೆ. ಕಮಲಾಗೆ ಕ್ಯಾನ್ಸರ್ ಅಂತ ಗೊತ್ತಾದಾಗ್ಲೇ ನಂಗೂ ಅನಾರೋಗ್ಯ ಕಾಡಕ್ಕೆ ಶುರುವಾಗಿದ್ದು. ಅದ್ಯಾಕೋ ಅವ್ಳು ತನ್ನ ಅನಾರೋಗ್ಯಾನ ಯಾರತ್ರೂ ಹಂಚ್ಕೊಳ್ದೆ ಒಳೊಳ್ಗೇ ಅನುಭವಿಸ್ಕೊಂಡ್ಬಿಟ್ಳು. ಪರಿಸ್ಥಿತಿ ಎಲ್ರಿಗೂ ಗೊತ್ತಾಗೋ ಹೊತ್ಗೆ ಕೈಮೀರೋಗಿತ್ತು. ಸತೀಶನೂ, ಗಿರಿಜಾನೂ ಪಾಪ ತುಂಬಾನೇ ಚೆನ್ನಾಗಿ ನೋಡ್ಕೊಂಡ್ರು. ಅವ್ನೊ ಒಬ್ನೇ ದುಡ್ಯೋನು. ಪ್ರೈವೇಟ್ ಆಫೀಸು. ಇಂಥದಕ್ಕೆಲ್ಲಾ ಏನೂ ಸಹಾಯ ಸಿಕ್ಕಲ್ಲ. ಹೇಗಾದ್ರೂ ಅವ್ಳನ್ನ ಉಳಿಸ್ಕೊಳ್ಳೇ ಬೇಕೂಂತ ಊರಿನ ಎರಡೆಕ್ರೆ ಹೊಲ ಮಾರಿದ್ದಾಯ್ತು. ಹೊಲ ಹೋಯ್ತಷ್ಟೆ... ಅವ್ಳು ಉಳೀಲಿಲ್ಲ... ಪಾಪ ಚಿತ್ರಾನೂ ಒಂದು ತಿಂಗಳು ಇಲ್ಲೇ ಇದ್ದು ಅಮ್ಮನ ಸೇವೆ ಮಾಡಿ, ಅವ್ಳು ಹೋದ್ಮೇಲೇ ವಾಪಸ್ಸು ಹೋಗಿದ್ದು.' ಕಣ್ಣಂಚು ತುಂಬಿತು ರಾಯರಿಗೆ. 'ಎಷ್ಟೊಂದು ನರಳಿ ನರಳಿ ಸತ್ತಳಲ್ಲ' ಎಂದು ಹೆಂಡತಿಯನ್ನು ನೆನಸಿಕೊಂಡು ದುಃಖ ಒತ್ತಿಕೊಂಡು ಬಂದು ಗಂಟಲುಬ್ಬಿ ಕಣ್ಣೀರು ಹರಿಯತೊಡಗಿತು. ಜೇಬಿನಿಂದ ಕರ್ಚೀಪನ್ನು ತೆಗೆದು ಕಣ್ಣೊರಸಿಕೊಂಡರು.

'ಇನ್ನೂ ವರ್ಷವೂ ಕಳೆದಿಲ್ಲ, ಅಷ್ಟರಲ್ಲಾಗಲೇ ತನ್ನ ಪರಿಸ್ಥಿತಿ ಹೀಗಾಗ್ಬೇಕೆ? ಕಮಲಾ ಹೋದ ದುಃಖಾನೇ ಇನ್ನೂ ಹಸಿಯಾಗಿರೋವಾಗ ತನ್ನೊಂದು ಹೆಸ್ರಿಟ್ಬಾಯ್ತಲ್ಲ. ಎಷ್ಟು ಲಕ್ಷಗಳು ಖರ್ಚಿಗೆ ಬರತ್ತೋ, ಸತೀಶ ದುಡ್ಡಿಗೇನ್ಮಾಡ್ತಾನೋ

ಅನ್ನಿಸಿತು. ಇನ್ನು ಊರಲ್ಲಿರೋದು ಒಂದ್ಮನೆ, ಮುಂದಿರೋ ಮೂರು ಮಳಿಗೆಗಳು. ಅದ್ರಿಂದ ಬರೋ ಬಾಡಿಗೆ ತನ್ನ ಕೈಖರ್ಚಿಗಾಗ್ತಿದೆ. ಏನೋ ಸಮಯಾಂದ್ರೆ ಅಷ್ಟೋ ಇಷ್ಟೋ ಮಕ್ಕಳ ಕೈಗಿಡಕ್ಕಾಗತ್ತೆ. ಈಗ ಅದ್ನೂ ಸೀದ್ಬುಟ್ರೆ ಮುಂದೇನ್ಗತಿ! ದೊಡ್ಡ ಸೈಟು. ಹೈವೇ ಪಕ್ದಲ್ಲಿರೋದ್ರಿಂದ ಒಳ್ಳೇ ಬೆಲೆಯಿರೋ ಜಾಗ. ಅಲ್ಲೇನು ಯಾರೂ ಹೋಗಿರಕ್ಕಾಗಲ್ಲ. ಯಾವತ್ತಿದ್ರೂ ಮಾರೋದೇ. ಮಾರಿದ್ರೆ ಚಿತ್ರಂಗೆ ಒಂದು ಸ್ವಲ್ಪ ಕೊಟ್ಟು ಸತೀಶ ಇಲ್ಲೊಂದು ಮನೆ ಮಾಡ್ಕೊಳಕ್ಕೆ ಒಂದಷ್ಟು ಸಹಾಯವಾಗತ್ತೇನೋ. ಈಗ್ಲೇ ಕೊಟ್ಬಿಟ್ರೆ ಅವಸ್ರದಲ್ಲದೀವೀಂತ ಒಳ್ಳೆ ಬೆಲೆ ಬರಲ್ಲ. ಆದ್ರೆ ಆಪರೇಶನ್ಗೆ ಖರ್ಚಾಗೋ ಲಕ್ಷ-ಲಕ್ಷಕ್ಕೆ ದಾರಿ ಯಾವುದಿದೆ?' ಬಗೆಹರಿಯಲಿಲ್ಲ. ಪ್ರತಿದಿನವೂ ಪಾರ್ಕಿಗೆ ಬಂದಾಗ ಸಿಗುತ್ತಿದ್ದ ಶ್ರೀನಿವಾಸ ಸೆಟ್ಟರು ಇವತ್ಯಾಕೋ ಬಂದಿಲ್ಲ. ನರಸಿಂಹೈಯ್ಯಂಗಾರ್ ಎಂದುಕೊಳ್ಳುತ್ತಿರುವಾಗಲೇ ಅಷ್ಟು ದೂರದಲ್ಲಿ ಕಂಡರು. ಇವರನ್ನು ಕಂಡವರೇ ಬಳಿಬಂದು ಖುಷಿಯಾಗಿ "ಯಾಕೆ? ಹದಿನೈದು ದಿನ್ದಿಂದ ಕಾಣ್ಲಿಲ್ಲ. ಸ್ವಲ್ಪ ಸೊರಗಿದ ಹಾಗೂ ಕಾಣ್ತಿದೀರಿ. ಆರೋಗ್ಯ ತಾನೆ?" ಎಂದು ಕ್ಷೇಮ ಸಮಾಚಾರ ವಿಚಾರಿಸಿಕೊಂಡರು. ಸೀತಾರಾಮಯ್ಯನವರಿಗೂ ಯಾರೊಂದಿಗಾದರೂ ಹಂಚಿಕೊಳ್ಳಬೇಕೆನಿಸಿತ್ತು. ಅನಾರೋಗ್ಯ ಪರ್ವವನ್ನು ವಿವರವಾಗಿ ತೋಡಿಕೊಂಡರು. "ಆಪರೇಶನ್ ಮಾಡಿಸ್ಕೊಂಡ್ಬಿಡಿ, ಬೇಗ ಹುಷಾರಾಗ್ತೀರಿ. ನನ್ನೋಡಿ, ಹತ್ತು ವರ್ಷ ಆಯ್ತು ಆಪರೇಶನ್ ಆಗಿ. ಗುಂಡುಗಲ್ಲಿನ ಹಾಗಿದೀನಿ. ನಮ್ಮ ಸೆಟ್ರು ಈಗಾರು ತಿಂಗ್ಳಾಯ್ತಲ್ವಾ ಮಾಡಿಸ್ಕೊಂಡು. ಹೇಗಿದಾರ್ನೋಡಿ" ಎಂದು ಒಂದಷ್ಟು ಧೈರ್ಯ ತುಂಬಿದರು. "ಇವತ್ಯಾಕೋ ಸೆಟ್ರು ಕಾಣ್ಲಿಲ್ಲ" ಎಂದ ಸೀತಾರಾಮಯ್ಯನವರಿಗೆ "ಅವ್ರು ಮಗಳ ಮನೆಗೆ ಹೋಗಿದಾರೆ, ಮೊಮ್ಮಗನ ಹುಟ್ಟಿದ ಹಬ್ಬವಂತೆ. ಮುಂದಿನ ವಾರವೇ ಬರೋದು" ಹೀಗೇ ಮಾತನಾಡುತ್ತಿರುವಾಗ ಕತ್ತಲಾಗುತ್ತಾ ಬಂತು. 'ಇನ್ನು ತಡವಾದರೆ ಗಿರಿಜಂಗೆ ಆತಂಕವಾಗತ್ತೆ' ಎಂದುಕೊಂಡು "ಬರ್ತೀನಿ, ನಾಳೆ ಸಿಗೋಣ. ಮನೇಲಿ ಆತಂಕ ಪಟ್ಕೋತಾರೆ" ಎಂದು ಮೇಲೆದ್ದರು.

ಅಂದುಕೊಂಡಂತೆಯೇ ಗಿರಿಜಾ ಗೇಟಿನಲ್ಲೇ ನಿಂತಿದ್ದವಳು ಇವರನ್ನು ನೋಡಿ ಒಳಗೆ ಹೋದಳು. ಒಳಗೆ ಬಂದು ಕುರ್ಚಿಯಲ್ಲಿ ಕುಳಿತ ತಕ್ಷಣ "ಮಾವ, ಸ್ವಲ್ಪ ಹಾರ್ಲಿಕ್ಸ್ ತೊಗೊಳಿ" ಎಂದು ಲೋಟ ಹಿಡಿದಳು. ಸುಮ್ಮನೇ ಕುಡಿಯುತ್ತಾ ಕೂತವರನ್ನೇ ನೋಡುತ್ತಾ, "ಆಯಾಸವಾಗ್ಲಿಲ್ವೇ? ನಂಗೆ ತುಂಬಾ ಆತಂಕ ಆಗಿತ್ತು" ಎಂದಳು. "ಇಲ್ಲಮ್ಮಾ, ಮೊದಲು ಹತ್ತು ರೌಂಡ್ ವಾಕಿಂಗ್ ಮಾಡ್ತಿದ್ದೆ, ಇವತ್ತು ಬರೀ ಒಂದೇ ಒಂದು ರೌಂಡು ಬಂದು ಕೂತ್ಕೊಂಡೆ. ನರಸಿಂಹೈಯ್ಯಂಗಾರ್ ಸಿಕ್ಕಿದ್ರು. ಒಂದ್ಸ್ವಲ್ಪ ಹೊತ್ತು ಮಾತಾಡ್ತಾ ಕೂತಿದ್ದೆ. ಹೊತ್ತೋಯ್ತು" ಎನ್ನುತ್ತಾ ಲೋಟವನ್ನು ಸೊಸೆಯ ಕೈಯಲ್ಲಿಟ್ಟರು. ಅಷ್ಟರಲ್ಲಿ ಸತೀಶ ಆಫೀಸಿನಿಂದ ಬಂದ. ಶೂ ತೆಗೆಯುವಾಗಲೇ "ಅಪ್ಪ ಹೇಗಿದೀರಿ" ಎನ್ನುತ್ತಾ ಅವರ ಕಡೆ ನೋಡಿದ. "ಆರಾಮಾಗಿದೀನಪ್ಪ. ಸಾಯಂಕಾಲ ಪಾರ್ಕ್‌ವರ್ಗೂ ನಡ್ಕೊಂಡು ಹೋಗಿದ್ದೆ" ಎಂದಾಗ ಆತಂಕದಿಂದ "ಅಪ್ಪಾ, ಹಾಗೆಲ್ಲಾ ಒಬ್ರೊಬ್ರೇ ಓಡಾಡ್ಬೇಡಿ. ಏನಾದ್ರೂ ಹೆಚ್ಚುಕಮ್ಮಿಯಾದ್ರೆ... ಆಪರೇಶನ್ ಆದ್ಮೇಲೆ ಓಡಾಡೋರಂತೆ" ಎನ್ನುತ್ತಾ ಕೈಕಾಲು ತೊಳೆದುಕೊಂಡು ಬಂದು ಕುಳಿತ. ಗಿರಿಜಾ ಬಿಸ್ಕತ್ತು, ಕಾಫಿಯನ್ನು ತಂದು ಕೈಗಿತ್ತಳು. ಅಪ್ಪಂಗೆ ಎನ್ನುವಂತೆ ನೋಡಿದ. "ಈಗಷ್ಟೇ ಹಾರ್ಲಿಕ್ಸ್ ಕುಡ್ದೆ ಕಣಪ್ಪ. ಮತ್ತೀಗ ಕಾಫಿ ಕುಡುದ್ರೆ ಊಟ ಸೇರಲ್ಲ, ರಾತ್ರಿ ನಿದ್ರೆ ಬರಲ್ಲ" ಎಂದು ಸೀತಾರಾಮಯ್ಯನವರೇ ಉತ್ತರಿಸಿದರು. ಸ್ವಲ್ಪ ಹೊತ್ತು ಯೋಚನೆಯಲ್ಲಿ ಮುಳುಗಿದ್ದ ಸತೀಶ "ಅಪ್ಪಾ, ಇವತ್ತು ಗುಂಡಣ್ಣಂಗೆ ಫೋನ್ ಮಾಡಿದ್ದೆ. ಮನೆಗೆ ಯಾರಾದ್ರೂ ಗಿರಾಕೀನ ನೋಡು

ಅಂತ್ಹೇಳಿದೀನಿ” ಎಂದ. “ಏನಂದ ಅವ್ನು?” ಎಂದು ಕೇಳಿದ್ದಕ್ಕೆ “ಅವಸರಕ್ಕೆ ಬೀಳ್ಬೇಡಿ, ಕಮ್ಮೀಗ್ ಕೇಳ್ತಾರೆ. ನೋಡ್ಕೊಂಡು ಕುದುರಿಸಿಕೊಡ್ತೀನೀಂದ. ವಿಷ್ಯ ಹೀಗಿದ್ಯಪ್ಪ. ಆದಷ್ಟು ಬೇಗ ಆಪರೇಶನ್ ಆಗ್ಬೇಕಿದೆ. ತುಂಬಾ ದಿನ ಎಳ್ಯೋಹಾಗಿಲ್ಲ ಅಂದಿದೀನಿ” ಎಂದ. “ಎಷ್ಟು ಬರ್ಬಹುದಂತೆ?” ಎಂದಿದ್ದಕ್ಕೆ “ಎಪ್ಪತ್ತೈದು ಎಂಭತ್ತು ಲಕ್ಷಕ್ಕೇನೂ ಮೋಸವಿಲ್ಲ. ಅರ್ಜೆಂಟಿಗೆ ಬಿದ್ರೆ ಅರವತ್ತೈದರ ಸುತ್ತಮುತ್ತ ಆಗ್ಬೋದೂಂದ” ಎಂದಾಗ ಯೋಚನೆಗೆ ಬಿದ್ದರು.

ರಾತ್ರಿ ಊಟ ಮಾಡಿ ಮಲಗಿದಾಗಲೂ ಅದೇ ಯೋಚನೆ ಕಾಡತೊಡಗಿ ನಿದ್ರೆ ಹತ್ತಲಿಲ್ಲ. ಅದ್ರಲ್ಲಿ ಹತ್ತತ್ರ ಹತ್ತು ಲಕ್ಷ ಆಪರೇಶನ್‌ಗೇ ಖರ್ಚಾಗಿ ಹೋಗತ್ತೇನೋ. ಇನ್ನೆಷ್ಟು ಉಳ್ಯತ್ತೆ? ನಂಗೆ ತಿಂಗಳು-ತಿಂಗಳೂ ಬರುವ ಯಾವ ಆದಾಯವೂ ಇಲ್ಲ. ಬಡ್ಡಿ ಬರುವಂತೆ ಮಾಡ್ಕೊಂಡು ಅದರಲ್ಲೇ ಹತ್ತೋ, ಹದಿನೈದು ಲಕ್ಷವನ್ನೋ ಆಪದ್ಧನವಾಗಿ ಬ್ಯಾಂಕಲ್ಲಿಟ್ಟುಕೊಳ್ಬೇಕು. ಆಮೇಲೆ ಅಬ್ಬಬ್ಬಾಂದ್ರೆ ಇಬ್ರಿಗೂ ಇಪ್ಪತ್ತಿಪ್ಪತ್ತು ಲಕ್ಷ ಕೊಡಬಹುದೇನೋ.. ಹೀಗೆ ಏರ್ತಿರೋ ರೇಟಲ್ಲಿ ಸತೀಶ ಈ ಊರಲ್ಲಿ ಒಂದು ಸೈಟು ಕೊಳ್ಳಕ್ಕೂ ಆಗಲ್ಲ. ಚಿತ್ರಾನೂ ಅದ್ರಲ್ಲಿ ತನಗೆಷ್ಟು ಬರ್ಬೇಕೂಂತ ನಿರೀಕ್ಷೆ ಮಾಡ್ತಾಳೋ. ತಕ್ಷಣ ಎಲ್ಲಾದ್ರೂ ತೊಡಗಿಸ್ಕೊಳ್ದಿದ್ರೆ ಇಟ್ಟಿದ್ದುಡ್ಡು ಹಾಗೇ ಕರಗಿಹೋಗತ್ತೆ. ಬರ್ತಾ-ಬರ್ತಾ ದುಡ್ಡಿನ ಬೆಲೆಯೂ ಕಮ್ಮಿಯಾಗ್ತಾಹೋಗತ್ತೆ.. ಆದ್ರೆ ಈಗ ಆಪರೇಶನ್‌ಗೆ ಇನ್ಯಾವ ದಾರಿಯಿದೆ? ಎಷ್ಟು ಯೋಚಿಸಿದರೂ ಸಮಸ್ಯೆ ಬಗೆಹರಿಯಲಿಲ್ಲ. ಹತ್ತು ಹದಿನೈದು ಲಕ್ಷ ಯಾರು ಸಾಲ ಕೊಡ್ತಾರೆ? ಕೊಟ್ರೆ ಎಷ್ಟು ಅಸಲು, ಬಡ್ಡಿ ತಿಂಗಳಿಗೆ ಕಟ್ಬೇಕಾಗ್ಬಹುದು. ಇದು ಸಾಧ್ಯವಾಗೋ ಮಾತಲ್ಲ’ ಅನ್ನಿಸಿತು. ‘ಈಗ ಸದ್ಯಕ್ಕೆ ತಲೆ ಕೆಡಿಸ್ಕೊಳೋದ್ಬೇಡ; ಗುಂಡಣ್ಣ ಏನು ವ್ಯವಹಾರ ಕುದುರುಸ್ತಾನೋ ನೋಡೋಣ. ಆಮೇಲೆ ಯೋಚನೆ ಮಾಡಿದ್ರಾಯ್ತು’ ಅಂದುಕೊಂಡ ಮೇಲೆ ತಡರಾತ್ರಿಯ ನಂತರ ಹೊರಳಿ ಹೊರಳಿ ಸಾಕಾಗಿ ಯಾವಾಗಲೋ ನಿದ್ರೆಹತ್ತಿತು.

ವಾರವೆಲ್ಲಾ ಹಾಗೆಯೇ ಕಳೆಯಿತು. ರಾಯರು ದಿನವೂ ಸಂಜೆ ಪಾರ್ಕಿಗೆ ಹೋಗಿಬರುತ್ತಿದ್ದರು. ವಾರದ ಕೊನೆಗೆ ಶ್ರೀನಿವಾಸ ಸೆಟ್ಟರೂ ಬಂದವರು “ನಾನೂ ಆಪರೇಶನ್‌ಗೆ ಮುಂಚೆ ತುಂಬಾ ಹೆದರಿದ್ದೆ ರಾಯ್ರೇ. ಎಲ್ಲಿಗೆ ಹೋಗಕ್ಕೂ ಬರಕ್ಕೂ ಧೈರ್ಯ ಇರ್ಲಿಲ್ಲ. ಈಗ್ನೋಡಿ, ಹಾಯಾಗಿ ತಿರುಗಾಡಿಕೊಂಡಿದೀನಿ, ನೀವೂ ಮಾಡಿಸ್ಕೊಂಡ್ಬಿಡಿ. ಆರಾಮಾಗಿಬಿಡ್ತೀರಿ” ಎಂದು ಮತ್ತಷ್ಟು ಹುಮ್ಮಸ್ಸು ತುಂಬಿದರು. ಇಬ್ಬರು ಗೆಳೆಯರೂ ಹುರಿದುಂಬಿಸಿದ ಮೇಲೆ ರಾಯರಿಗೂ ಆದಷ್ಟು ಬೇಗ ಮಾಡಿಸಿಕೊಳ್ಳೋದೇ ಒಳ್ಳೇದು ಅನ್ನಿಸಿಬಿಟ್ಟಿತು. ಸಂಜೆ ಸತೀಶನ್ನ ಏನಾಯ್ತೂಂತ ಕೇಳ್ಬೇಕು ಎಂದುಕೊಳ್ಳುತ್ತಿರುವಾಗ ಸತೀಶನೇ “ಅಪ್ಪಾ, ಗುಂಡಣ್ಣನ ಫೋನ್ ಬಂದಿತ್ತು. ಯಾರೋ ಪಾರ್ಟಿ ಸಿಕ್ಕಿದಾರಂತೆ. ಅರವತ್ತೈದರಲ್ಲಿದಾರಂತೆ, ಇವ್ನು ಎಪ್ಪತ್ತರ ಕಮ್ಮಿ ಆಗಲ್ಲ ಅಂದಿದಾನಂತೆ. ಅರ್ವತ್ತೇಳು-ಅರ್ವತ್ತೆಂಟಕ್ಕೆ ಆಗ್ಬೋದು. ಆದ್ರೆ ಅವ್ರು ಪೂರ್ತಿ ವೈಟಲ್ಲೇ ಕೊಡೋದೂಂದಿದಾರೆ” ಎಂದ. “ಒಳ್ಳೇದೇ ಆಯ್ತಲ್ವಾ” ಎಂದು ರಾಯರೆಂದಿದ್ದಕ್ಕೆ “ಹಾಗಲ್ಲಪ್ಪ; ಅಷ್ಟು ದುಡ್ಡಿಗೂ ಟ್ಯಾಕ್ಸ್ ಕಟ್ಬೇಕಾಗತ್ತೆ. ಅವ್ರು ಇಪ್ಪತ್ತು-ಇಪ್ಪತ್ತೈದು ಲಕ್ಷ ಬ್ಲಾಕ್ಲಿ ಕೊಟ್ಟಿದ್ರೆ ಅನುಕೂಲವಾಗಿರೋದು. ಈಗ ಟ್ಯಾಕ್ಸ್‌ಗೇ ಲಕ್ಷಾಂತರ ಸುರುದ್ರೆ ಕೈಗೆ ಏನ್ಬಂದಂಗಾಯ್ತು? ಮಾರಿದ ದುಡ್ಡನ್ನ ಇಲ್ಲಿ ತಕ್ಷಣವೇ ಒಂದು ಪ್ರಾಪರ್ಟಿ ಮೇಲೆ ಹಾಕಿದ್ರೆ ಟ್ಯಾಕ್ಸ್ ಉಳ್ಯತ್ತೆ. ಆದ್ರೆ ಈ ಸಧ್ಯಕ್ಕೆ ಹಾಕೋ ಅಷ್ಟು ದುಡ್ಡು ಉಳ್ಯಲ್ವೇ”

ಅಂದವನು ಸ್ವಲ್ಪ ಹೊತ್ತು ಬಿಟ್ಟು "ಬೇರೆ ಯಾರ್ನಾದ್ರೂ ನೋಡೂಂದಿದೀನಿ" ಎಂದ. ಏನು ಹೇಳಲೂ ತೋಚದೆ ರಾಯರೂ ಸುಮ್ಮನಾದರು.

ಎಂದಿನಂತೆಯೇ ದಿನಗಳು ಕಳೆಯತೊಡಗಿತು. ಈಗ ಪಾರ್ಕಿನಲ್ಲಿ ಮೂರ್ನಾಲ್ಕು ಸುತ್ತು ಹಾಕಲು ಆರಂಭಿಸಿದ್ದರು. ಸ್ವಲ್ಪ ಬವಳಿ ಬಂದಂತಾದರೆ ಜೇಬಿನಲ್ಲಿರುವ ಸಾರ್ಬಿಟ್ರೇಟ್ ಮಾತ್ರೆಯನ್ನು ನಾಲಗೆಯ ಕೆಳಗಿಟ್ಟುಕೊಂಡು ಕೂರುತ್ತಿದ್ದರು. ಸರಿ ಹೋಯಿತು ಅನ್ನಿಸಿದ ಮೇಲೆ ಆ ಸುತ್ತನ್ನು ಮುಗಿಸಿ ಮನೆಕಡೆಗೆ ಹೊರಡುತ್ತಿದ್ದರು. ವಾರದ ಕೊನೆಯಲ್ಲಿ ಶ್ರೀನಿವಾಸ ಸೆಟ್ಟರು ಮತ್ತೆ ಕಾಣಲಿಲ್ಲ. "ಯಾಕೋ ಹೇಳಿಹೋಗಲಿಲ್ಲ. ಆಪರೇಶನ್ ಆದ್ಮೇಲೆ ಹತ್ತು ವರ್ಷ ವಯಸ್ಸು ಕಮ್ಮಿಯಾಗಿದೆ ನೋಡಿ. ಎಲ್ಲಂದ್ರಲ್ಲೇ ಸುತ್ತಕ್ಕೆ ಶುರುಮಾಡಿದಾರೆ" ಎಂದರು ಅಯ್ಯಂಗಾರರು. "ನಿಜ ನಿಜ" ಎಂದ ರಾಯರಿಗೆ "ನೋಡಿ ಅದಕ್ಕೇ ಹೇಳಿದ್ದು ನೀವೂ ಬೇಗ ಮಾಡಿಸ್ಕೊಂಡ್ಬಿಡಿ. ಎಲ್ಲಿ ಓಡಾಡೋವಾಗ್ಲೂ ಭಯವಿರಲ್ಲ" ಎಂದರು. "ನಮ್ಮ ಊರಲ್ಲಿನ ಮನೆ ಮಾರಾಟವಾಗೋದಕ್ಕೆ ಕಾಯ್ತಿದೀವಿ. ಆದ ತಕ್ಷಣ ಮಾಡಿಸ್ಕೊಂಡ್ಬಿಡೋದೆ" ಎನ್ನುತ್ತಾ ರಾಯರು ಮೇಲೆದ್ದರು.

ಸಂಜೆ ಸತೀಶ ಒಳ್ಳೆಯ ಸುದ್ದಿಯನ್ನೇ ತಂದಿದ್ದ. ಯಾರೋ ಗಿರಾಕಿ ಎಪ್ಪತ್ತು ಲಕ್ಷಕ್ಕೆ ಕೊಂಡುಕೊಳ್ಳಲು ಬಂದಿದ್ದರು. ನಲವತ್ತು ಬಿಳಿಯಲ್ಲಿ, ಮೂವತ್ತನ್ನು ಕಪ್ಪಲ್ಲಿ ಕೊಡಲು ಒಪ್ಪಿಕೊಂಡಿದ್ದರು. ತಿಂಗಳೊಳಗೇ ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುತ್ತೇವೆಂದಿದ್ದರು. ರಾಯರಿಗೂ ಖುಷಿಯಾಯಿತು. "ಮುಂದಿನ ವಾರದ ಕೊನೆಯಲ್ಲಿ ಬಂದು ಹತ್ತು ಲಕ್ಷ ಅಡ್ವಾನ್ಸ್ ಕೊಟ್ಟು ಅಗ್ರಿಮೆಂಟ್ ಮಾಡಿಸ್ಕೊಂಡು ಹೋಗ್ತಾರಂತೆ. ಅದಾದ್ಮೇಲೆ ಆಪರೇಶನ್ ಡೇಟ್ ತೊಗೊಳ್ಳೋಣ" ಎಂದಾಗ ರಾಯರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಬಹಳ ದಿನಗಳ ಮೇಲೆ ರಾತ್ರಿ ಚೆನ್ನಾಗಿ ನಿದ್ರೆ ಬಂತು. ಮರುದಿನ ಅದನ್ನು ಅಯ್ಯಂಗಾರರೊಂದಿಗೆ ಹಂಚಿಕೊಂಡು ಖುಷಿಪಟ್ಟಿದ್ದೂ ಆಯಿತು.

ಇನ್ನೆರಡು ದಿನದಲ್ಲೇ ಬೆಳಗ್ಗೆ ಸತೀಶ ಕಾಫಿ ಕುಡಿಯುತ್ತಾ ಪೇಪರೋದುತ್ತಿದ್ದವನು "ಅಪ್ಪಾ, ನಿಮ್ಮ ಸ್ನೇಹಿತರ ಹೆಸ್ರು ಶ್ರೀನಿವಾಸ ಸೆಟ್ಟಿ ಅಂತಾನಾ. ಶ್ರೀನಿವಾಸ ಪೇಪರ್ ಮಾರ್ಟ್‌ನ ಮಾಲಿಕರಾ" ಅಂದ. ಕಾಫಿ ಕುಡಿಯುತ್ತಿದ್ದ ರಾಯರು "ಹೌದು, ಅವರೇ, ಯಾಕೀಗ?" ಕೇಳಿದರು. "ಹೋದ ಶುಕ್ರವಾರ ಬೆಳಗ್ಗೆ ಅಂಗಡಿಗೆ ಹೋಗ್ತಿರೋವಾಗ ಆಕ್ಸಿಡೆಂಟ್ ಆಗಿ ತಲೆಗೆ ಪೆಟ್ಟು ಬಿದ್ದಿತ್ತಂತೆ. ನಿನ್ನೆ ಸಂಜೆ ಶೇಖರ್ ನರ್ಸಿಂಗ್ ಹೋಂನಲ್ಲಿ ತೀರ್ಕೊಂಡರಂತೆ. ಅವ್ರ ಫೋಟೋ ಸಮೇತ ಅವರ ಮಗ ವಿನಯ್ ಸೆಟ್ಟಿ ಪೇಪರಲ್ಲಿ ವಿವರವಾಗಿ ಹಾಕ್ಸಿದಾನೆ ನೋಡು" ಎಂದು ತೋರಿಸಿದ. ಹೌದು, ಶ್ರೀನಿವಾಸ ಸೆಟ್ಟರೇ. ರಾಯರ ಮೈ ಬೆವರಲಾರಂಬಿಸಿತು. ತಲೆ ಧಿಮ್ಮೆನ್ನತೊಡಗಿತು. ತಕ್ಷಣ ಸತೀಶ ಎದ್ದು ಹೋಗಿ ಸಾರ್ಬಿಟ್ರೇಟನ್ನು ತಂದು ನಾಲಗೆಯ ಕೆಳಗಿಟ್ಟು "ಅಪ್ಪ ರಿಲ್ಯಾಕ್ಸ್ ಮಾಡಿ. ನಾನು ತೋರ್ಸಿ ತಪ್ಪು ಮಾಡ್ದೆ" ಎಂದು ಒದ್ದಾಡಿಕೊಂಡ. ಸ್ವಲ್ಪ ಹೊತ್ತಿನ ನಂತರ ತಹಬಂದಿಗೆ ಬಂದ ರಾಯರು "ಈಗ ಸರಿಹೋಯ್ತು ಬಿಡು. ನೀನು ತಿಳಿಸದೇ ಇದ್ರೂ ಇವತ್ತು ಸಾಯಂಕಾಲ ತಿಳೀತಿತ್ತಲ್ವಾ" ಎಂದರು ಸಾವಧಾನವಾಗಿ.

ಸಂಜೆ ಅಯ್ಯಂಗಾರರೊಡನೆ ಇದೇ ವಿಷಯ ಮಾತನಾಡಿ ಇಬ್ಬರೂ ಒದ್ದಾಡಿಕೊಂಡರು. "ಎಷ್ಟು ಖುಷಿಯಾಗಿ ದಿನವೂ ವಾಕಿಂಗ್‌ಗೆ ಬರ್ತಿದ್ರು. ಆಪರೇಶನ್ ಆದ್ಮೇಲೆ ಹತ್ವರ್ಷ ವಯಸ್ಸು ಕಮ್ಮಿಯಾದ ಹಾಗಿದೆ ರಾಯ್ರೆ" ಅಂತಿದ್ರು ಎಂದಾಗ ನಿಧಾನವಾಗಿ ಅಯ್ಯಂಗಾರರು "ಡಾಕ್ಟ್ರು ಆಪರೇಶನ್ ಮಾಡಿ ಬಳಲಿರೋ ಹೃದಯಕ್ಕೆ ಬಲ ತುಂಬಬಹುದು. ಆದ್ರೆ ಆಯಸ್ಸು ಕೊಡಕ್ಕಾಗಲ್ವಲ್ಲ ರಾಯ್ರೆ" ಎಂದಾಗ 'ನಿಜ' ಎಂದು ಒಪ್ಪಿಕೊಂಡರು. ಏಕೋ ಎರಡು ಸುತ್ತು ಬರುವಷ್ಟರಲ್ಲಿ ಇಬ್ಬರಿಗೂ ಬೇಸರ ಬಂದು "ನಾಳೆ ವಾಕ್ ಮಾಡೋಣ. ಇವತ್ಯಾಕೋ ಮನಸ್ಸು ಸರಿಯಿಲ್ಲ" ಎಂದುಕೊಂಡು ತಂತಮ್ಮ ಮನೆಯ ಕಡೆಗೆ ಹೊರಟರು. ಮರುದಿನವೂ ಸೆಟ್ಟರ ನೆನಪೇ ಮುಂದಾಗಿ ಬೇಗನೇ ಮನೆ ಸೇರಿಕೊಂಡರು. ಅಂದು ರಾತ್ರಿ ಮಲಗುವ ಮುಂಚೆ ಸತೀಶ "ಅಪ್ಪಾ, ನಾಳೆ ಗುಂಡಣ್ಣ ಅವ್ರನ್ನ ಕರ್ಕೊಂಡು ಬರ್ತಿದಾನೆ. ಬೆಳಗ್ಗೆ ಅಗ್ರಿಮೆಂಟ್ ಪೇಪರ್ನ ಟೈಪ್ ಮಾಡಿಸ್ಕೊಂಡು ಸಂಜೆ ನಾಕು ಗಂಟೆ ಹೊತ್ಗೆ ಬರ್ತಾರಂತೆ" ಎಂದ. "ಸರಿಯಪ್ಪ" ಎಂದು ಹೋಗಿ ಮಲಗಿಕೊಂಡವರಿಗೆ ರಾತ್ರಿಯಿಡೀ ನಿದ್ರೆಯಿಲ್ಲ. ಅಯ್ಯಂಗಾರರೆಂದ 'ಆಯಸ್ಸು ಕೊಡಕ್ಕಾಗಲ್ಲ' ಅಂದಿದ್ದ ಮಾತು ಗಿರಗಿಟ್ಟಲೆಯಂತೆ ತಲೆಯಲ್ಲಿ ಸುತ್ತತೊಡಗಿತು.

ಬೆಳಗ್ಗೆ ಕಾಫಿ ಕುಡಿಯುತ್ತಾ ಮಗನನ್ನು ಕರೆದು "ಸತೀಶ, ಗುಂಡಣ್ಣನ್ನ ಬರೋದ್ಬೇಡ ಅಂತ್ಹೇಳು. ಅವಸರದಲ್ಲಿ ಮನೆ ಮಾರೋದ್ಬೇಡ. ಆ ರಸ್ತೇನ ಫೋರ್‌ಲೇನ್ ಮಾಡ್ತಿದಾರೆ. ಇನ್ನೆರಡು ವರ್ಷಕ್ಕೆ ಚೆನ್ನ ಆಗತ್ತೆ ಅದ್ರ ಬೆಲೆ. ಆಗ ಮಾರಿದ್ರೆ ಚಿತ್ರಂಗೆ ಪಾಲು ಕೊಟ್ರೂ ಉಳ್ದಿದ್ರಲ್ಲಿ ನೀನಿಲ್ಲಿ ಒಂದು ಸೈಟು ಕೊಳ್ಳೋಕಾದ್ರೂ ಆಗತ್ತೆ. ನಿಧಾನವಾಗಿ ನಿನ್ನ ಕೈಲಾದಾಗ ಮನೆ ಕಟ್ಕೊಳೋವಂತೆ" ಎಂದಾಗ ಸತೀಶ ಬೆಚ್ಚಿಬಿದ್ದು, "ಅಪ್ಪ ಏನ್ಮಾತಾಡ್ತಿದೀರಿ. ಮೊದ್ಲು ನಿಮ್ಮ ಆಪರೇಶನ್ ಆಗ್ಲಿ. ಸೈಟೋ, ಮನೆಯೋ ಮಾಡ್ಕೊಳೋದು ನನ್ನ ಹಣೆಬರಹದಲ್ಲಿ ಬರ್ದಿದ್ರೆ ಅದಾಗತ್ತೆ. ಮೊದ್ಲು ನೀವು ಹುಷಾರಾಗ್ಬೇಕು" ಎಂದ. "ಇಲ್ಲ, ಸತೀಶ. ಅವತ್ತಿಂದ್ಲೂ ಈ ವಿಷಯ ನನ್ನ ಕೊರೀತಾನೇ ಇತ್ತು. ಆಪರೇಶನ್ ಆದ್ರೆ ಇನ್ನೆಷ್ಟು ವರ್ಷ ಬದುಕಬಹುದು ಹೇಳು. ಈಗಾಗ್ಲೇ ಎಪ್ಪತ್ತೈದು. ನೋಡ್ಬೇಕಾದ್ದನ್ನೆಲ್ಲಾ ನೋಡಾಗಿದೆ. ಬದುಕಿರ್ಲೇ ಬೇಕೂನ್ನಕ್ಕೆ ನಂಗೇನೂ ಕಾರಣ ಇಲ್ಲ. ಆಯಸ್ಸು ಇರೋಷ್ಟು ದಿನ ಆ ಯಮ ನನ್‌ಹತ್ರ ಸುಳ್ಯಲ್ಲ. ಸೆಟ್ರ ಹಾಗೆ ನಾನೂ ಆಪರೇಶನ್ ಹಿಂದೇ ಹೊರ್ಟು ಹೋದ್ರೆ 'ನಾನೂ ಹೋದೆ, ಗಂಟೂ ಹೋಯ್ತು' ಆಗತ್ತಷ್ಟೇ. ಇದು ನನ್ನ ನಿರ್ಧಾರ. ಇನ್ನು ಇದ್ರ ಬಗ್ಗೆ ಮಾತ್ಬೇಡ. ಗುಂಡಣ್ಣಂಗೆ ಫೋನ್ ಮಾಡ್ಬಿಡು. ಅವಸ್ರ ಇಲ್ಲ ಒಳ್ಳೇ ರೇಟ್ ಬಂದಾಗ ಹೇಳೂಂತ ಎಂದವರೇ ಸ್ನಾನ ಮಾಡಲು ಎದ್ದರು. ಗಂಡ ಹೆಂಡತಿ ಇಬ್ಬರೂ ಅರ್ಥವಾಗದವರಂತೆ ಒಬ್ಬರನ್ನೊಬ್ಬರು ನೋಡಿಕೊಂಡರು.

ರಾಯರು ನಿರಾಳವಾಗಿ ಸ್ನಾನ ಮಾಡಿಬಂದು ದೇವರ ಮುಂದೆ ದೀಪವಿಟ್ಟು "ಕಾಪಾಡಪ್ಪ" ಎನ್ನುತ್ತಾ ಕೈಮುಗಿದರು. ಶರ್ಟು, ಪ್ಯಾಂಟು ಹಾಕಿಕೊಂಡು ಬಂದು "ರೇಶನ್ ಅಂಗ್ಡೀಗೆ ಹೋಗ್ಬರ್ತೀನಿ. ಕಾರ್ಡು, ದುಡ್ಡು ಕೊಡಮ್ಮ" ಎಂದರು ಸೊಸೆಯ ಬಳಿ.

ಎಲ್ಲವೂ ಬಾಡಿಗೆಗೆ

- ಬಿ. ಆರ್. ರವೀಂದ್ರನಾಥ

ಇತ್ತೀಚೆಗೆ ಹಸುಗೂಸು ಮಾರಾಟದ ವ್ಯಾಪಕ ಜಾಲದ ಬಗ್ಗೆಯ ಒಂದು ಸುದ್ದಿ ಬಂದಿತ್ತು. ಆರೋಪಿಗಳು ಮಕ್ಕಳಾಗದ ದಂಪತಿಗಳಿಗೆ ಬಾಡಿಗೆ ತಾಯ್ತನದ ಮೂಲಕ ಕಡಿಮೆ ಖರ್ಚಿನಲ್ಲಿ ಮಗು ಕೊಡುವುದಾಗಿ ನಂಬಿಸಿ ಬಳಿಕ ಕದ್ದ/ಕೊಂಡ ಹಸುಗೂಸುಗಳನ್ನು ದತ್ತು ಕೊಡಿಸುತ್ತಿದ್ದರೆಂದು ವರದಿಯಾಗಿದೆ.

ಒಂದು ಅಂದಾಜಿನ ಪ್ರಕಾರ ಭಾರತದಲ್ಲಿ ಒಂದು ಮಗುವಿಗೆ ಸುಮಾರು 20000 ದಿಂದ 45000 ಡಾಲರ್ ದರ ಇದ್ದರೆ ಅಮೇರಿಕಾದಲ್ಲಿ ಇದು 75000 ದಿಂದ 130000 ಡಾಲರ್ ದರವಿದೆ. ವಿಶ್ವ ಮಟ್ಟದಲ್ಲಿ ಬಾಡಿಗೆ ತಾಯ್ತನ ಸೇವೆ ದರಗಳು ಭಾರತದಲ್ಲಿ ಬಹಳ ಕಡಿಮೆ ಮಟ್ಟದಲ್ಲಿವೆ ಎಂದು ನಂಬಲಾಗಿದೆ. ಭಾರತದ ಬಾಡಿಗೆ ತಾಯ್ತನದ ಮಾರುಕಟ್ಟೆ 2.3 ಬಿಲಿಯ ಡಾಲರ್ ನಷ್ಟು ಎಂದು ಅಂದಾಜಿಸಲಾಗಿದೆ.

ಐವಿಎಫ್ ಕೇಂದ್ರಗಳು ತಾಯ್ತನದ ಪ್ರಯೋಗಾಲಯಗಳು. ಇಲ್ಲಿ ಸರೋಗಸಿ-ಬಾಡಿಗೆ ತಾಯ್ತನದ ಮೂಲಕ ಮಕ್ಕಳಾಗದಿರುವ ದಂಪತಿಗಳಿಗೆ ಜೈವಿಕವಾಗಿ ಅವರದೇ ಅಂಶಗಳಿರುವ ಮಕ್ಕಳನ್ನು ಹೆರಿಗೆಮಾಡಿಸಿ ಕೊಡುತ್ತಾರೆ. ಮಕ್ಕಳಾಗದಿರುವ ದಂಪತಿಗಳಿಗೆ ಇದು ಒಂದು ವರದಾನವೆಂದು ಮಾಧ್ಯಮಗಳಲ್ಲಿ ಪ್ರಚಾರವಾಗುತ್ತಿದೆ. ಈ ಪ್ರಕ್ರಿಯೆಯಲ್ಲಿ ದಂಪತಿಗಳಿಬ್ಬರಿಗೂ ಅಪರಿಚಿತಳಾದ ಒಬ್ಬ ಮಹಿಳೆ ಪ್ರಯೋಗಾಲಯದಲ್ಲಿ ತಯಾರಾದ ಭ್ರೂಣವನ್ನು, ಒಂಬತ್ತು ತಿಂಗಳುಗಳ ಕಾಲ ತನ್ನ ಗರ್ಭಕೋಶದಲ್ಲಿ ಇರಿಸಿಕೊಂಡು, ಹೆರಿಗೆಯ ನಂತರ ಆ ಮಗುವನ್ನು ದಂಪತಿಗಳಿಗೆ ದತ್ತು ಕೊಡುವದು. ಬೇರೊಬ್ಬರ ಮಗುವನ್ನು ತನ್ನ ಹೊಟ್ಟೆಯಲ್ಲಿ ಹೊರುವ ಕಾಯಕಕ್ಕಾಗಿ ಆ ಹೆಂಗಸಿಗೆ ಪ್ರಯೋಗಾಲಯದ ಮುಖಾಂತರ ದತ್ತುಪಾಲಕರಿಂದ ಇಂತಿಷ್ಟು ಎಂದು ಹಣ ಸಂದಾಯವಾಗುತ್ತದೆ.

ಕಾನೂನಿನಲ್ಲಿ ಬಾಡಿಗೆ ತಾಯ್ತನದ ಬಗ್ಗೆ ಸಾಕಷ್ಟು ಚರ್ಚೆಗಳಾಗಿವೆ. ಇದರ ಬಗ್ಗೆ ಇನ್ನೂ ಒಂದು ವಿಶೇಷ ಕಾನೂನು ಜಾರಿಗೆ ಬಂದಿರುವುದಿಲ್ಲ. ಲೋಕಸಭೆಯಲ್ಲಿ ಮಂಡಿಸಿದ ಮಸೂದೆಯೂ ಕಾನೂನಾಗಿರುವುದಿಲ್ಲ. Assisted Reproductive Technologies ಎಂಬ ವಿಭಾಗದಡಿ, Indian Council for Medical Research (ICMR) ನಿಂದ ಬಾಡಿಗೆ ತಾಯ್ತನದಿಂದಾಗುವ, ಆಗಬಹುದಾದ ಕಾನೂನಿನ ತೊಡಕುಗಳನ್ನು ನಿವಾರಿಸುವತ್ತ ಮಾರ್ಗದರ್ಶಿ ಸೂತ್ರಗಳು ಮಾತ್ರ ಈಗ ಚಾಲ್ತಿಯಲ್ಲಿವೆ.

ಬಾಡಿಗೆ ತಾಯ್ತನದ ಬಗ್ಗೆ ಚರ್ಚೆಯಲ್ಲಿ ಹೆಚ್ಚಾಗಿ ಕೇಳಿಬರುವ ಪ್ರಶ್ನೆಯೆಂದರೆ, ಲಕ್ಷಾಂತರ ಅನಾಥ ಮಕ್ಕಳು ನೋಡಿಕೊಳ್ಳುವವರಿಲ್ಲದೇ ಇರುವ ನಮ್ಮ ದೇಶದಲ್ಲಿ, ಅವರಿಗೊಂದು ನೆಲೆ ತೋರಿಸುವತ್ತ ಇರದ ಕಾಳಜಿ, ಕಾತುರ ಬಾಡಿಗೆ ತಾಯ್ತನದ ಬಗ್ಗೆ ಯಾಕಿದೆ ಎನ್ನುವುದು. ಅನಾಥ ಮಕ್ಕಳಿಗೆ ನೆಲೆ ಕೊಡಿಸುವದು ಎಂದರೆ, ಅವರನ್ನು ದತ್ತು ತೆಗೆದುಕೊಳ್ಳುವದು. ಖರ್ಚಿನ ವಿಷಯದಲ್ಲಿ, ದತ್ತು ತೆಗೆದುಕೊಳ್ಳುವದು ಅಂತಹ ದೊಡ್ಡ ಬಾಬತ್ತಲ್ಲ. ಮಗುವಿನ ಬಣ್ಣ, ಎತ್ತರ, ಮೂಗು, ಕಣ್ಣು ಎಂದು ನೂರೆಂಟು ಬೇಡಿಕೆ ಇಡದಿದ್ದರೆ, ದತ್ತು ತೆಗೆದುಕೊಳ್ಳುವದು ಬಹಳ ಸುಲಭವೆಂದು

ಸರಕಾರ, ದತ್ತು ಸಂಸ್ಥೆಗಳು ಹೇಳುತ್ತವೆ. ಇದಕ್ಕೆ ತದ್ವಿರುದ್ಧವಾಗಿ, ದತ್ತು ಪ್ರಕ್ರಿಯೆ ಬಹಳ ಕ್ಲಿಷ್ಟ ಮತ್ತು ನಂತರವೂ ಹಲವು ಸಂಕೀರ್ಣ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂಬ ನಂಬಿಕೆಯೂ ಇದೆ. ಹೀಗಾಗಿ, ಬಾಡಿಗೆ ತಾಯ್ತನದ ಮುಖಾಂತರ ಮಕ್ಕಳನ್ನು ಹೊಂದುವದು ತೊಂದರೆರಹಿತ ಎಂದು ಬಿಂಬಿಸಲಾಗುತ್ತಿದೆ.

ಬಾಡಿಗೆ ತಾಯ್ತನ ಪ್ರಯೋಗಾಲಯಗಳಲ್ಲಿ ನಡೆಯುವ ಪ್ರಕ್ರಿಯೆ. ಮಗುವನ್ನು ಹೊಂದಬೇಕೆನ್ನುವವರು ಪ್ರಯೋಗಾಲಯಕ್ಕೆ ಭೇಟಿ ನೀಡಿ, ಅಲ್ಲಿ ನೋಂದಣಿ ಮಾಡಿಸಿದ ಮಹಿಳೆಯರಲ್ಲಿ ಒಬ್ಬರ ಜೊತೆ ಕಾನೂನುರೀತ್ಯ ಒಪ್ಪಂದ ಮಾಡಿಕೊಳ್ಳುತ್ತಾರೆ. ಆ ಮಹಿಳೆ ವಿವಾಹಿತಳಾಗಿರಲಿ, ಅವಿವಾಹಿತಳಾಗಿರಲಿ, ಗರ್ಭಧಾರಣೆಯ ಆರು ತಿಂಗಳು ಮುನ್ನವೇ ಆ ಮಹಿಳೆಯು ಪ್ರಯೋಗಾಲಯದಲ್ಲಿ ತಪಾಸಣೆ ಹೊಂದಿ, ಹಲವಾರು ರೀತಿಯ ಪರೀಕ್ಷೆಗಳಿಗೆ ಒಳಗಾಗಿ ಸೂಚಿಸಿದ ಔಷಧಿಗಳನ್ನು ಸೇವಿಸಬೇಕು. ಅವಳು ಆ ಪ್ರಯೋಗಾಲಯದ ಕೇಂದ್ರದಲ್ಲಿಯೇ ಪ್ರಸವವಾಗುವವರೆಗೂ ವಾಸವಾಗಿರಬೇಕು. ಶ್ರೀಮಂತರ ಮಗುವನ್ನು ತನ್ನ ಹೊಟ್ಟೆಯಲ್ಲಿ ಹೊರುತ್ತಿರುವ ಕಾರಣದಿಂದ, ಆ ಇಡೀ ಕಾಲಘಟ್ಟದಲ್ಲಿ ತನ್ನನ್ನು ತಾನು ಅವರ ಸುಪರ್ದಿಗೆ ಕೊಟ್ಟುಕೊಂಡಿರಬೇಕು. ಅವಳ ಆಹಾರದ ವಿಷಯದಲ್ಲಿ ಅತ್ಯಂತ ಕಟ್ಟುನಿಟ್ಟಿನಲ್ಲಿ ಪ್ರಯೋಗಾಲಯದ ನಿರ್ದೇಶನದಂತೆ ನಡೆದುಕೊಳ್ಳಬೇಕು. ಇಷ್ಟೆಲ್ಲ ಕಷ್ಟಕ್ಕೆ ಅವಳಿಗೆ ನಾಲ್ಕರಿಂದ ಆರು ಲಕ್ಷ ರೂಪಾಯಿಗಳಷ್ಟು ಸಂಭಾವನೆ ಸಿಗುತ್ತದೆ. ಒಟ್ಟು ಖರ್ಚು ಇಪ್ಪತ್ತು ಲಕ್ಷಕ್ಕೂ ಮೇಲ್ಪಟ್ಟು ಇರುತ್ತದೆಂದು ಅಂದಾಜು.

ಸಾಹಿತ್ಯ, ಸಿನೇಮಾ, ರಂಗಭೂಮಿಗಳಲ್ಲಿ ತಾಯ್ತನದ ಮತ್ತು ಅದರ ಭಾವನಾತ್ಮಕ ಸಂಬಂಧಕ್ಕೆ ಅತಿಶಯವಾಗಿ ಬೆಲೆಕೊಡುವ ನಮ್ಮ ದೇಶದಲ್ಲಿ, ಬಾಡಿಗೆ ತಾಯಂದಿರೂ ತಾಯಿಯರೇ. ಅವರಿಗೂ ತಾವು ಹೊತ್ತು, ಹೆತ್ತ ಮಗುವನ್ನು ಬಿಟ್ಟುಕೊಡಲು ಒಂದೊಮ್ಮೆ ಮನಸ್ಸು ಸಿದ್ಧವಾಗದಿದ್ದರೆ? ದುಡ್ಡಿನಾಸೆಯಿಂದ ಬಂದ ಬಡ ಹೆಣ್ಣು ಒಂದು ಕಡೆ, ದುಡ್ಡು ಕೊಟ್ಟು ತಮ್ಮ ಜೀವನದ ದೊಡ್ಡ ಆಸೆಯನ್ನು ಪೂರೈಸಿಕೊಳ್ಳಲು ಕಾದಿರುವ ದತ್ತು ಪಾಲಕರು ಇನ್ನೊಂದೆಡೆ ಹಾಗೂ ಒಪ್ಪಂದವನ್ನು ಪೂರೈಸಿದರೆ ಸಾಕು ನಾನು ದುಡ್ಡು ಎಣಿಸಬಹುದು ಎಂದು ಕಾದಿರುವ ಪ್ರಯೋಗಾಲಯಗಳು ಮತ್ತೊಂದೆಡೆ ಇದ್ದರೆ, ಏನಾದೀತು? ಯಾರ ಆಸೆಗೆ ಪ್ರಾಮುಖ್ಯತೆ ದೊರಕೀತು ಎನ್ನುವದು ಊಹಿಸುವುದು ಕಷ್ಟವೇನಲ್ಲ.

ಇನ್ನು, ಮಾನಸಿಕ ಅಡಚಣೆಗಳು ದತ್ತು ಮಗುವಿನ ವಿಷಯದಲ್ಲಿರುವಷ್ಟೇ ಬಾಡಿಗೆ ತಾಯ್ತನದಲ್ಲಿವೆ. ಇಲ್ಲಿಯೂ ಕೂಡ, ಗರ್ಭಧಾರಣೆಯು ಪ್ರಯೋಗಾಲಯದಲ್ಲಿ, ಬೇರೆಬೇರೆ ಸ್ತ್ರೀ ಪುರುಷರ ಅಂಶದಿಂದ ನಡೆಯುವದರಿಂದ, ಆನುವಂಶಿಕತೆಯ ಅಭಿಮಾನಕ್ಕೇನೂ ಆಧಾರ ಸಿಗದು.

ಇಷ್ಟಾದರೂ ಬಾಡಿಗೆ ತಾಯಿಯ ಮುಖಾಂತರ ಮಕ್ಕಳನ್ನು ಪಡೆಯುವದು ಯಾಕೆ ಹೆಚ್ಚುತ್ತಿದೆ?

- ಮೊದಲನೆಯದಾಗಿ, ಜೀವನಶೈಲಿಯ ಕಾರಣಗಳಿಂದ ಎಷ್ಟೆಷ್ಟೋ ಬದಲಾವಣೆಗಳಾಗುತ್ತಿವೆ. ಸಹಜ ಗರ್ಭಧಾರಣೆ ಕಡಿಮೆಯಾಗುತ್ತಿರುವುದು ಅದರಲ್ಲಿ ಒಂದು ಪರಿಣಾಮ. ತೊಂದರೆಗೆ ಮೂಲವನ್ನು ಗುಣಪಡಿಸದೆ, ಕೃತಕ ವಾಗಿಯಾದರೂ ಮಕ್ಕಳನ್ನು ಪಡೆಯಲು ನಿರ್ಧರಿಸುವುದು ಒಂದು ಕಾರಣ.

- ಎರಡನೇ ಕಾರಣ ಭಾರತದಲ್ಲಿ ಕಮರ್ಶಿಯಲ್ ಕೃತಕ ಗರ್ಭಧಾರಣೆಯನ್ನು ನಿಯಂತ್ರಿಸಲು ಸರಿಯಾದ ಕಾನೂನು ಇಲ್ಲದಿರುವುದು.

- ಮೂರನೆಯದು ಇದರಿಂದ ಯೌವನಾವಸ್ಥೆಯಲ್ಲಿರುವ, ಬಡತನದಲ್ಲಿರುವ ಮಹಿಳೆಯರು ಹಣ ಗಳಿಸಬಹುದು ಎನ್ನುವುದು.

- ನಾಲ್ಕನೆಯದು ಇದರಿಂದ ಫರ್ಟಿಲಿಟಿ ಟೂರಿಸಂ ಹೆಚ್ಚುತ್ತಿದ್ದು ಕೃತಕ ಗರ್ಭಧಾರಣೆ ಕೇಂದ್ರಗಳ ಮೂಲಕ ದೇಶಕ್ಕೆ ಅಪಾರ ಹಣ ಹರಿದುಬರುತ್ತಿರುವುದು.

ಒಂದು ಮುಕ್ತ ಸಮಾಜದಲ್ಲಿ ಎಲ್ಲರಿಗೂ ಅವರವರಿಗೆ ಬೇಕಾದಂಥ ಜೀವನ ನಡೆಸಲು ಅವಕಾಶ ಬೇಕು ನಿಜ. ನ್ಯಾಯಸಮ್ಮತವಾದ ಯಾವುದೇ ಪದ್ಧತಿಯಿಂದ ಮಕ್ಕಳನ್ನು ಪಡೆಯಬೇಕು ಎನ್ನುವದೂ ಅವರವರಿಗೆ ಬಿಟ್ಟ ವಿಚಾರ. ಆದರೂ ಸಮಾಜವು ಈವರೆಗೆ ನಡೆದ ದಾರಿಯನ್ನು ಬಿಟ್ಟು ದಿಢೀರನೆ ಬೇರೆಯೇ ದಾರಿಯಲ್ಲಿ ನಡೆಯಲು ಶುರುಮಾಡಿದರೆ ಅದರಿಂದಾಗುವ ಅಡ್ಡ ಪರಿಣಾಮಗಳ ಬಗ್ಗೆ ಸಾಕಷ್ಟು ಯೋಚನೆ ಮಾಡಬೇಕಾಗುತ್ತದೆ.

ಹಣದ ಅವಶ್ಯಕತೆ ಇರುವಂತಹ, ಗರ್ಭಧರಿಸುವ ವಯಸ್ಸಿನಲ್ಲಿರುವ ಮಹಿಳೆಯರೇ ಹೆಚ್ಚಾಗಿ ಬಾಡಿಗೆ ತಾಯಂದಿರಾಗುತ್ತಾರೆ. ಕಾನೂನಿನಲ್ಲಿ ಅವರ ಹಿತರಕ್ಷಣೆಗೆ ವ್ಯವಸ್ಥೆಗಳನ್ನು ಮಾಡಿದ್ದರೂ, ಹಣವಂತರು ಮತ್ತು ಸ್ಥಳೀಯವಾಗಿ ಪ್ರಭಾವವುಳ್ಳ ವೈದ್ಯಕೀಯ ಪ್ರಯೋಗಾಲಯಗಳು ಈ ಮಹಿಳೆಯರ ಶೋಷಣೆ ಮಾಡದಿರುವಂತೆ ನೋಡಿಕೊಳ್ಳುವುದು ಹೇಗೆ?

ಬಾಡಿಗೆ ತಾಯ್ತನದ ಈ ಪೂರ್ತಿ ಪ್ರಕ್ರಿಯೆಯ ಕೇಂದ್ರ ಬಿಂದುಗಳು ಗರ್ಭಧಾರಣಾ ನೆರವು ಕೇಂದ್ರಗಳು. ಅವುಗಳು ಬಾಡಿಗೆ ತಾಯ್ತನವನ್ನು ಸಾಮಾಜಿಕ ಬದ್ಧತೆಯೆಂದು ಮಾಡುತ್ತಿಲ್ಲ. ಲಾಭಕ್ಕಾಗಿ ಗರ್ಭಧಾರಣಾ ನೆರವು ಕೇಂದ್ರಗಳು ದತ್ತು ಪಾಲಕರಿಗೆ, ಬಾಡಿಗೆ ತಾಯಂದಿರ ಮೂಲಕ, ತಂತ್ರಜ್ಞಾನ ಉಪಯೋಗಿಸಿ, ಅವರಿಗೆ ಬೇಕಾದ ದೈಹಿಕ ಗುಣಗಳಿಗೆ ಅತಿ ಸಮೀಪದ ಮಕ್ಕಳನ್ನು ಹೆರಿಗೆ ಮಾಡಿಸಿ ಕೊಡುತ್ತವೆ ಮತ್ತು ಈ ಕೆಲಸಕ್ಕೆ ಅಪಾರ ಲಾಭ ಗಳಿಸುತ್ತವೆ.

ದೇಶದಲ್ಲಿರುವ ಎಲ್ಲ ಅನಾಥ ಮಕ್ಕಳನ್ನು ದತ್ತು ತೆಗೆದುಕೊಂಡರೂ ಹೊಸ ಆರ್ಥಿಕತೆಯನ್ನು ಸೃಷ್ಟಿಸಲಾಗುವದಿಲ್ಲ. ಅದು ಇರುವ ಸಮಸ್ಯೆಗೆ ಒಂದು ಪರಿಹಾರ ಅಷ್ಟೆ. ಈ ಕಾರಣದಿಂದ ಅನಾಥ ಮಕ್ಕಳನ್ನು ದತ್ತು ಪಡೆಯುವದನ್ನು ಕೃತಕ ಗರ್ಭಧಾರಣೆ ನೆರವು ಕೇಂದ್ರಗಳು ಪ್ರೋತ್ಸಾಹಿಸುತ್ತಿಲ್ಲ ಎಂಬ ನಿಲುವೂ ಇದೆ.

ಕೃತಕ ಗರ್ಭಧಾರಣೆ, ಬಾಡಿಗೆ ತಾಯ್ತನದಲ್ಲಿ ತಂತ್ರಜ್ಞಾನದ ಅಪಾರವಾದ ಉಪಯೋಗವಿದೆ. ಪ್ರಯೋಗಾಲಯದಲ್ಲಿ ನಿಸರ್ಗವನ್ನು ಅನುಕರಿಸಿ ಸಿದ್ಧಿಸಿದ್ದೇವೆಂಬ ಮನುಷ್ಯನ ಗರ್ವವಿದೆ. ಆದರೆ ಈ ತಂತ್ರಜ್ಞಾನದ ಹಿಂದೆ ಆಗಾಧವಾದ ಹಣದ ಹೂಡಿಕೆಯಿರುತ್ತದೆ. ಈ ಹಣವನ್ನು ಹಿಂಪಡೆಯಬೇಕೆಂದರೆ, ಅಷ್ಟೊಂದು ಪ್ರಮಾಣದಲ್ಲಿ ಆಯಾ ಸೌಲಭ್ಯಗಳು/ ತಂತ್ರಜ್ಞಾನವನ್ನು ಉಪಯೋಗದಲ್ಲಿ ತರಬೇಕು. ಈಗ ಸದ್ಯದಲ್ಲಿ ರೋಗನಿದಾನದಲ್ಲಿ ಬಳಕೆಯಾಗುತ್ತಿರುವ ಎಕ್ಸ್-ರೇ,

ಸಿಟಿ ಸ್ಕ್ಯಾನ್, ಅಲ್ಟ್ರಾ ಸೌಂಡ್ ಸ್ಕ್ಯಾನ್ ಇತ್ಯಾದಿಗಳು ಅವುಗಳು ಹೊಸದಾಗಿ ಮಾರುಕಟ್ಟೆಗೆ ಬಂದಾಗ ಹೇಗೆ ಅವುಗಳ ಬಳಕೆಯನ್ನು ಅನಿವಾರ್ಯಗೊಳಿಸಲಾಯಿತೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ದತ್ತು ಮತ್ತು ಬಾಡಿಗೆ ತಾಯ್ತನದ ನಡುವಿನ ಚರ್ಚೆಯಲ್ಲಿಯೂ ಇದೇ ಅನ್ವಯವಾಗುತ್ತದೆ.

ನಮ್ಮಲ್ಲಿಯ ಬಡ ಹೆಣ್ಣುಮಕ್ಕಳಿಗೆ ಒಂದು ಉದ್ಯೋಗಾವಕಾಶವೆಂದು ಕೂಡ ಬಾಡಿಗೆ ತಾಯ್ತನವನ್ನು ಸಂತಾನೋತ್ಪತ್ತಿ ನೆರವು ಕೇಂದ್ರದವರು ಮಾಧ್ಯಮಗಳ ಮುಖಾಂತರ ಪ್ರಸಿದ್ಧಪಡಿಸುತ್ತಿದ್ದಾರೆ. ಹೆಣ್ಣು ಮಕ್ಕಳಿಗೆ ಕನ್ಯತ್ವವು ಅತ್ಯಮೂಲ್ಯ ಎಂದು ನಂಬಿಕೆ ಇರುವ ನಮ್ಮ ದೇಶದ ಮುಖ್ಯವಾಹಿನಿಗಳಲ್ಲಿ ಈ ತರಹದ ಸಂದೇಶಗಳು ಬರುತ್ತಿವೆ.

ವಿದೇಶಗಳಿಂದ ಆಮದಾದ ಇನ್ನೊಂದು ಸೂತ್ರ -Quality of life- ಜೀವಿತದ ಗುಣಮಟ್ಟ. ಕಾಯಿಲೆ ಕಸಾಲೆಯಿಂದ ಚೇತರಿಸಿಕೊಳ್ಳುವವರೆಗೆ ವಿಶ್ರಾಂತಿ ತೆಗೆದುಕೊಳ್ಳುವ ಬದಲಿಗೆ ವೈದ್ಯಕೀಯ ಚಿಕಿತ್ಸೆ ಪಡೆದು ಕೆಲಸಕ್ಕೆ ರಜೆ ಹಾಕದೆ ದುಡಿಯಬಹುದು ಎಂಬುದೇ ಈ ವಾದದ ತಿರುಳು. ಅದನ್ನೇ ವಿಪರೀತಕ್ಕೆ ತೆಗೆದುಕೊಂಡು ಹೋಗಿ ಮಕ್ಕಳನ್ನು ಸ್ವತಃ ಹೆರುವ ಬದಲು ಬಾಡಿಗೆ ತಾಯಿಗೆ ಹೊರಗುತ್ತಿಗೆ ಕೊಟ್ಟರೆ, ಅಷ್ಟು ಸಮಯವನ್ನು ಕಚೇರಿಗೆ ಹೋಗಿ ದುಡಿಯಬಹುದಲ್ಲ? ಅಸಂಘಟಿತ ವಲಯದ ಮಹಿಳೆ, ಇವತ್ತಿಗೂ ಯಾವ ಹಕ್ಕಿಗೆ-ಬಾಣಂತಿ ರಜಕ್ಕೆ ಹೋರಾಡುತ್ತಿದ್ದಾಳೆಯೋ, ಆ ಹಕ್ಕನ್ನು ಮುಂದುವರಿದ ಮಹಿಳೆ ಸ್ವ-ಇಚ್ಛೆಯಿಂದ ತಿರಸ್ಕರಿಸುತ್ತಿದ್ದಾಳೆ. ದಿನಗೂಲಿ ಅಸಂಘಟಿತ ಮಹಿಳೆಯಂತೆಯೇ ದುಡಿಮೆಯ ಅನಿಶ್ಚಿತತೆಯನ್ನು ಈ ಉಚ್ಚ-ಆದಾಯದ ಮಹಿಳೆ ಸ್ವ-ಸಂತೋಷದಿಂದ ಹೆಚ್ಚಿನ ಸ್ಥಾನಮಾನ, ಆದಾಯಗಳಿಗೋಸ್ಕರ ಅನುಭವಿಸುತ್ತಿದ್ದಾಳೆ. ಇತ್ತ ಮಗು ತನ್ನ ಪಾಡಿಗೆ ತಾನು ಬೇರೊಬ್ಬರ ಹೊಟ್ಟೆಯಲ್ಲಿ ಬೆಳೆಯುತ್ತಿರುತ್ತದೆ - ಹೇಗೂ ಕೈತುಂಬಾ ದುಡ್ಡು ಕೊಡುತ್ತೇನಲ್ಲ ಎಂಬ ನಿರಾಳ ಭಾವ ಬಂದರೆ ಆಶ್ಚರ್ಯವಿಲ್ಲ. Quality of life ಎನ್ನುವ ಧೋರಣೆಯನ್ನು ಎಲ್ಲಿಯವರೆಗೆ ಎಳೆಯಬಹುದು?

ಇದು ಕೊಳ್ಳುಬಾಕ ಸಂಸ್ಕೃತಿಯ ಮತ್ತೊಂದು ಆಯಾಮವೇ? ದುಡ್ಡಿದ್ದವರಿಗೆ ಹೊಸದೇನಾದರೂ ಮಾಡುವ ಚಪಲ ಇದ್ದದ್ದೇ. ಶಾರುಖ್ ಖಾನ್ ಮೂರನೆಯ ಮಗುವನ್ನು ಸರೋಗಸಿ ಮುಖಾಂತರ ಹೊಂದಿದ್ದಾರೆಂದು ಮಾಧ್ಯಮಗಳಲ್ಲಿ ಅಪಾರ ಪ್ರಚಾರ ದೊರೆಯಿತು. ಮಿಕ್ಕವರಿಗೆ ಅವರಂತಾಗುವ ಹಂಬಲವೂ ಗೊತ್ತಿರುವಂತಹದು. ಹೊಸದೇನಾದರೂ ಮಾಡಿ ಹೇಳಿಕೊಳ್ಳುವ ಆಸೆಯಿದ್ದವರಿಗೆ ಇದು ಇನ್ನೊಂದು ಹೊಸ ಸಾಧನೆಯ ವಿಷಯವೇ ಎಂದು ಸಂದೇಹ ಮೂಡುತ್ತದೆ.

ಬಾಡಿಗೆ ತಾಯ್ತನ ಪ್ರಯೋಗ ಮನೆಮನೆ ಮಾತಾಗಿ ಆತಂಕಗಳನ್ನು ಹುಟ್ಟುಹಾಕುತ್ತಿದೆ. ಬಾಡಿಗೆ ತಾಯ್ತನ ಹಲವಾರು ಆಸೆಗಳು, ಬೆಳವಣಿಗೆಗಳು, ಆರ್ಥಿಕ ಚಿಂತನೆಗಳು ಒಟ್ಟುಗೂಡಿ ಆಗಿರುವ ಒಂದು ಸಂಕೀರ್ಣ ಆಗುವಿಕೆ. ತಂತ್ರಜ್ಞಾನದ ದಾಪುಗಾಲಿನ ಹೆಜ್ಜೆಗಳನ್ನು ಹಿನ್ನಡೆಸುವದು ಬಹಳ ಕಷ್ಟ. ಪರಿಹಾರವಂತೂ ಅಸಾಧ್ಯ. ಹಣದಿಂದ ಎಲ್ಲವನ್ನೂ ಕೊಳ್ಳಬಹುದು ಎನ್ನುವವರ ಜೊತೆಜೊತೆಗೆ ಹಣಕ್ಕಾಗಿ ಏನೂ ಮಾಡಬಹುದು ಎನ್ನುವ ದನಿಯೂ ಸೇರಿಕೊಳ್ಳುತ್ತಿದೆ ಎನ್ನುವುದು ಆತಂಕದ ವಿಷಯವಾಗಿದೆ. ***

ಬೆಳ್ಳಕ್ಕಿಗಳ ಬಲಿ

– ಬೆಂ.ಶ್ರೀ. ರವೀಂದ್ರ

ಊರಕೆರೆಯ ಮಗ್ಗುಲಲ್ಲಿ
ಇದ್ದಿತೊಂದು ಅರಳ ಕಟ್ಟೆ
ರೆಂಬೆಕೊಂಬೆಗಳು ಬಾಚಿ
ಫಲಭರಿತ ವೃಕ್ಷ ಮುಗಿಲಗೆ

ಗೂಗೆ ಗಿಳ ಗೊರವಂಕ
ಟಿಟ್ಟಿಭ ಮರಕುಟಿಕ ಮೈನಾ
ವಿಧವಿಧದ ಪಕ್ಷಿ ಸಂಕುಲ
ಮರದಿ ತುಂಬಿದೆ ಕಲರವ

ಅಳಲು ಹಾವು ಇರುವೆ ಹಲ್ಲಿ
ಹೆಸರಿಲ್ಲದ ಹುಳದ ರಾಶಿಯು
ಮಂಗನಾಟ ಚಿಣ್ಣರಿಗೆ ಮುದವು
ಹರಟೆಕಟ್ಟೆಗೆ ನೆರಳ ಸುಖವು

ಅರಳಯಡಿ ಹನುಮ ದೇಗುಲ
ಪೂಜೆ ಆರತಿ ಪ್ರಸಾದ ವಿತರಣೆ
ಕೇಮರಾ ಕ್ಲಿಕ್ಕಿಸುವ ಯುವಪಡೆ
ನಿತ್ಯ ಅಲ್ಲಗೆ ಒಲದು ಬರುವರು

ದೂರದೂರಿನ ಕೊಕ್ಕೆ ಹಕ್ಕಿಯು
ಉದ್ದ ಕಾಲು ಉದ್ದ ಕತ್ತು ಹಳದಿ
ಪಾದ ಕಪ್ಪುಕೊಕ್ಕಿಗೆ ಬಿಳಯ ರೆಕ್ಕೆ
ಸಾಗರ ಹಾರಿ ಬರುವ ಬೆಳ್ಳಕ್ಕಿಯು

ಸಿತಂಬರದಲ ಸಂತಾನಕೆಂದು
ಮಹಿಷಪುರದ ಪಕ್ಕದೂರಲ
ಮರಿಯ ಮಾಡಿ ಮರಳಗೂಡಿಗೆ
ಹಾರುವ ಬದುಕೆಷ್ಟು ಚಿನ್ನಾಟವು

ಕೆರೆಯಲಾಡುತ ಮೀನು ತಿನ್ನುತ
ಹುಳು ಹುಪ್ಪಟೆಯ ಅಡಿಗೆಮಾಡಿ
ಗಂಡು ಹೆಣ್ಣಿನ ರಂಗಿನಾಟವು
ಗರ್ಭ ಕಟ್ಟುವ ಪ್ರಕೃತಿ ಮಾಟವು

ಹಕ್ಕಿ ಕೂಗಿದು ತುಂಬ ಕರ್ಕಶ
ಹಿಕ್ಕೆ ಬೀಳುವುದು ರಾಶಿ ರಾಶಿ
ನಿತ್ಯ ಗುಡಿಸಿ ನಾವು ಹೈರಾಣ
ಚಾವಡಿಯಲ ಬಿಸಿ ಚರ್ಚೆಯು

ಕಡಿಯಿರಿ ಅರಳ ರೆಂಬೆಕೊಂಬೆಯ
ಹಾಳು ಹಕ್ಕಿಗಳು ಹಾರಿ ಹೋಗಲ
ಪಂಚಾಯತಿಯಲ ಠರಾವು ಮಾಡಿ
ಕೊಡಲ ಕಾವಿಗೆ ಮರ ಬಲಯಿತ್ತರು

ಸತ್ತು ಬಿತ್ತು ಪ್ರಾಣಿಗಳ ಮರಿಗಳೆಲ್ಲ
ಮರಳ ಹೊರಡಲದ್ದ ಬೆಳ್ಳಕ್ಕಿ ಹಿಂಡು
ನೊಂದು ಯಮಪುರಿಯ ಸೇರಿತು
ಕೆರೆಯ ದಡ ಸ್ಮಶಾನದಂತೆ ಕಂಡಿತು

ಹಕ್ಕಿಗಳ ಮಾರಣ ಹೋಮವ
ಕಂಡ ಹನುಮ ದೇಗುಲವ ಬಿಟ್ಟು
ಮರಳದ ಕಿಷ್ಕಿಂಧೆಗೆ ಮನುಜಗೆಂದು
ಬುದ್ಧಿ ಬರುವುದೋ ರಾಮನೆನುತ

ಪ್ರಾಣಿ ಪರಿಸರ ತಜ್ಞರೆಲ್ಲ ಗಾಡಿಗಾಡಿಲ
ತುಂಬಿ ಬಂದು ಚಿತ್ರ ತೆಗೆದು ಪತ್ರ ಬರೆದು
ಜಗಕೆ ಟಾಂ..ಟಾಂ.ಟಾಂ... ಮಾಡಿದರು
ಚಾವಡಿಯ ಮಂದಿ ಕಾಣೆಯಾದರು

ತಿಳಯಿರಿ ಮಕ್ಕಳೆ ಜಗತ್ತು ಎಲ್ಲರ ಸ್ವತ್ತು
ಮನುಜಗೆ ಪ್ರಾಣಿ ಪರಿಸರಕೆ ಈ ಭೂಮಿ
ಚಿನ್ನದಾಸೆಗೆ ಕೋಳಯನು ಕೊಯ್ದಂತೆ
ಆಗದಿರಲ ಬದುಕು ಕೂಡಿ ನಡೆಯಲ.

***

ನವರಾತ್ರಿ ನಗೆ ಸಿಂಚನ

ಗಂಡಸಿಗೆ ಯಾಕೆ ಗೌರಿಯ ದುಃಖ

- ಜಿ. ವಿ. ಅರುಣ

ನನ್ನ ಈ ಲೇಖನವನ್ನು ಓದುವ ಮೊದಲು ನಿಮ್ಮಲ್ಲಿ ಒಂದು ವಿನಮ್ರ ನಿವೇದನೆ. ಈ ವೇದಿಕೆಯಲ್ಲಿರುವ ಗೌರಿಯರಿಗೋ ಅಥವಾ ನಿಮ್ಮ ಮನೆಯಲ್ಲಿರುವ ಗೌರಿ ಹೆಸರಿನವರಿಗೋ ಸಂಬಂಧಿಸಿದ ಲೇಖನ ಇದಲ್ಲ. ಚಕೋರಂಗೆ ಚಂದ್ರಮನ ಬೆಳಕಿನ ಚಿಂತೆ ಎನ್ನುವಂತೆ ನನಗೂ ಒಂದು ಚಿಂತೆ ಶುರುವಾಗಿತ್ತು. ಅದು ಪ್ರಾರಂಭವಾದ ಸನ್ನಿವೇಶವನ್ನು ನಿಮ್ಮ ಮುಂದೆ ತೆರೆದಿಡುತ್ತೇನೆ.

ಮೊನ್ನೆ ವಾಯುವಿಹಾರದಿಂದ ಹಿಂದಿರುಗುವಾಗ ನನಗೆ ಬಂದಿದ್ದೇ ಈ ಡೌಟು. ಒಳ್ಳೆಯ ಮಳೆಯಿಂದ ನಳನಳಿಸುತ್ತಿದ್ದ ಸುಂದರ ಉದ್ಯಾನವನದಲ್ಲಿ ತನು ದಣಿಯುವಂತೆ ಪ್ರಕೃತಿಯನ್ನು ಆಸ್ವಾದಿಸುತ್ತಾ ದೇಹ ದಣಿಯುವಂತೆ ಸುತ್ತುಗಳನ್ನು ಸುತ್ತಿ, ಆಚೆಕಡೆ ಬಂದಾಗ ಅಲ್ಲಿ ಒಳ್ಳೆಯ ತೊಗರಿಕಾಯಿ ಹಾಗೇ ಒಳ್ಳೆಯ ಬಟಾಣಿ ಎರಡನ್ನೂ ಮಾರುತ್ತಾ ಇದ್ದರು. ನಾನು ಯಾವುದನ್ನು ಕೊಳ್ಳಲಿ ಅಂತ ನೋಡ್ತಾ ಇರಬೇಕಾದ್ರೆ, ನನ್ನ ಹಿಂದೆ ರಾಯರು ಬಂದು, ಭುಜ ತಟ್ಟಿ "ಯಾಕೆ? ಏನ್ ತಗೋಬೇಕು ಅಂತ ಡೌಟ್ ಬಂದ್ಬಿಡ್ತಾ? ಬಿಡಿ, ಮನೆಯವರಿಗೆ ಹೇಳಿ. ಅವರಿಗೆ ಬೇಕಾದ್ದು ಅವರೇ ತೊಗೋತಾರೆ! ಗಂಡಸಿಗೆ ಯಾಕ್ರಿ ಗೌರಿ ದುಃಖ!" ಅಂತ ಹೇಳಿ ನಗುತ್ತಾ ಮುಂದೆ ಹೋದರು.

ಆಗಲೇ ಪ್ರಾರಂಭವಾದದ್ದು ನನ್ನ ಈ ಡೌಟು: "ಗಂಡಸಿಗೇಕೆ ಗೌರಿ ದುಃಖ" ಅಂದರೆ ಏನು? ಈ ಗಾದೆಯನ್ನು ಮಾಡಿದವರು ಯಾರು? ಹೆಂಗಸರೋ, ಗಂಡಸರೋ? ಅದನ್ನು ಯಾಕೆ ಹಾಗೆ ಹೇಳುತ್ತಾರೆ. ಅದು "ಗೌರಿಗೆ ಗಂಡಸಿನ ದುಃಖ" ಯಾಕೆ ಅಲ್ಲ? ಇತ್ಯಾದಿ.

ಅದನ್ನೇ ಯೋಚಿಸುತ್ತಾ ಮನೆಯೊಳಗೆ ಬಂದು, ಆ ಪ್ರಶ್ನೆಗಳ ಜೊತೆಗೆ "ಈ ಗೌರಿ ದುಃಖ ಎಂದರೆ ಏನು?" ಎಂದು ನನ್ನ ಯಜಮಾನಿಯನ್ನು ಕೇಳಿದೆ. ನನ್ನ ಈ ಪ್ರಶ್ನೆಗಳಿಂದ ಗಲಿಬಿಲಿಗೊಂಡು, ಉಗುಳು ನುಂಗುತ್ತಾ ಉತ್ತರ ಕೊಡುತ್ತಾಳೆ ಎಂದುಕೊಂಡು ಅವಳ ಕಡೆ ನೋಡಿದೆ. ಆದರೆ ಅವಳು ನಸುನಗುತ್ತಾ 'ಅಯ್ಯೋ ಪಾಪ' ಅನ್ನುವಂತೆ ನನ್ನನ್ನು ನೋಡುತ್ತಿದ್ದಳು. ನಾನು ಕೇಳಿದ ಪ್ರಶ್ನೆಗಳನ್ನು ನಾನೇ ಉಗುಳಿನ ಸಮೇತ ನುಂಗಿಕೊಂಡು, "ಹೋಗಲಿ, ಗೌರಿಗೆ ಯಾಕೆ ದುಃಖ ಆಗುತ್ತೆ?" ಎಂದು ಕೇಳಿದೆ.

"ಅದಕ್ಕೆ ನೂರಾರು, ಅಲ್ಲ ಅಲ್ಲ, ಲಕ್ಷಾಂತರ ಕೋಟ್ಯಾಂತರ ಕಾರಣಗಳು ಇರುತ್ತವೆ. ಆದರೆ ಸಿಂಪಲ್ಲಾಗಿ ಹೇಳಬೇಕಾದರೆ, ಗೌರಿಗೆ ದುಃಖ ಆದರೆ ಅದು ಗಂಡಸರಿಂದಲೇ! ಇಷ್ಟು ತಿಳಿದುಕೊಳ್ಳಿ, ಅಷ್ಟು ಸಾಕು." ಎಂದು ಖಡಾಖಂಡಿತವಾಗಿ ನ್ಯಾಯಾಧೀಶರ ಶ್ರೀಮದ್ಗಾಂಭೀರ್ಯದಿಂದ ಹೇಳಿದಳು.

“ಎಲ್ಲಕ್ಕೂ ಗಂಡಸರೇ ಕಾರಣ ಹೇಗೆ ಆಗ್ತಾರೆ? ಸ್ವಯಂಕೃತ ಅಪರಾಧಗಳು ಇರಬಹುದಲ್ಲ ಗೌರಿಯಾ ದುಃಖಕ್ಕೆ” ನಾನು ಕೇಳಿದೆ.

“ಇರಬಹುದು; ಆದರೆ ಕಾರಣಗಳು ಏನೇ ಇದ್ದರೂ ಗೌರಿಯ ದುಃಖವನ್ನು ಕಡಿಮೆ ಮಾಡುವುದು, ಅದು ಇಲ್ಲದಂತೆ ಮಾಡುವುದು ಗಂಡಸರ ಕೈಯಲ್ಲೇ ಇದೆ” ಎಂದಳು. ಮುಂದುವರೆಸಿ, “ಗಂಡಸಿಗೆ ಯಾಕೆ ಗೌರಿ ದುಃಖ ಗಾದೆಯ ನಿಜವಾದ ಅರ್ಥ ಏನು ಅಂತ ಗೊತ್ತೇ?” ಎಂದು ಕೇಳಿದಳು.

ನಾನು ಇಲ್ಲ ಎಂದು ತಲೆ ಅಲ್ಲಾಡಿಸಿದೆ.

“ಕೇಳಿ, ಗಂಡಸು ಗೌರಿಯ ದುಃಖ ಏನು ಅಂತ ತಿಳಿದುಕೊಳ್ಳಲೇ ಬೇಕು ಅಂತ ಏನೂ ಇಲ್ಲ. ‘ಎಲೆ ಗಂಡಸರೇ, ಅವಳ ದುಃಖವನ್ನು ಮರೆಸಿ, ಅವಳು ಸಂತೋಷದಿಂದ ಇರುವಂತೆ ಮಾಡಿ’ ಅಂತ ಅದರ ಅರ್ಥ” ಎಂದು ವಿವರಿಸಿದಳು. ನನಗೆ ಏನೋ ಅರ್ಥವಾದಂತೆ ಅನ್ನಿಸಿದರೂ ಏನೂ ಗೊತ್ತಾಗಿರಲಿಲ್ಲ.

“ಅವಳ ದುಃಖವನ್ನು ಮರೆಯುವಂತೆ ಹೇಗೆ ಮಾಡುವುದು?” ಎಂದು ಸಂಪೂರ್ಣ ಅನುಭೂತಿಯಿಂದ ಕೇಳಿದೆ. ನನ್ನ ಕಳಕಳಿಯನ್ನು ಗಮನಿಸಿ ಸಂತುಷ್ಟಳಾದ ನನ್ನ ದೇವಿಯು, ಸೆಮಿನಾರುಗಳಲ್ಲಿ ಪ್ರಶ್ನೆಗೆ ಉತ್ತರ ಗೊತ್ತಿಲ್ಲದಾಗ ಉತ್ತರಿಸುವ ಭಾಷಣಕಾರನಂತೆ, “ಬಹಳ ಒಳ್ಳೆಯ ಪ್ರಶ್ನೆ! ಇದು ಸಂಸಾರವನ್ನು ಸುಖೀ ಮಾರ್ಗದಲ್ಲಿ ಕೊಂಡೊಯ್ಯಬೇಕು ಎನ್ನುವವರ ದೃಷ್ಟಿ!” ಎಂದು ನನ್ನನ್ನು ಹೊಗಳಿದಳು. ಅದನ್ನು ಕೇಳಿ “ಓಹೋ ಇವಳಿಗೂ ಉತ್ತರ ಗೊತ್ತಿಲ್ಲವೇನೋ!” ಎಂದುಕೊಂಡ ನನಗೆ ಅವಳ ಉತ್ತರ ಕೇಳಿ ಆಶ್ಚರ್ಯವಾಯಿತು.

“ಇಲ್ಲಿ ಎರಡು ವಿಚಾರಗಳನ್ನು ನೆನಪಿಡಬೇಕು. ಮೊದಲನೆಯದು, ಗೌರಿಗೆ ದುಃಖವಾದರೆ ಅವಳು ಅದನ್ನು ಮನದಲ್ಲೇ ಬಚ್ಚಿಟ್ಟುಕೊಂಡು ಕೊರಗುತ್ತಿರುತ್ತಾಳೆ. ಎರಡನೆಯದು, ಗಂಡಸು ಎಷ್ಟೇ ಒರಟನಾದರೂ ಅವಳ ದುಃಖದಲ್ಲಿದ್ದಾಳೆ ಎಂದು ತಿಳಿದುಕೊಳ್ಳುವ ಸೂಕ್ಷ್ಮವನ್ನು ದೇವರು ಅವನಿಗೆ ದಯಪಾಲಿಸಿದ್ದಾನೆ. ಅದನ್ನು ಉಪಯೋಗಿಸಿಕೊಂಡು, ಅವನು ಗೌರಿಯಲ್ಲಿ ದುಃಖದ ಎಳೆ ಕಂಡುಬಂದ ತಕ್ಷಣ, ಅವಳಿಗೆ ಹೊಸವಸ್ತ್ರ ಹೊಸ ಆಭರಣಗಳನ್ನು ನೀಡಿ ಅವಳ ದುಃಖವನ್ನು ದೂರಮಾಡಿ, ಸಂತೋಷಪಡಿಸಬಹುದು. ಹಾಗೆ ಮಾಡದೆ ಹೋದರೆ ಮುಂದೆ ಅವುಗಳ ಜೊತೆಗೆ ಒಳ್ಳೆಯ ಹೋಟೆಲ್ಲಿನಲ್ಲಿ ಅವಳ ಬಳಗಕ್ಕೆಲ್ಲ ತಿಂಡಿ ತೀರ್ಥಗಳ ಸಮಾರಾಧನೆ, ಸಿನಿಮಾ ನಾಟಕದ ದರ್ಶನ, ರೆಸಾರ್ಟ್ ವಾಸ, ಪರ್ವತ ಪ್ರದೇಶಕ್ಕೆ - ಸಮುದ್ರತೀರಕ್ಕೆ ಪ್ರವಾಸ, ವಿದೇಶ ಪ್ರವಾಸ ಇತ್ಯಾದಿಗಳ ಕಾಣಿಕೆ ಸಲ್ಲಿಸಬೇಕಾಗುತ್ತದೆ.” ಎಂದು ಒಂದೇ ಉಸಿರಿಗೆ ಹೇಳಿದಳು.

ನಾನು “ಹೌದು, ಹೌದು! ನೀನು ಹೇಳುವುದು ನೂರಕ್ಕೆ ನೂರು ನಿಜ. ನನಗೆ ಯಾವುದಾದರೂ ಹೆಂಗಸು ದುಃಖದಲ್ಲಿದ್ದರೆ ತಕ್ಷಣ ಗೊತ್ತಾಗಿ ಹೋಗುತ್ತದೆ.” ಎಂದೆ.

"ಓಹೋ, ಹಾಗೋ! ಆದರೆ ಒಂದು ಎಚ್ಚರಿಕೆಯನ್ನು ನೀಡುತ್ತಿದ್ದೇನೆ ಗಮನವಿಟ್ಟು ಕೇಳಿಸಿಕೊಳ್ಳಿ. ಗಂಡಸರು ಅವರವರ ಮನೆಯ ಗೌರಿಯನ್ನು ಗಮನಿಸಿದರೆ ಸಾಕು. ಊರಿನ ಗೌರಿಯರನ್ನು ಸಮಾಧಾನಪಡಿಸಲು ಹೋದರೆ, ಮನೆಯ ಗೌರಿಯ ದುಃಖ ನೂರ್ಮಡಿಯಾಗುತ್ತದೆ. ಊರಿಗೆಲ್ಲ ನೀರು ಹೊತ್ತ ದೊಡ್ಡ ಬೋರಯ್ಯ ಆಗಬೇಕಾಗಿಲ್ಲ! ಇದ್ದದ್ದು ಇದ್ದ ಹಾಗೆ ಹೇಳಿದೀನಿ, ಎದ್ದು ಬಂದು ಎದೆ ಮೇಲೆ ಒದ್ದ ಹಾಗೆ ಆಗಿರಬೇಕು ಅಲ್ವಾ! ಬಡವ ನೀನು ಮಡಗಿದ ಹಂಗೆ ಇರು ಅಂತ ನಿಮ್ಮ ಮನೆಯಲ್ಲೇ ಇದ್ದು ಬಿಡಿ. ಊರಿನವರ ಉಸಾಬರಿಯೆಲ್ಲಾ ಬೇಡ!" ಎಂದು ಆಜ್ಞೆ ಮಾಡಿದಳು.

ನನಗೆ ಜ್ಞಾನೋದಯವಾಯಿತು - "ಈ ಎಲ್ಲಾ ಗಾದೆಗಳನ್ನು ಮಾಡಿರುವವರು ಹೆಂಗಸರೇ" ಎಂದು. ನನ್ನ ಪ್ರಶ್ನೆಗೆ ಉತ್ತರ ಸಿಕ್ಕಿತ್ತು!

"ನೀವು ಈ ನವರಾತ್ರಿ ಸಮಯದಲ್ಲಿ ಇದನ್ನೆಲ್ಲಾ ತಿಳಿಸಿಕೊಟ್ಟಿದ್ದರಿಂದ ನನಗೆ ಬಹಳ ಸಂತೋಷವಾಯಿತು. ನಾನು ಪಾವನನಾದೆ" ಎಂದು ಕೈಮುಗಿದೆ.

"ಇದನ್ನೆಲ್ಲಾ ನಿಮಗೆ ಅರ್ಥವಾಗುವಂತೆ ಮಾಡಿದ್ದರಿಂದ ನನಗೂ ಸಂತೋಷವಾಯಿತು" ಎಂದ ಮನೆಯೊಡತಿಯನ್ನು ನೋಡುತ್ತಾ, "ಸದ್ಯ! ನಿನಗೆ ಸಂತೋಷವಾಗಿರುವುದರಿಂದ ನಾನು ಬಚಾವಾದೆ!" ಎಂದು ಪ್ಯಾಂಟಿನ ಹಿಂದಿನ ಜೇಬಿನಲ್ಲಿ ಭದ್ರವಾಗಿದ್ದ ಪರ್ಸನ್ನು ತಟ್ಟುತ್ತಾ ಹೇಳಿದೆ.

"ಓಹೋ! ನೀವೂ ಪರವಾಗಿಲ್ಲ." ಎನ್ನುತ್ತಾ ಅವಳು ಎರಡು ಕೈಗಳನ್ನು ಸೊಂಟದ ಮೇಲೆ ಇಟ್ಟುಕೊಂಡಳು.

"ಎಷ್ಟಾದರೂ ನಿನ್ನ ಗಂಡ ಅಲ್ಲವೇ" ಎಂದೆ.

ಇದನ್ನು ಏಕಾಗ್ರತೆಯಿಂದ, ಈ ನವರಾತ್ರಿಯ ಸಮಯದಲ್ಲಿ ಕೇಳಿಸಿಕೊಂಡ, ಓದಿದ ಸಮಸ್ತ ಹೆಂಗಸರಿಗೆ ನವ ವಸ್ತ್ರ ವಾಹನ ಆಭರಣಾದಿಗಳು ದೊರೆಯುತ್ತಿರುತ್ತವೆ. ಸಮಸ್ತ ಗಂಡಸರಿಗೆ ಅವರ ಪರ್ಸನ್ನು ಹೆಚ್ಚು ತೆಗೆಯದೆ ಇರಲು ಬೇಕಾಗುವ ಜ್ಞಾನವು ಲಭಿಸಿ ಸಂಸಾರಗಳೆಲ್ಲವೂ ಸುಖಮಯವಾಗಿರುತ್ತವೆ, ಎನ್ನುವಲ್ಲಿಗೆ ಈ "ಗಂ. ಯಾ. ಗೌ. ದು." ಎಂಬ ಉಪಾಖ್ಯಾನವು ಸಂಪೂರ್ಣವು.

ಸರ್ವೇ ಜನಾಃ ಸುಖಿನೋ ಭವಂತು. ಸಮಸ್ತ ಸನ್ಮಂಗಳಾನಿ ಭವಂತು.

*****

ಸಮಾಜ ಸೇವೆ ಹಾಗೂ ಭ್ರಷ್ಟಾಚಾರ

- ಜೀವಿ ಹೆಗಡೆ

ಗಜಾನನ ಹೆಗಡೆ ನನಗಿಂತ ಹತ್ತು ವರ್ಷ ಹಿರಿಯ. ಇವನು 'ಊರಿನ ರಾಜಕೀಯದಲ್ಲಿದ್ದು' ಸಮಾಜ ಸೇವೆ ಮಾಡಿ ಕೊಂಡಿದ್ದಾನೆ. ಊರಿನ ಯುವಕ ಸಂಘವನ್ನು ಪ್ರಾರಂಭಿಸುವದರ ಜೊತೆ ಪ್ರಾರಂಭವಾದ ಇವನ ಸಮಾಜ ಸೇವೆ ಆಮೇಲೆ ಪಂಚಾಯತ, ಸಹಕಾರಿ ಸಂಘ, ಯುವಕ ಸಂಘ, ದೇವಸ್ಥಾನದ ಆಡಳಿತ, ಹಾಲು ಸೊಸೈಟಿ, ಶಿಕ್ಷಣ ಸಂಸ್ಥೆಗಳು ಹೀಗೆ ಹತ್ತು ಹಲವು ಸಂಘ ಸಂಸ್ಥೆಗಳಲ್ಲಿ ಸೇವೆ ಮಾಡುವ ತನಕ ಮುಂದುವರಿದಿದೆ.

ಊರಿನ ರಾಜಕಾರಣದಲ್ಲಿ ತೊಡಗಿಸಿಕೊಂಡವರಿಗೆ "ಊರಿನ ನ್ಯಾಯ ಪಂಚಾಯ್ತಿಯೂ" ಅನಿವಾರ್ಯವಾಗಿರುತ್ತದೆ. ಪಕ್ಷಾತೀತವಾಗಿ ಸ್ವಾರ್ಥವಿಲ್ಲದೇ ಪಂಚಾಯ್ತಿಯಲ್ಲಿ ಭಾಗವಹಿಸುವುದು ಸುಲಭವಲ್ಲ. ಇಂತವರನ್ನು ಜನರು ಸುಲಭವಾಗಿ ಗುರುತಿಸಿಬಿಡುತ್ತಾರೆ. ಸಮಾಜಸೇವೆಯಲ್ಲಿ ಒಮ್ಮೆ ಕಳೆದುಕೊಂಡ ವಿಶ್ವಾಸವನ್ನು ಮರಳಿ ಗಳಿಸುವದು ಬಹಳ ಕಷ್ಟದ ಕೆಲಸ.

ಆದರೆ ಈಗ ವಯಸ್ಸಿನ ಕಾರಣಕ್ಕಾಗಿ ರಾಜಕಾರಣದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಗಜಾನನ ಹೆಗಡೆಗೆ. ಆದರೂ ಹಿರಿತನದ ಕಾರಣಕ್ಕಾಗಿ ಕೆಲವು ಕಿರಿಯರು ಆಗಾಗ ಇವನಲ್ಲಿ ಸಲಹೆ ಸೂಚನೆಗಳನ್ನು ಕೇಳಲು ಬರುವದುಂಟು. ಆಗೆಲ್ಲಾ ಇವನು "ತಾನು ಔಟ್ ಡೇಟೆಡ್" ಆಗಿದ್ದೇನೆ ಅಂತಲೂ ಹೇಳುತ್ತಾನೆ.

ಇವನಿಗೆ ಹೇಳಿಕೊಳ್ಳುವಂತಹ ಅನುಕೂಲವೇನಿಲ್ಲ. 'ಆರಕ್ಕೆ ಏರದೇ ಮೂರಕ್ಕೆ ಇಳಿಯದೆ' ಜೀವನ ನಿರ್ವಹಣೆ ನಡೆಸುತ್ತಿದ್ದ. ತಮ್ಮ ಕೌಟುಂಬಿಕ ಜೀವನಕ್ಕೆ ಆರ್ಥಿಕ ಭಾರವಾಗದ ಹಾಗೆ ಸಮಾಜ ಸೇವೆ ನಡೆದಿತ್ತು. ಹಾಗಂತ ಈ ಕಾರಣದಿಂದ ಹಣವನ್ನೂ ಲಪಟಾಯಿಸಿರಲಿಲ್ಲ. ಹಾಗೆ ಏನಾದರೂ ಕೇಳಿದರೆ, ಸಮಾಜ ಸೇವೆ ಎನ್ನುವದನ್ನು 'ಜನಾರ್ದನನ ಸೇವೆ' ಅಂತ ಮಾಡಿದ್ದೇನೆ ಅಂತ ಹೇಳುತ್ತಾನೆ.

"'ಸರ್ವಂ ಲಂಚಮಯಂ ಜಗತ್' ಎನ್ನುವ ಈ ಕಾಲದಲ್ಲಿ ಸಮಾಜ ಸೇವೆಯನ್ನು ಸ್ವಾರ್ಥರಹಿತವಾಗಿ ಹೇಗೆ ಮಾಡಲು ಸಾಧ್ಯ?. ನೀನೇನೋ 'ಏನೂ ತಿನ್ನದೇ' ಇರಬಹುದು. ಆದರೆ ತಿಮಿಂಗಲುಗಳ ಮಧ್ಯೆ ಸುಮ್ಮನೆ ಇರಲು ಸಾಧ್ಯವೇ?. ನೀರಿನಲ್ಲಿ ಇರುವ ಮೀನು ಕುಡಿಯುವ ನೀರೆಷ್ಟು ಅಂತ ಹೇಗೆ ತಿಳಿಯುವದು? ವ್ಯವಸ್ಥೆಯನ್ನು ವಿರೋಧಿಸಿದ ಎಷ್ಟೋ ಜನರು ತಾವೇ ದೂರ ಸರಿದ ಉದಾಹರಣೆ ಇಲ್ಲವೇ? ನೀನು ಹೇಗೆ ನಿಭಾಯಿಸಿದೆ?"' ಕುತೂಹಲದಿಂದಲೇ ನಾನು ಪ್ರಶ್ನಿಸಿದೆ.

ಸಣ್ಣಗೆ ನಗೆಯಾಡಿದ ಗಜಾನನ ಹೆಗಡೆ. "ದುಡ್ಡನ್ನು ತಿನ್ನದೇ ಕೆಲಸವನ್ನೇ ಮಾಡದೇ ಇರುವವರಿಗಿಂತ ದುಡ್ಡನ್ನು ತಿಂದಾದರೂ ಕೆಲಸ ಮಾಡುವವರು ಒಳ್ಳೆಯದು."

ನನಗೆ ಅರ್ಥವಾಗಲಿಲ್ಲ. ಸುಮ್ಮನೆ ಅವನ ಮುಖ ನೋಡಿದೆ.

'ಸಮಾಜ ಸೇವೆಗೆ ಇಳಿಯುವವರಲ್ಲಿ ನಾಲ್ಕು ಬಗೆ. ಮೊದಲನೆಯವರು ತಾವು ತಿನ್ನುವದಿಲ್ಲ, ಕೆಲಸವನ್ನೂ ಮಾಡುವುದಿಲ್ಲ. ಎರಡನೆಯವರು ತಾವು ತಿಂದು ಕೆಲಸ ಮಾಡುವವರು. ಮೂರನೆಯವರು ತಾವು ತಿನ್ನದೇ ಕೆಲಸ ಮಾಡುವವರು. ನಾಲ್ಕನೆಯವರು ತಾವು ತಿನ್ನುವದನ್ನು ತಿಂದು ಕೆಲಸವನ್ನು ಮಾತ್ರ ಮಾಡದೇ ಇರುವವರು.'

"ಕೆಲವೊಮ್ಮೆ ಸರಕಾರದಿಂದಲೋ ಅಥವಾ ಇನ್ನಿತರರಿಂದಲೋ ಕೆಲಸವಾಗುವ ಸಂದರ್ಭದಲ್ಲಿ ಭ್ರಷ್ಟಾಚಾರದ ಕಪಿಮುಷ್ಟಿಯಲ್ಲಿ ಸಿಗಲೇ ಬೇಕಲ್ಲವೇ? ಇದರಿಂದ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಟ್ಟಂತಾಗಲಿಲ್ಲವೇ? ಸುಕೃತೇ ದುಷ್ಕೃತೇ ಚೈವ ಚತ್ವಾರೋ ಸಮಭಾಗಿನಃ ಅಂತ ಹೇಳಿದ ಹಾಗೆ ಇಂತಹ ಸಮಾಜ ಸೇವಕರೂ ಭ್ರಷ್ಟಾಚಾರದ ಪಾಪದಲ್ಲಿ ಭಾಗಿಯಲ್ಲವೇ?" ನನ್ನ ವಿವರಣೆ ನೀಡಿದೆ.

'ಸಮಾಜ ಸೇವಕನ ಕೆಲಸ ಕೇವಲ ಸಮಾಜ ಸೇವೆ ಮಾಡುವದು. ಇಲ್ಲಿ ಎಲ್ಲಾ ಸಂದರ್ಭದಲ್ಲಿ ಸಮಾಜ ಸುಧಾರಣೆ ಸಾಧ್ಯವಿಲ್ಲ. ನಮ್ಮ ನಮ್ಮ ಸ್ಥಾನಮಾನ ಸಾಮರ್ಥ್ಯದ ಮೇಲೆ ಸಮಾಜ ಸೇವೆಯನ್ನೋ ಸಮಾಜ ಸುಧಾರಣೆಯನ್ನೋ ಕೈಗೆತ್ತಿಕೊಳ್ಳಬೇಕು.' ಹೇಳಿದ ಗಜಾನನ ಹೆಗಡೆ. 'ಎರಡು ಉದಾಹರಣೆ ತೆಗೆದುಕೋ. ನಮ್ಮ ಶಾಲೆಗೆ ಕಟ್ಟಡ ನಿರ್ಮಾಣ ಹಾಗೂ ಇನ್ನೊಂದು ಸಾಂಸ್ಕೃತಿಕ ಕಾರ್ಯಕ್ರಮ. ಸಾಂಸ್ಕೃತಿಕ ಕಾರ್ಯಕ್ರಮ ಪೂರ್ತಿ ನಮ್ಮ ನಿಯಂತ್ರಣದಲ್ಲಿ ಇರುತ್ತದೆ. ಎಲ್ಲಾ ಲೆಕ್ಕಾಚಾರಗಳನ್ನು ಪಾರದರ್ಶಕವಾಗಿ ಮಾಡಲು ಸಾಧ್ಯ. ಇಲ್ಲಿಯೂ ತಪ್ಪು ಲೆಕ್ಕಾಚಾರ ತೋರಿಸಿ ಹಣ ನುಂಗುವವರು ಇದ್ದಾರೆ ಎನ್ನು. ಆದರೆ ಅದು ಪಾಪ.'

"'ಶಾಲೆಯ ಕಟ್ಟಡ ನಿರ್ಮಾಣವನ್ನು ತೆಗೆದುಕೊ. ಹಣದ ಸಂಗ್ರಹಣೆ ನಮ್ಮ ನಿಯಂತ್ರಣದಲ್ಲಿಲ್ಲ. ನಮ್ಮ ಸೇವೆ, ಸರಕಾರದಿಂದ ಸಿಗುವ ಹಣಕಾಸಿನ ನೆರವನ್ನು ಪಡೆದು ಕಟ್ಟಡ ನಿರ್ಮಾಣಕ್ಕಷ್ಟೇ ಸೀಮಿತ. ಬೇರೆಯವರ ಭ್ರಷ್ಟಾಚಾರವನ್ನು ತಡೆಯಲು ನಮ್ಮ ಸಾಮರ್ಥ್ಯದ ಬಲ ಸಾಲುವದಿಲ್ಲ. ಅಲ್ಲಿ ಕಟ್ಟಡ ನಿರ್ಮಾಣವಷ್ಟೇ ನಮ್ಮ ಕರ್ತವ್ಯ. ನಾವು ಪ್ರಾಮಾಣಿಕರು ಅಂತ ಹೋರಾಟಕ್ಕೆ ಇಳಿದಲ್ಲಿ ನಮಗೆ ಸಿಗಬೇಕಾದ ಪಾಲನ್ನು ಪಡೆಯಲು ಸಾಧ್ಯವಾಗದೇ ಇರುವಷ್ಟರ ಮಟ್ಟಿಗೆ ಭ್ರಷ್ಟಾಚಾರ ಬೇರು ಬಿಟ್ಟಿದೆ. ಅದು ಸಹಜವಾಗಿಯೇ ಬೇರೆಯವರ ಪಾಲಾಗುತ್ತದೆ. ಇದರಿಂದ ನಮ್ಮ ಶಾಲೆಗೆ ನಾವೇ ಅನ್ಯಾಯ ಮಾಡಿದ ಹಾಗಲ್ಲವೇ? ನನ್ನ ಅಭಿಪ್ರಾಯದಲ್ಲಿ ಈ ಕ್ಷೇತ್ರದಲ್ಲಿರುವವರು ಸುಮ್ಮನೆ ಉಳಿದು ನೆರವನ್ನು ಪಡೆಯದೇ ಇರುವುದೇ ಪಾಪ. ಸರ್ವನಾಶ ಸಮುತ್ಪನ್ನೇ ಅರ್ಧಂ ತ್ಯಜತಿ ಪಂಡಿತಃ ಎನ್ನುವುದೂ ಒಂದು ನೀತಿಯೆ. ನಾವು ಈ ಭ್ರಷ್ಟಾಚಾರದಲ್ಲಿ ನೇರವಾಗಿ ಭಾಗಿಯಾಗಬಾರದು. ಅಷ್ಟೇ. ಅಲ್ಲವೇ?"'

ನಾನೇನು ಹೇಳಲು ಸಾಧ್ಯ.

ಇನ್ನೂ ಮುಂದುವರಿಸಿದ. "ಊರಿಗೆ ರಸ್ತೆ ಮಾಡಿಸುವದೋ ಅಥವಾ ರಸ್ತೆ ರಿಪೇರಿ ಮಾಡಿಸುವ ಕೆಲಸವನ್ನೋ ತೆಗೆದುಕೋ. ಎಲ್ಲಾ ಕೆಲಸಗಳು ನ್ಯಾಯವಾಗಿ ಹಾಗೂ ಪಾರದರ್ಶಕವಾಗಿ ನಡೆಯುವುದಿಲ್ಲ ಎನ್ನುವದು ಸ್ಪಟಿಕದಷ್ಟು ಸತ್ಯ. ನಮ್ಮ ವ್ಯವಸ್ಥೆ ಅಷ್ಟು ಹದಗೆಟ್ಟಿದೆ. ಇದನ್ನು ವಿರೋಧಿಸಿ ಹೋರಾಡಬಾರದು ಎನ್ನುವವನು ನಾನಲ್ಲ. ಆದರೆ ಆ ದಾರಿ ಬೇರೆ. ನನ್ನ ದಾರಿ ಬೇರೆ ಅಷ್ಟೆ. ಅಂಥವರಿಗೆ ಬಲಿಷ್ಠರನ್ನು ಎದುರು ಹಾಕಿಕೊಳ್ಳುವಷ್ಟು ಧೈರ್ಯ ಬೇಕು. ಅಂಥವರಿಂದ ಕೆಲಸ ಮಾಡಿಸಿಕೊಳ್ಳಲು ಸಾಧ್ಯವಿಲ್ಲ. ನೀನೇ ನೋಡು. ಅಂಥವರನ್ನು ಜನ ಕೆಲಸಕ್ಕೆ ಬಾರದವರು ಎನ್ನುವದಿಲ್ಲವೇ? ಸಮಾಜ ಸೇವೆ ಮಾಡಲು ಜನ ಬೆಂಬಲವೂ ಬೇಕು. ಇದಕ್ಕಾಗಿ ಜನಹಿತವಾದ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕಾಗುತ್ತದೆ. ಲೋಕಕ್ಕೆ ಬೇಲಿ ಕಟ್ಟುವುದು ನಮ್ಮ ಕೆಲಸವಲ್ಲ.

"ಆದರೂ ಹೀಗೆ ಕೆಲಸ ಮಾಡುವವರು ಸ್ವತಃ ತಿನ್ನದೇ ಇದ್ದರೂ ಜನರು 'ಇವನು ಭ್ರಷ್ಟಾಚಾರದ ಭಾಗ' ಎನ್ನುವದಿಲ್ಲವೇ" ಸುಮ್ಮನೆ ಕೇಳಿದೆ.

"ಸಾರ್ವಜನಿಕ ಕ್ಷೇತ್ರದಲ್ಲಿ ಇರುವವರು ಚರ್ಮ ದಪ್ಪ ಮಾಡಿಕೊಳ್ಳಬೇಕು" ಅದೇ ನಗು ಮುಖ.

ನಾನು ಸುಮ್ಮನಾದೆ.

ವಂಶೋದ್ಧಾರಕ

- ಜಿಬಿ ಕೋಟೆ ಅನಂತ್

ನಾನು ಭೂಮಿಯಿಂದ ನೀರು ಹೀರಿ ಸೂರ್ಯನ ಕಿರಣದಿಂದ ಶಕ್ತಿ ಪಡೆದು ಇಷ್ಟು ದೊಡ್ಡದಾಗಿ ಬೆಳೆದು ತಂಪು ನೆರಳು, ಗಾಳಿ, ರುಚಿಯಾದ ಹಣ್ಣು ಕೊಡ್ತಾ ಇದೀನಿ. ಪಕ್ಷಿಗಳು ನನ್ನ ಆಶ್ರಯ ಪಡೆಯತ್ತೆ, ರುಚಿಯಾದ ಹಣ್ಣು ತಿನ್ನತ್ತೆ ಅಂತ ಅನ್ಕೊಂಡು ಸಂತೋಷಪಡ್ತು ಮರ.

ಅಷ್ಟರಲ್ಲಿಯೇ ಒಂದು ಪಕ್ಷಿ ಎಲ್ಲಿಂದಲೋ ಹಾರಿಬಂದು ಮರದ ಮೇಲೆ ಕೂತ್ಕೊಂಡು, ಮರನಾ ಒಂದು ಮಾತು ಕೇಳದೆ, ಗಬಗಬ ಹಣ್ ತಿಂದು, ತೇಗಿ ಹಾರಿಹೋಯ್ತು.

ಮರ...ಅಲ್ಲ ಆ ನನ್ನ ಒಂದು ಮಾತೂ ಕೇಳದೆ ಗಡದ್ದಾಗಿ ತಿಂದು ತೇಗಿ ಹೊಯ್ತಲ್ಲ ಆ ಪಕ್ಷಿ.. ಇದು ಮೋಸ ಅಲ್ವಾ ಅಂತು. ಆ ಮಾತು ಪಕ್ಷಿಗೆ ಕೇಳಿಸ್ತು. ಇದು ನನ್ನೇ ಹಿಯಾಳಿಸ್ತಾ ಇರೋದು ಅಂತ ಅನ್ಕೊಂಡು ವಾಪಸ್ ಬಂದು ಮರದ ಮೇಲೆ ಕೂತ್ಕೊಳ್ತು. ಅಬ್ಬ! ಇದರ ಹೊಟ್ಟೆ ಏನು ಕನ್ನಂಬಾಡಿ ಕಟ್ಟೇನ...ಈಗ ತಾನೆ ಹೊಟ್ಟೆ ತುಂಬ ತಿಂತು ಅನ್ಕೊತು.

ಆ ಪಕ್ಷಿ "ಕೊಂಚ ನನ್ನ ಮಾತು ಕೇಳು" ಅಂತು ಮರಕ್ಕೆ. ನಿನ್ನ ಪ್ರಶ್ನೆಗೆ ಉತ್ತರ ಸಿಗುತ್ತೆ. ಹಾಂ.. ನಿನ್ನ ಮೇಲಿನ ರೆಂಬೆ ಕೊಂಚ ಉದ್ದ ಮಾಡಿ ಸುತ್ತಾ ನೋಡು ಅಂತು. ಮರ ಹಾಗೆ ಮಾಡ್ತು. ಏನಾದ್ರೂ ವಿಶೇಷ ಇದ್ಯಾ ಅಂತ ಪಕ್ಷಿ ಕೇಳಿತು. ಇಲ್ಲ ಅಂತೂ ಮರ. ಕೂಡ್ಲೆ ಪಕ್ಷಿ ಗಮನ ಇಟ್ಟು ನೋಡು... ನಿನ್ನ ಜಾತೀದೆ ಮರ ಎಷ್ಟಿದೆ ಎಣಿಸು ಅಂತು, ಮರಾ... 1...2..3..4..5.....20 ಎಣಿಕೆ ನಿಲ್ಲಿಸಿ ..ಲೆಕ್ಕ ಇಲ್ಲದಷ್ಟು ಇದೆ, ಎಲ್ಲ ನನ್ನ ತರಾನೇ ಅಂತು. ಅದನ್ನ ಯಾರು ಹಾಕಿದ್ದು ನೀನಾ? ಅಂತ ಪಕ್ಷಿ ಕೇಳಿತು. ಮರ ನಗ್ತಾ ನಾನಲ್ಲ ಅಂತೂ.. ಕೊಂಚ ಹೊತ್ತು ಸುಮ್ಮನಿದ್ದ ಪಕ್ಷಿ.... "ನಾನು" ಅಂತೂ!!

ಮರಾ ಕಿಸಕ್ ಅಂತ ನಗ್ತು. ಕೂಡಲೇ ಪಕ್ಷಿ, ನಿನ್ನ ನಗು ಸಾಕು. ನನ್ ಮಾತು ಕೇಳು. ನಾವು ಮನುಷ್ಯರ ಹಾಗೆ ಸ್ವಾರ್ಥಿಗಳಲ್ಲ. ಹಣ್ಣು ನೆರಳು ಕೊಟ್ಟು ಪರಿಸರ ರಕ್ಷಿಸೋ ಮರಗಳನ್ನ ನಾವು ಹುಟ್ಟಾಕ್ತೀವಿ, ಬೆಳೆಸ್ತೀವಿ ಅಂದಾಗ ಮರ ಕಿಲಕಿಲ ಕಿಲಕಿಲ ನಗ್ತು. ನಾನೂ, ನಿನ್ ಮರದ ಹಣ್ಣನ್ನು ನಿನ್ನ ಅನುಮತಿಯಿಲ್ಲದೆ ತಿಂದು ಹಾರಿ ಹೋದೆ ತಿರುಗಿ ನೋಡದೆ. ನಾನು ಕಾಡು, ಮೇಡು, ಊರು, ಕೇರಿ, ಬೆಟ್ಟ, ಗುಡ್ಡ ಎಲ್ಲಾ ಕಡೆ ಹಾರಾಡ್ತಾ ಇರ್ತೀನಿ, ದಣಿವಾದಾಗ ಅಲ್ಲಿ ಇಲ್ಲಿ.. ಎಲ್ಲಾ ಕಡೆ ಕೂತ್ಕೋತೀನಿ. ಆಗ ಹಿಕ್ಕೆ ಹಾಕ್ತೀನಿ. ಅದರಲ್ಲಿ ಹಣ್ಣಿನ ಬೀಜ ಇರುತ್ತೆ. ಅದು ಮಣ್ಣೊ ಸೇರುತ್ತೆ. ಮಳೆ ಬಂದಾಗ ಬೀಜ ಮೊಳಕೆ ಒಡೆದು ಸಸಿಗಳಾಗುತ್ತವೆ.

ಸಸಿ ಬೆಳೆದು ದೊಡ್ಡ ಮರ ಆಗತ್ತೆ.. ಹಾಂ.. ನಿನ್ನಂಥದ್ದೇ ಆ ಮರದ ಮೇಲೂ ಇಲ್ಲಿ ಹಾಗೆ ಪಕ್ಷಿ, ಗೂಡು, ಕಾಯಿ,ಹಣ್ಣು.. ಮರದ ಕೆಳಗೆ ನೆರಳು, ತಂಪು ಗಾಳಿ ಇರುತ್ತೆ. ನಡೆದಾಡೋ ಜನ, ಅಲ್ಲಿ ಕೂತ್ಕೊಂಡು ಬುತ್ತಿ ತಿಂದು, ಕೊಂಚ ಹೊತ್ತು

ವಿಶ್ರಮಿಸಿಕೊಂಡು, ಸುಖ ದುಃಖ, ಮಳೆ ಬೆಳೆ ಅಂತ ಮಾತಾಡ್ಕೋತಾರೆ. ಮೇಯಕ್ಕೆ ಬಂದ ದನಕರುಗಳು ಬಿಸಿಲು ಕಡಿಮೆ ಆಗೋವರ್ಗೂ ಅಲ್ಲಿದ್ದು ಆಮೇಲೆ ಕೆಂಟಗೆ ಕಡೆ ಹೊರಡತ್ವೆ ಅಂತೂ ಪಕ್ಷಿ.

ಪಕ್ಷಿ ಮಾತ್ಕೇಳಿ ಮರಕ್ಕೆ ತುಂಬಾ ಖುಷಿಯಾಯ್ತು. ಮಾತೇ ಹೊರಡಲಿಲ್ಲ. ಕೂಡ್ಲೆ ಪಕ್ಷಿಗೆ .ಹಾಂ.. ಅಲ್ಲಿ ನೋಡು ನಿನ್ನ ಬಲಗಡೆ ರೆಂಬೇಲಿ ಒಂದು ಚೆನ್ನಾಗಿ ಮಾಗಿರೋ ದೊಡ್ಡ ಹಣ್ಣಿದೆ. ತಗೋ ತಿನ್ನು ಅಂತು ಮರ.

ಪಕ್ಷಿ ನನಗೆ ಬೇಡ, ನನಗೆ ಹೊಟ್ಟೆ ತುಂಬಿದೆ ಅಂತ ಹೇಳಿ ಡರ್ ಅಂತ ತೇಗ್ತು. ಹಾಂ ನಾನು ಹೊರಡ್ತೀನಿ... ಎಲ್ಲಿಂದ್ಲೋ ಬೇರೆ ಪಕ್ಷಿ ಬರುತ್ತೆ ಮರದ ಹಣ್ಣು ತಿನ್ನತ್ತೆ, ಯಾವ್ದೋ ದಿಕ್ಕಿಗೆ ಹೋಗುತ್ತೆ... ಅಲ್ಲೆಲ್ಲಾ ನಿನ್ನ ವಂಶ ಬೆಳಯತ್ತೆ... ಹೀಗೆ ಎಲ್ಲ ಕಡೆ ಬೆಳೀತಾನೆ ಇರುತ್ತೆ ...ಬೆಳೀತಾನೆ ಇರುತ್ತೆ, ಅಂತ ಹೇಳ್ತಾ ಹಾರಿ ಹೋಯ್ತು ....

ಮರಕ್ಕೆ ತುಂಬಾ ಖುಷಿಯಾಯ್ತು. ಮರ ವಂಶೋದ್ಧಾರಕನಿಗೆ ಟಾಟಾ ಬಾಯ್ ಬಾಯ್ ಅಂತ ಹೇಳ್ತಾ.. ರೆಂಬೆ ಕೊಂಬೆ ಅಲುಗಾಡಿಸ್ತು.

ಸಣ್ಣ ಕತೆಗಳ ಲೋಕ

ಈಸೋಫನ ನೀತಿ ಕಥೆಗಳು

- ವಿಠ್ಠಲ್ ಇಜೇರಿ

ಸಣ್ಣ ಕಥೆಗಳ ಸರಣಿಯಲ್ಲಿ ಈ ವರೆಗೆ ವಡ್ಡರಾಧನೆ, ಕಥಾಸರಿತ್ ಸಾಗರ, ಬುದ್ಧನ ಜಾತಕ ಕಥೆಗಳು, ಪಂಚತಂತ್ರ ಕಥೆಗಳ ಬಗ್ಗೆ ಈ ಮುಂಚೆ ಓದಿದ ನಾನು ಇಂದು ಈಸೋಪನ ನೀತಿ ಕತೆಗಳ ಬಗ್ಗೆ ಪ್ರಸ್ತುತ ಪಡಿಸುತ್ತೇನೆ.

ಈಸೋಪನ ನೀತಿ ಕಥೆಗಳನ್ನು ಜಗತ್ತಿನ ಎಲ್ಲ ಭಾಷೆಗಳಲ್ಲಿ ಭಾಷಾಂತರಿಸಲಾಗಿದೆ. ಅವೆಷ್ಟು ದೇಶಗಳಲ್ಲಿ, ಅವೆಷ್ಟು ಭಾಷೆಗಳಲ್ಲಿ ಎಂಬುವುದು ಪಟ್ಟಿ ಮಾಡುವುದೂ ಕಷ್ಟ. ಪ್ರಥಮ ಇಂಗ್ಲಿಷ್ ಆವೃತ್ತಿಯನ್ನು ವಿಲಿಯಂ ಕ್ಯಾಕ್ ಸ್ಟನ್ ಎಂಬಾತ 27 ಮಾರ್ಚ್, 1484 ರಲ್ಲಿ ಪ್ರಕಟಿಸಿದನು. 20ನೇ ಶತಮಾನದಲ್ಲಿ 1952, 1998 ಮತ್ತು ತೀರಾ ಇತ್ತೀಚೆಗೆ 2002 ರಲ್ಲಿ ಈ ಕಥೆಗಳ ಹೊಸ ಆವೃತ್ತಿಗಳು ಬಂದಿವೆ.

ಜಾನ್ ಲಾಕೆ ಎಂಬ ತತ್ವಜ್ಞಾನಿಯು ತಮ್ಮ 1793ರ 'ಸಮ್ ಥಾಟ್ಸ್ ಆನ್ ಲರ್ನಿಂಗ್' ಎಂಬ ಕೃತಿಯಲ್ಲಿ -
" ಈಸೋಪನ ನೀತಿ ಕಥೆಗಳು ಮಗುವೊಂದಕ್ಕೆ ಸಂತೋಷವನ್ನುಂಟು ಮಾಡಬಲ್ಲುದು ಹಾಗೂ ಮನರಂಜನೆಗೆ ಅತ್ಯಂತ ಸೂಕ್ತವಾಗಿ ಓರ್ವ ಪ್ರಬುದ್ಧ ವ್ಯಕ್ತಿಗೆ ಉಪಯುಕ್ತ ಮಂಥನವನ್ನು ನೀಡಬಲ್ಲುದು, ಮಾತ್ರವಲ್ಲ, ಆತನು ಜೀವನ ಕಾಲ ಪೂರ್ತಿ ಅದನ್ನು ನೆನಪಿನಲ್ಲಿಟ್ಟುಕೊಂಡರೆ, ಆತನು ತನ್ನ ವಯಸ್ಕ ಆಲೋಚನಾ ಶೈಲಿ ಹಾಗೂ ಗಂಭೀರ ವ್ಯವಹಾರಗಳ ಜೊತೆಗೆ ಅವುಗಳು ನೆನಪಿನಲ್ಲಿರುವವರೆಗೆ ಅವನೆಂದೂ ಪಶ್ಚಾತಾಪಪಡಲಾರನು. ಅಲ್ಲಿಯ ಚಿತ್ರಗಳು ಆತನನ್ನು ಇನ್ನೂ ಚೆನ್ನಾಗಿ ಪ್ರಫುಲ್ಲಗೊಳಿಸಬಹುದು. ಅವನು ತನ್ನೊಂದಿಗೆ ಹೆಚ್ಚುತ್ತಿರುವ ಜ್ಞಾನವನ್ನು ಪ್ರಕಟಿಸಬಲ್ಲನು" - ಎಂದಿದ್ದಾನೆ.

ಈಸೋಪನ ನೀತಿ ಕಥೆಗಳ ಇತಿಹಾಸ ಕ್ರಿಸ್ತ ಪೂರ್ವ 720 ರಿಂದ 570 ರಷ್ಟು ಹಿಂದಿನ ಕಾಲಮಾನದವು ಎಂದು ಹೇಳುತ್ತಾರೆ. ಇವು ಪ್ರಾಚೀನ ಗ್ರೀಸ್ ನಲ್ಲಿ ಒಬ್ಬ ಗುಲಾಮ ಹಾಗೂ ಕಥೆಗಾರನಾದ ಈಸೋಪನು ಹೇಳಿದ ನೀತಿ ಕಥೆಗಳು. ಈ ನೀತಿಗಳು ವಿಶ್ವದಲ್ಲೇ ಜನಜನಿತವಾಗಿವೆ. ಮಕ್ಕಳ ನೈತಿಕ ಶಿಕ್ಷಣಕ್ಕೆ ಈ ನೀತಿಗಳು ದಾರಿ ದೀಪದಂತಿವೆ. ಇವು ನಾವೆಲ್ಲ ಒಂದಿಲ್ಲ ಒಂದು ಹಂತದಲ್ಲಿ ಓದಿದ ಕಥೆಗಳು, ಯಾಕೆಂದರೆ ಈ ಕಥೆಗಳು ವಿಶ್ವದ ಎಲ್ಲ ಭಾಷೆಗಳಿಗೂ ತರ್ಜುಮೆಗೊಂಡಿವೆ. ನರಿ ಹಾಗೂ ದ್ರಾಕ್ಷಿಯ ಕತೆ, ಇದರಿಂದಲೇ 'ಕೈಗೆಟುಕದ ದ್ರಾಕ್ಷಿ ಹುಳಿ' ನುಡಿಗಟ್ಟು ಪ್ರಚಲಿತವಾಯಿತು. ಆಮೆ ಮತ್ತು ಮೊಲ, ಮಾರುತ ಹಾಗೂ ಸೂರ್ಯ, ಹುಡುಗ ಕೂಗಿದ ತೋಳ ಬಂತು ತೋಳ ಇತ್ಯಾದಿ ಈಸೋಪನ ನೀತಿ ಕತೆಗಳಲ್ಲಿನ ರಮ್ಯ ಕತೆಗಳು.

ಈಸೋಪನ ಬಗ್ಗೆ 1 ನೇ ಶತಮಾನದ ತತ್ವಜ್ಞಾನಿ ಟ್ಯಾನಾದ ಆಪೋಲ್ ಗೊನಿಯಸ್ ಎಂಬವರು ಹೇಳಿದ ಮಾತುಗಳು:
"ಈಸೋಪನು ಸರಳ ಭೋಜನವನ್ನೇ ಭೂರಿ ಭೋಜನದಂತೆ ಸ್ವೀಕರಿಸುವವರಂತೆ ಸಾಧಾರಣ ಘಟನೆಗಳನ್ನು ಅದ್ಭುತ

ವಾಸ್ತವಗಳನ್ನು ಬೋಧಿಸಲು ಬಳಸುತ್ತಿದ್ದ. ಅಲ್ಲದೆ ಕತೆ ಮುಗಿದ ಮೇಲೆ ಏನು ಮಾಡಬೇಕು, ಏನು ಮಾಡಬಾರದು ಎಂಬ ಸಲಹೆಯನ್ನೂ ಕೊಡುತ್ತಿದ್ದ."

ಭಾರತ ಮೂಲದ ಜಾತಕ ಕಥೆಗಳು, ಪಂಚತಂತ್ರ ಕಥೆಗಳು ಪ್ರತಿನಿಧಿಸುವ ನೀತಿಗಳಿಗೂ, ಈಸೋಪನ ನೀತಿ ಕಥೆಗಳಿಗೂ ವ್ಯಾಪಕ ಭಿನ್ನಾಭಿಪ್ರಾಯಗಳಿದ್ದರೂ ಸುಮಾರು ಹನ್ನೆರಡು ಕತೆಗಳು ಒಂದೇ ರೀತಿಯಲ್ಲಿವೆ. ಗ್ರೀಕರು ಭಾರತೀಯರಿಂದ ಇವುಗಳನ್ನು ತಿಳಿದುಕೊಂಡರೋ ಅಥವಾ ಭಾರತೀಯರು ಗ್ರೀಕರಿಂದ ತಿಳಿದುಕೊಂಡರೋ ಆ ಬಗ್ಗೆ ಅಧಿಕೃತ ಮಾಹಿತಿ ಲಭ್ಯವಿಲ್ಲ.

ಈ ನೀತಿ ಕಥೆಗಳನ್ನು 4 ನೇ ಶತಮಾನದ ಅಥೆನ್ಸ ನಗರದ ರಾಜನೀತಿಜ್ಞ ಡೆಮೇಟ್ರಿಯಸ್ ಎಂಬಾತ ಹತ್ತು ಪುಸ್ತಕಗಳಲ್ಲಿ ಭಾಷಣಕಾರರಿಗಾಗಿ ಸಂಗ್ರಹಿಸಿ ಇರಿಸಿದ್ದು ಅಧಿಕೃತವಾಗಿ ದೊರೆತ ಪ್ರಥಮ ಮೂಲಗಳಾಗಿವೆ. ಅರಿಸ್ಟೋಟಲ್ ನ ಅನುಯಾಯಿಯಾಗಿದ್ದ ಅವನು ಹಿಂದಿನ ಗ್ರೀಕ್ ಲೇಖಕರು ಪ್ರತ್ಯೇಕವಾಗಿ ದೃಷ್ಟಾಂತಗಳನ್ನಾಗಿ ಬಳಸಿದ ಎಲ್ಲ ನೀತಿ ಕಥೆಗಳನ್ನೂ ಪಟ್ಟಿ ಮಾಡಿ ಗದ್ಯ ರೂಪ ಕೊಟ್ಟನು. ಮುಂದಿನ ದಿನಗಳಲ್ಲಿ ಅಲಂಕಾರಿಕ ಭಾಷಣಕಾರರು ಮತ್ತು ತತ್ವಜ್ಞಾನಿಗಳು ಈಸೋಪನ ನೀತಿ ಕತೆಗಳನ್ನು ತಮ್ಮ ಶಿಷ್ಯರಿಗೆ ಬೋಧಿಸುವಾಗ ತಮ್ಮದೇ ಆದ ನವೀನ ಆವೃತ್ತಿಗಳನ್ನು ರಚಿಸುವುದರ ಮೂಲಕ ವ್ಯಾಕರಣದ ಶೈಲಿ ಹಾಗೂ ನಿಯಮಗಳನ್ನು ಪ್ರಯೋಗಿಸಿ ಈ ಕಥೆಗಳನ್ನು ಉತ್ತಮಗೊಳಿಸಿದರು.

ಈಸೋಪನ ಒಂದು ನೀತಿ ಕತೆ

ಒಂದೆಡೆ ಜುಳು ಜುಳು ಹರಿಯುತ್ತಿದ್ದ ತೊರೆಯಲ್ಲಿ ತೋಳವೊಂದು ನೀರು ಕುಡಿಯುತ್ತ ಅತ್ತ ಕೆಳಗೆ ಕುರಿಮರಿಯೊಂದು ನೀರು ಕುಡಿಯುವುದನ್ನು ಕಂಡು "ಏ, ಮರಿ ನೀನು ನನ್ನ ಕುಡಿಯುವ ನೀರು ಗಲೀಜು ಮಾಡುತ್ತಿರುವೆ" ಎಂದು ಗದರಿತು. ಕುರಿಮರಿ "ದೊರೆ, ನಿನ್ನ ಕಡೆಯಿಂದ ನೀರು ಇತ್ತ ಬರುತ್ತಿದೆ, ನಾನ್ಹೇಗೆ ಗಲೀಜು ನೀರು ನಿನ್ನೆಡೆಗೆ ಕಳಿಸಲು ಸಾಧ್ಯ" ಎಂದು ಉತ್ತರಿಸಿತು. ಆಗ ತೋಳ ತನ್ನ ನಿಲುವು ಬದಲಿಸಿ "ಹೋದ ವರ್ಷ ನನ್ನನ್ನು ಕೆಟ್ಟವ ಎಂದೇಕೆ ಬೈದೆ?" ಅಂದಿತು. ಕುರಿಮರಿ "ನನಗೀಗ ಬರೀ ಆರು ತಿಂಗಳು, ಕಳೆದ ವರ್ಷ ಅದೇಗೆ ಬೈಯಲಿ" ಎಂದು ಮರು ನುಡಿಯಿತು ತೋಳ "ಹಾಗಾದರೆ ನೀನಲ್ಲ, ನಿಮ್ಮ ಅಪ್ಪ ಬೈದದ್ದು" ಎಂದು ಹೇಳಿ ಕುರಿಮರಿಯನ್ನು ತಿಂದು ಹಾಕಿತು. ದಾಳಿಗೊಳಗಾದ ಕುರಿ ಮರಿ "ಕೆಟ್ಟವರಿಗೆ ಇನ್ನೊಬ್ಬರನ್ನು ಹಾಳುಗೆಡುವಲು ಕಾರಣವೇ ಬೇಕಿಲ್ಲ" ಎಂದು ಉದ್ಗರಿಸಿತು.

೦೯.೧೦.೨೦೨೧ ರ ನೋಡಿಯೋ ಸಾಹಿತ್ಯ ದಾಸೋಹ

ಪ್ರಸ್ತುತಿಗಳ ಬಗ್ಗೆ ಅಧ್ಯಕ್ಷರ ಅನಿಸಿಕೆಗಳು

– ಶೀಲಾ ಭಂಡಾರ್ಕರ್

ಎಲ್ಲರಿಗೂ ನನ್ನ ಸಪ್ರೇಮ ನಮಸ್ಕಾರಗಳು.

ಇಂದಿನ ಅಧ್ಯಕ್ಷತೆಯನ್ನು ನನಗೆ ವಹಿಸಿದಕ್ಕಾಗಿ ಸಂಚಾಲಕ ಮಂಡಳಿಯವರಿಗೆ ಅನೇಕ ಧನ್ಯವಾದಗಳು. ಇಂದು ನಮ್ಮ ವೇದಿಕೆಯ ೧೯೫ ನೇ ಸಾಹಿತ್ಯ ದಾಸೋಹ. ಇನ್ನೇನು ದ್ವಿಶತಕದತ್ತ ಧಾಪುಗಾಲು ಇಡುತ್ತಿದೆ. ನುರಿತ ಬರಹಗಾರರು, ತುಂಬಾ ದೊಡ್ಡ ಲೇಖಕರು, ನಿಪುಣ ಕವಿ ಕವಯಿತ್ರಿಯರಿರುವ ಈ ಗುಂಪಿನ ದಾಸೋಹದ ಅಧ್ಯಕ್ಷತೆ ಎನ್ನುವ ಅತೀ ದೊಡ್ಡ ಜವಾಬ್ದಾರಿಯನ್ನು ನನಗೆ ವಹಿಸಿದ್ದಾರೆ. ಆದರೆ ಅದನ್ನು ನಿಭಾಯಿಸುವ ಯೋಗ್ಯತೆ ನನಗಿದೆಯೇ ಎಂದು ನನ್ನನ್ನೇ ನಾನು ಪ್ರಶ್ನಿಸಿಕೊಳ್ಳುತಿದ್ದೇನೆ. ಈ ವೇದಿಕೆಯಿಂದ ಸಿಗುತ್ತಿರುವ ಇಂತಹ ಪ್ರೋತ್ಸಾಹ, ಬೆಂಬಲಗಳು ಮಾತ್ರ ನಿಜಕ್ಕೂ ಎಲ್ಲಿಯೂ ಸಿಗಲಾರವು.

ಇಲ್ಲಿರುವ ಎಲ್ಲರೂ ಅನುಭವದಲ್ಲಿ ನನಗಿಂತ ತುಂಬಾ ಮುಂದಿರುವವರು. ಇಂದು ಪ್ರಸ್ತುತಪಡಿಸಿದ ಎಲ್ಲಾ ಕೃತಿಗಳು ನನಗೆ ತುಂಬಾ ಇಷ್ಟವಾಗಿವೆ. ಅವುಗಳಲ್ಲಿ ನಾನು ಮೆಚ್ಚಿಕೊಂಡ ಕೆಲವು ಅಂಶಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಲು ಇಷ್ಟಪಡುತ್ತೇನೆ. ಈಗಾಗಲೇ ಸಮಯ ಬಹಳವಾಗಿರುವುದರಿಂದ ತುಂಬಾ ಮಾತನಾಡಿ ಇನ್ನಷ್ಟು ವೇಳೆ ತೆಗೆದುಕೊಳ್ಳದೆ ಸಂಕ್ಷಿಪ್ತವಾಗಿ ನನ್ನ ಅನಿಸಿಕೆಗಳನ್ನು ತಿಳಿಸುತ್ತೇನೆ. ಯಾರಿಗಾದರೂ ನಿರಾಸೆಯಾದರೆ ದಯವಿಟ್ಟು ಬೇಸರಿಸದೆ ನನ್ನ ತಿಳುವಳಿಕೆಯೇ ಇಷ್ಟು ಎಂದುಕೊಂಡು ನನ್ನನ್ನು ಕ್ಷಮಿಸಿ ಬಿಡಿ.

ಮೊದಲಿಗೆ

೧. ಶಾಂತಿ ವಾಸು ಅವರು ಬರೆದು ವಾಚಿಸಿದ ಕವಿತೆಯ ಶೀರ್ಷಿಕೆ “ಅದೊಂದಿಲ್ಲ”.

ಏನೇನೋ ಸಾಧನೆ ಮಾಡಿದರೂ ಏನೋ ಒಂದು ಇಲ್ಲ ಎನ್ನುವ ಕೊರಗು ಎಲ್ಲರಿಗೂ ಇದ್ದೇ ಇರುತ್ತೆ. ಎಷ್ಟು ಸಂಪಾದನೆ ಮಾಡಿದರೂ ಪ್ರಯೋಜನವಿಲ್ಲ ಎಂದು ತಿಳಿದು ಎಲ್ಲವನ್ನೂ ತ್ಯಾಗ ಮಾಡಿದರೂ ಅಲ್ಲಿಯೂ ಏನೋ ಒಂದು ಕುಂದು. ಕೊನೆಯಲ್ಲಿ ಏನೂ ಬೇಡ ನಿನ್ನ ಪಾದವೊಂದೇ ಎನಗೆ ಗತಿ ಎಂದು ದೇವರನ್ನು ಬೇಡಲು ಹೋದರೆ ಅಲ್ಲಿ ಅವಶ್ಯವಾಗಿ ಬೇಕಿರುವ ಭಕ್ತಿಯೇ ಇಲ್ಲ. ಒಟ್ಟಿನಲ್ಲಿ ಮನುಷ್ಯ ಸ್ವಭಾವವನ್ನು ಬಿಂಬಿಸುವ ಉತ್ತಮ ಕವಿತೆ. ಶಾಂತಿ ವಾಸು ಅವರಿಗೆ ಅಭಿನಂದನೆಗಳು.

ಮುಂದಿನದು..

೨. ಶ್ರೀಮತಿ ವಿಜಯಕುಮಾರಿಯವರು ಪ್ರಸ್ತುತ ಪಡಿಸಿದ “ಓಟ ಕಲಿಸಿದ ಪಾಠ”. ಗುರುತು ಪರಿಚಯವಿಲ್ಲದ ದೇಶದಲ್ಲಿ ತಾವು ಪಟ್ಟ ಪಾಡನ್ನು ರಸವತ್ತಾಗಿ ವಿವರಿಸಿದ್ದಾರೆ. ನಮ್ಮ ಊರುಗಳಲ್ಲಿ ನಮಗೆ ಬೇಕಾದಂತೆ ಇದ್ದು, ಸಿಟಿ ಬಸ್ಸಿಗಾಗಿ ಓಡಿ ಹತ್ತುವ ಅಭ್ಯಾಸ ಬಲದಂತೆ ಅಮೇರಿಕಾದಲ್ಲಿ ಐವತ್ತೊಂದನೇ ನಂಬರ್ ಬಸ್ಸಿಗಾಗಿ ಓಡಿ, ಆಮೇಲೆ ಎದುರಿಸಿದ ತಪಾಸಣೆ, ಆತಂಕ ಆ ದಿಗಿಲು. ನಾವೇ ಅನುಭವಿಸಿದೆವೇನೋ ಅನ್ನಿಸಿತು. ಯಾವುದಾದರೂ ಗುರುತಿನ ಚೀಟಿಯನ್ನು ಇಲ್ಲಿಯೂ ನಮ್ಮೊಂದಿಗೆ ಒಯ್ಯುವ ಅಭ್ಯಾಸ ಮಾಡಿಕೊಂಡರೆ ಎಷ್ಟೋ ಸಲ ಉಪಯೋಗಕ್ಕೆ ಬರುತ್ತದೆ. ಅಂತೂ ಪರಿಸ್ಥಿತಿ ಯಾವುದೇ

ಇರಲಿ ತಾಳ್ಮೆಯಿಂದ ಜಾಣ್ಮೆಯಿಂದ ಪರಿಹರಿಸಿ ಅದರಿಂದ ಏನಾದರೂ ಪಾಠ ಕಲಿತರೆ ಮುಂದೆ ನಮಗೇನೇ ಒಳ್ಳೆಯದು. ಅನುಭವ ಕಥನ ಚೆನ್ನಾಗಿತ್ತು. ಧನ್ಯವಾದಗಳು ವಿಜಯಕುಮಾರಿಯವರಿಗೆ.

೩. ಗಣಪತಿ ಹೆಗಡೆಯವರ ಪ್ರಸ್ತುತಿ "ಸಮಾಜ ಸೇವೆ ಹಾಗೂ ಭ್ರಷ್ಟಾಚಾರ".

ಭ್ರಷ್ಟ ಜನರ ನಡುವೆ ಇದ್ದರೂ ಭ್ರಷ್ಟರಾಗದೆ ಉಳಿದು, ಅವರೊಂದಿಗೆ ಜಾಣತನದಿಂದ ವ್ಯವಹರಿಸುವಂಥ ಕಲೆ ಕೆಲವೇ ಕೆಲವರಿಗೆ ಮಾತ್ರ ಸಿದ್ಧಿಸುತ್ತದೆ. ಹಾಗೆಯೇ ಸಮಾಜ ಸೇವೆಯ ಹೆಸರಿನಲ್ಲಿ ಏನೇನು ನಡೆಯುತ್ತದೆ, ಎಷ್ಟು ಬಗೆಯ ಸಮಾಜ ಸೇವೆಗಳಿವೆ. ಅದರಿಂದ ಯಾರು ಯಾರಿಗೆ ಹೇಗೆ ಹೇಗೆ ಲಾಭವಾಗುವುದು ಎಂದು ಗಜಾನನ ಹೆಗಡೆಯವರ ಮಾತುಗಳಲ್ಲಿ ಸ್ಪಷ್ಟವಾಗಿ ತಿಳಿಸಿಕೊಟ್ಟಿದ್ದಾರೆ ಗಣಪತಿ ಹೆಗಡೆಯವರು. ಸಮಾಜ ಸೇವೆಯ ಹೆಸರಿನಲ್ಲಿ ಸ್ವಸೇವೆ ಮಾಡಿಸಿಕೊಳ್ಳಲು ಶಾಲೆಯಾದರೂ ಸರಿ, ರಸ್ತೆಯಾದರೂ ಸರಿ. ಎನ್ನುವ ಜನರ ನಡುವೆ ಇದ್ದು ಅವರಂತಾಗದೆ ಬದುಕುವುದೇ ಒಂದು ಸವಾಲು. ಭ್ರಷ್ಟಾಚಾರಕ್ಕೆ ಕನ್ನಡಿ ಹಿಡಿದು ತೋರಿಸಿದ ಗಣಪತಿ ಹೆಗಡೆಯವರಿಗೆ ವಂದನೆಗಳು.

೪. ಶ್ರೀಮತಿ ಗಿರಿಜಾ ರಾಜ್ ಅವರ "ಚೆಲುವಯ್ಯ ಚೆಲುವೋ" ಒಂದು ಚೆಲುವಾದ ಲೇಖನ.

ಬಯಲು ಸೀಮೆಯ ಆಡುಭಾಷೆಯ ಸಂಭಾಷಣೆಗಳು. ಸಂದರ್ಭೋಚಿತ ಗಾದೆಮಾತುಗಳು ಸುಂದರವಾದ ಹೂಮಾಲೆಯಂತೆ ಪೋಣಿಸಿದ್ದಾರೆ ಶ್ರೀಮತಿ ಗಿರಿಜಾ ರಾಜ್ ಅವರು. ಅಷ್ಟೇ ಸೊಗಸಾಗಿ ವಾಚಿಸಿ ಪ್ರಸ್ತುತ ಪಡಿಸಿದ್ದಾರೆ ಕೂಡ. ಗಾದೆಯಪ್ಪ ಚೆಲುವಯ್ಯನ ಬಾಯಿಯಿಂದ ಗಾದೆ ಮಾತುಗಳು ಅಣಿಮುತ್ತುಗಳಂತೆ ಉದುರುವುದನ್ನು ನಾವೇ ಎದುರಿಗೆ ಕೂತು ಕೇಳುತಿದ್ದೇವೇನೋ ಎಂಬಂತೆ ಭಾಸವಾಯ್ತು. ಇದೊಂದು ಸಂಗ್ರಹಯೋಗ್ಯ ಲೇಖನ. ಗಿರಿಜಾರಾಜ್ ಅವರಿಗೆ ಅಭಿನಂದನೆಗಳು.

೫. ಶ್ರೀಯುತ ಶಂಕರರಾವ್ ಅವರು ನುರಿತ ಕವಿಗಳು, ಕಿರು ತೆರೆಯ, ರಂಗಭೂಮಿಯ ನಟರು. ಜೀವನದಲ್ಲಿ ಸಾಕಷ್ಟು ಅನುಭವ ಹೊಂದಿದ ಹಿರಿಯರು.

ಪ್ರಸ್ತುತ "ಟಿಕ್ ಟಿಕ್" ಕವನದಲ್ಲಿ ಗಡಿಯಾರದ ಟಿಕ್ ಟಿಕ್ ಅನ್ನು ಹೃದಯದ ಬಡಿತಕ್ಕೆ ಹೋಲಿಸಿದ್ದಾರೆ. ಜೀವನದ ಸಂಧ್ಯಾಕಾಲದಲ್ಲಿ ನಮಗೆ ಹಿಂದಿನ ನೆನಪುಗಳು, ಸಿಹಿ ಕಹಿ ಪ್ರಸಂಗಗಳು, ಎದುರು ಹಾದು ಹೋಗುವಾಗ ಬದುಕನ್ನು ಪ್ರೀತಿಸುವ ನಮಗೆ ವರ್ತಮಾನ ಅನಿಶ್ಚಿತ ಅನಿಸುವುದು, ಸಂತೋಷವಾಗಿ ಕಳೆದು ಹೋದ ದಿನಗಳು ಮತ್ತೆ ಬರಬಾರದೇ ಎಂದು ಮನಸ್ಸು ಹಂಬಲಿಸುವುದು ಸಹಜ. ಆದರೆ ಕಾಲ ಯಾರಿಗೂ ಕಾಯುವುದಿಲ್ಲ, ಅದಕ್ಕೆ ಯಾರ ಹಂಗೂ ಇಲ್ಲ. ದಿನ; ರಾತ್ರಿ, ಋತುಮಾನಗಳು ಬರುತ್ತಲೇ ಇರುತ್ತವೆ ಯಾಂತ್ರಿಕವಾಗಿ. ಅನುಭವಿಗಳ ಅಮೃತದಂತ ನುಡಿಗಳು. ಶ್ರೀ ಶಂಕರ ರಾವ್ ಅವರಿಗೆ ಅಭಿನಂದನೆಗಳು.

೬. ಶ್ರೀಮತಿ ಶೀಲಾ ಅರಕಲಗೂಡು ಅವರು ಪ್ರಸ್ತುತಪಡಿಸಿದ "ಕೋಲು ಪುರಾಣ" ಎಂಬ ಹರಟೆಗೆ ಇತ್ತೀಚೆಗೆ ಶಾಂತಾ ಮೇಡಮ್ ನಮ್ಮ ವೇದಿಕೆಯಲ್ಲಿ ಬರೆದ 'ಮಡಿಕೋಲು ಮೀಮಾಂಸೆ'. ಇದು ಎಷ್ಟೊಂದು ಜನರನ್ನು ಎಷ್ಟೊಂದು ಬಗೆಯಲ್ಲಿ ಯೋಚಿಸುವಂತೆ ಮಾಡಿದೆ ನೋಡಿ. ಯಕಶ್ಚಿತ್ ಒಂದು ಕೋಲು ಅನ್ನುವ ಹಾಗೇ ಇಲ್ಲ. ಎಷ್ಟೆಲ್ಲಾ ಅವತಾರಗಳನ್ನು ತಾಳಿ ಏನೇಲ್ಲಾ ಕಾರುಬಾರು ಮಾಡುತಿದ್ದರೂ, ಶೀಲಾ ಮೇಡಮ್ ಹೇಳುವ ಹಾಗೆ ಕೋಲಿಗೂ ಸನ್ಮಾನ ಆಗಲೇ ಬೇಕು. ಮಡಿ ಬಿಟ್ಟು ಕೋಲನ್ನು ಮಾತ್ರ ಹಿಡಿದು ನಮ್ಮನ್ನು ವಿಶ್ವಮಾನವ ಪಥಕ್ಕೆ ಕೊಂಡೊಯ್ದಿದ್ದಾರೆ.

ಕೋಲಿನ ಹಲವು ರೂಪಗಳನ್ನು ಪರಿಚಯಿಸಿದ ಕೋಲು ಪುರಾಣ ಬರೆದ ಶೀಲಾ ಅವರನ್ನು ಕೈಗೊಂದು ಕೋಲು ಕೊಟ್ಟು ಸನ್ಮಾನಿಸೋಣವೇ? ನೀವೇನೂ ಮುದುಕರಾಗಿಲ್ಲ. ಆಗುವುದೂ ಇಲ್ಲ. ಹಾಗೇನಾದರೂ ಅನಿಸಿದರೆ ಶೀಲಾ ಕಿ ಜವಾನಿ ಹಾಡು ಕೇಳಿ ಆಯ್ತಾ.

ನಿಮ್ಮ ಮಾತಿನ ಮೃದುತ್ವಕ್ಕೆ ನಿಮ್ಮನ್ನು ಬೈಯಲು ಯಾರಿಗಾದರೂ ಮನಸ್ಸು ಬಂದೀತು? ವೇದಿಕೆಯವರು ಇನ್ನಷ್ಟು ಹೊತ್ತು ಕೊಟ್ಟಿದ್ದರೂ ನಿಮ್ಮ ಮಾತುಗಳನ್ನು ಕೇಳಲು ಯಾರಿಗೂ ಬೇಸರವಿಲ್ಲ. ಕೋಲನ್ನೂ ಇಷ್ಟು ಮೃದುವಾಗಿ ಮಾತನಾಡಿಸುವ ನಿಮ್ಮಿಂದ ಲೇಖನ ಬರೆಸಿಕೊಂಡ ಕೋಲಿನದೂ ಸೌಭಾಗ್ಯ. ಅಭಿನಂದನೆಗಳು ಶೀಲಾ ಮೇಡಮ್.

೭. ರವೀಂದ್ರನಾಥ ಬಿ. ಆರ್ ಅವರ ಲೇಖನ "ಎಲ್ಲವೂ ಬಾಡಿಗೆಗೆ".

ಮಕ್ಕಳಿಲ್ಲದವರು ಮಗುವನ್ನು ಪಡೆಯಲು ಪಡುವ ಪಾಡು ಪಟ್ಟವರಿಗೆ ಮಾತ್ರ ತಿಳಿದೀತು. ಹಾಗೆಯೇ ದುಡ್ಡಿನ ಅಗತ್ಯತೆ ಕೂಡ. ಇಂದಿನ ಯುಗದಲ್ಲಿ ಹಲವಾರು ಕಾರಣಗಳಿಗಾಗಿ ಈ ಬಾಡಿಗೆ ತಾಯ್ತನವನ್ನು ಆಶ್ರಯಿಸಿದವರಿದ್ದಾರೆ. ಇದರ ಬಗ್ಗೆ ಒಂದು ಉತ್ತಮ ಸಂಶೋಧನಾತ್ಮಕ ಲೇಖನವನ್ನು ಬಿ.ಆರ್. ರವೀಂದ್ರನಾಥ್ ಅವರು ಪ್ರಸ್ತುತ ಪಡಿಸಿದ್ದಾರೆ. ಜನಸಂಖ್ಯೆಯನ್ನು ಹೆಚ್ಚಿಸುವ ಬದಲು ಹುಟ್ಟಿರುವ ಎಷ್ಟೋ ಅನಾಥ ಮಕ್ಕಳಿಗೆ ತಂದೆ ತಾಯಿ ಸಿಗುವಂತಾದರೆ ಎಂಬ ಕಳಕಳಿಯೂ ಅವರಿಗಿದೆ.

ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಸಂಗ್ರಹಿಸಿ ಬರೆದಿದ್ದೀರಿ. ಚಿಂತನೆಗೆ ಗ್ರಾಸವಾಗುವ ಇಂತಹ ಅನೇಕ ಲೇಖನಗಳನ್ನು ನಿಮ್ಮಿಂದ ಆಶಿಸುತ್ತೇವೆ ಸರ್. ಧನ್ಯವಾದಗಳು.

೮. ಕವಿತೆ – "ವಾಟ್ಸಾಪ್ ಚರಿತೆ". ವಾಟ್ಸಾಪ್ ಮುಖಗಳ ಬಗ್ಗೆ ಬಹಳ ಸುಂದರವಾದ ಕವಿತೆಯನ್ನು ಕಟ್ಟಿದ್ದಾರೆ ಶ್ರೀ ರಾಜೇಂದ್ರ ಪ್ರಸಾದ್ ಅವರು.

ಸಾಮಾನ್ಯವಾಗಿ ಏನೋ ಒಂದು ವಿಷಯ ನಮ್ಮವರೆಗೆ ಬಂತು ಅಂದರೆ ಅದನ್ನು ಒಬ್ಬಿಬ್ಬರಿಗಾದರೂ ತಲುಪಿಸುವವರೆಗೆ ಸಮಾಧಾನ ಮನುಷ್ಯರಿಗೆ ಇರುವುದಿಲ್ಲ. ಈ ವಾಟ್ಸಾಪ್ ಸಂದೇಶಗಳನ್ನು ಬಂದ ಕೂಡಲೇ ಇನ್ನೊಬ್ಬರಿಗೆ ದಾಟಿಸದೇ ಇಟ್ಟರೆ ಏನೋ ನಷ್ಟವಾಗುತ್ತಿದೆಯೇನೋ ಎಂಬಂತೆ ಆಡುವವರಿದ್ದಾರೆ. ಜೊತೆಗೆ ಈ ತರಹೇವಾರಿ ಮುಖಗಳು, ಕೈ ಕಾಲು ಸನ್ನೆಗಳು ಎಷ್ಟೋ ಮಾತುಗಳನ್ನಾಡುವುದನ್ನು ಉಳಿಸಿ ಹೇಳಬೇಕಾದುದನ್ನು ತಿಳಿಸುತ್ತವೆ. ಹಾಗೆಂದು ಕೊಂಡಿದ್ದೇವೆ ನಾವು. ವಾಟ್ಸಾಪ್ ಸಂದೇಶಗಳು, ಮುಂದೊತ್ತುಗಳ ಆಚೆಗೂ ಹೊರಗೊಂದು ಸುಂದರ ಪ್ರಪಂಚವಿದೆ. ಅದನ್ನು ಆನಂದಿಸೋಣ ಎಂದು ಈ ಕವಿತೆಯ ಮೂಲಕ ಸುಂದರ ಸಂದೇಶವೊಂದನ್ನು ಸಾರಿದ್ದಾರೆ. ಕವಿ ಶ್ರೀ ರಾಜೇಂದ್ರ ಪ್ರಸಾದ್ ಅವರಿಗೆ ಅಭಿನಂದನೆಗಳು.

೯. "ಈಸೋಪನ ನೀತಿ ಕಥೆಗಳು" ಪರಿಚಯ.

ಪ್ರತಿಯೊಂದು ವಿಷಯದಲ್ಲೂ ಅಗಾಧ ಜ್ಞಾನ ಹೊಂದಿದ್ದರೂ ಮಗುವಿಂತಹ ಸರಳ ವ್ಯಕ್ತಿತ್ವದ ಶ್ರೀ ವಿಠಲ ಇಜೇರಿಯವರು ಕಳೆದ ಕೆಲವು ದಾಸೋಹಗಳಲ್ಲಿ ಕನ್ನಡ ಸಾಹಿತ್ಯದ ಕಥಾಲೇಖನದ ವಿವಿಧ ಪ್ರಕಾರಗಳ ಬಗ್ಗೆ ಮಾಹಿತಿ ಹಂಚಿಕೊಂಡಿದ್ದಾರೆ. ಇಂದು ತುಂಬಾ ಪುರಾತನ ಹಾಗೂ ಪ್ರಚಲಿತ ಈಸೋಪನ ನೀತಿ ಕಥೆಗಳ ವಿವರವಾದ ಚಿತ್ರಣ ನೀಡಿದ್ದಾರೆ. ಈಸೋಪನ ಕತೆಗಳಲ್ಲಿ ಮುಖ್ಯವಾಗಿ ನಾವು ಕಾಣುವುದು ನೀತಿ ಬೋಧನೆ. ಅಂದರೆ ಮಾನವ ಜನಾಂಗ ಅಸ್ತಿತ್ವಕ್ಕೆ ಬಂದ ದಿನದಿಂದಲೂ ನೈತಿಕತೆಗೆ ಮಹತ್ವ ನೀಡಿತ್ತು, ಮಕ್ಕಳಿರುವಾಗ ಕಲಿತ ಪಾಠಗಳು, ಜೀವನ ಮೌಲ್ಯಗಳು ಜೀವನದುದ್ದಕ್ಕೂ ಜೊತೆಯಾಗಿದ್ದು

ಉತ್ತಮ ಸಮಾಜ ನಿರ್ಮಾಣಕ್ಕೆ ಕಾರಣವಾಗುತ್ತವೆ. ಶ್ರೀ ಇಜೇರಿ ಅವರು ೧೮೬೩ರ ಕೃತಿ 'ಸಮ್ ಥಾಟ್ಸ್ ಆನ್ ಲರ್ನಿಂಗ್' ಬಗ್ಗೆ ಪ್ರಸ್ತಾಪಿಸಿದ್ದಾರೆ, ಆ ಕೃತಿ ಇಂದಿಗೂ ಅಗತ್ಯವಾಗಿರುವುದನ್ನು ನಾವು ಕಾಣುತ್ತೇವೆ. ಆದುದರಿಂದ ಈಸೋಪನ ನೀತಿ ಕಥೆಗಳು ಇಂದು ಕೂಡ ನಮ್ಮ ಶಿಕ್ಷಣದ ಅವಶ್ಯಕ ಪಾಠಗಳಾಗಬೇಕಿದೆ. ಇಜೇರಿಯವರಿಗೆ ಧನ್ಯವಾದಗಳು.

೧೦. ಮುಂದಿನ ಪ್ರಸ್ತುತಿ ಶ್ರೀ ಎನ್.ವಿ.ರಘುರಾಂ ಅವರ "ಢಂ ಢಂ ಟ ಢಂ ಢಕ್ಕೆ."

ಈ ನವರಾತ್ರಿಯ ಸಂದರ್ಭದಲ್ಲಿ ಅರವತ್ತರ ದಶಕದಿಂದ ಅವರು ಕಂಡ ಹುಲಿ ವೇಷದ ವೈಭವವನ್ನು ಬಲು ಸೊಗಸಾಗಿ ವರ್ಣಿಸಿದ್ದಾರೆ ಶ್ರೀಯುತ ರಘುರಾಂ ಅವರು. ಕರಾವಳಿ ಮಲೆನಾಡುಗಳ ಜನರ ಬಾಲ್ಯದ ಸಿಹಿ ಕಹಿ ನೆನಪುಗಳಲ್ಲಿ ಈ ದಸರಾ ಹುಲಿ ವೇಷದ ನೆನಪು ಕೂಡಾ ಹಾಸು ಹೊಕ್ಕಿರುತ್ತದೆ ಎಂದರೆ ಸುಳ್ಳಲ್ಲ.

ನನ್ನಂತವರು ಹುಲಿವೇಷಕ್ಕೆ ಹೆದರೋದು, ಇನ್ನು ಕೆಲವರು ತಾವೇ ಹುಲಿಗಳಾದಂತೆ ದಸರಾ ಮುಗಿದ ಮೇಲೂ ಅದೇ ಗುಂಗಲ್ಲಿ ಕುಣಿಯುವುದು. ಬಾಲ್ಯಕಾಲದಲ್ಲಿ ಸರ್ವೇಸಾಮಾನ್ಯವಾಗಿ ಕಾಣಸಿಗುವ ಅಂಶ. ಹುಲಿವೇಷದ ಜೊತೆಗೆ ಮಲೆನಾಡಿನ ಜನಜೀವನ, ಉಬ್ಬುರೊಟ್ಟಿ, ಚಿತ್ರಾನ್ನ, ಪಾಯಸ, ಜೊತೆಗೆ ಪ್ರೀತಿ ವಿಶ್ವಾಸ ಹೆಚ್ಚಿಸುವ ಬನ್ನಿ ಹಂಚುವ ಕಾರ್ಯಕ್ರಮ, ಕ್ರಷ್‌ನ ಪಿಸುನುಡಿ ಎಲ್ಲವನ್ನೂ ಒಳಗೊಂಡ ಸುಂದರ ಲೇಖನ. ಅಭಿನಂದನೆಗಳು ರಘುರಾಂ ಸರ್.

೧೧. ನಾಗರತ್ನ ಚಂದ್ರಶೇಖರ್ ಅವರು ಎರಡು ಕವಿತೆಗಳನ್ನು ವಾಚಿಸಿದ್ದಾರೆ – "ಏಕಲವ್ಯ" ಮತ್ತು "ಪಕ್ಷಾತೀತರು".

ಪೇಪರ್ ಹಾಕುವ ಹುಡುಗನದೂ ಒಂದು ರೀತಿಯ ಪ್ರತಿಭೆಯೇ ಅನ್ನಬೇಕು. ಒಂದು ಕೈಯಲ್ಲಿ ಸೈಕಲ್ ಓಡಿಸುತ್ತಾ ಮತ್ತೊಂದು ಕೈಯಿಂದ ಅಂದಿನ ವೃತ್ತ ಪತ್ರಿಕೆಯನ್ನು ರಾಕೇಟ್ ನಂತೆ ಮಡಚಿ ಅವರವರ ಮನೆಗೆ ಅದೆಲ್ಲಿ ಬೀಳಬೇಕೋ ಅಲ್ಲೇ ಎಸೆಯುವ ಪ್ರಾವಿಣ್ಯತೆ ನಿಜಕ್ಕೂ ಯಾವ ಏಕಲವ್ಯನಿಗೂ ಕಮ್ಮಿ ಇಲ್ಲದ್ದು. ಆ ಹುಡುಗನಲ್ಲೂ ಇರುವ ಪುಟ್ಟ ಕನಸನ್ನು, ಅವನಲ್ಲೂ ಇರಬಹುದಾದ ಒಲಂಪಿಕ್ಸ್ ವೀರನನ್ನು ಗುರುತಿಸುವ ಒಳ್ಳೆಯ ಮನಸ್ಸು ಕವಯಿತ್ರಿ ಶ್ರೀಮತಿ ನಾಗರತ್ನ ಚಂದ್ರಶೇಖರ್ ಅವರದು. "ಏಕಲವ್ಯ" ಚಂದದ ಕವಿತೆ. ಪುಟ್ಟದಾದರೂ ತುಂಬಾ ಹೊತ್ತು ಮನಸ್ಸಿನಲ್ಲಿ ಉಳಿಯುವಂಥದ್ದು.

ಅವರು ಓದಿದ ಇನ್ನೊಂದು ಕವಿತೆ "ಪಕ್ಷಾತೀತರು" ಸಮಾಜದ ಮಂದಿಯ ಸ್ವಾರ್ಥ ಮನೋಭಾವನೆಗೆ ಕನ್ನಡಿ ಹಿಡಿದಿದೆ. ನೋಟಿಗಾಗಿ ಓಟು, ಸೀರೆ, ಮಿಕ್ಸಿ, ಪುಡಿಗಾಸು ಸಿಕ್ಕರೆ ಸಾಕು. ದುಡ್ಡಿನ ಮುಂದೆ ಯಾವ ಪಕ್ಷ ಸ್ವಾಮೀ.. ಪಕ್ಷಾತೀತರು ನಾವು. ಇದು ಕೂಡ ಒಂದು ಉತ್ತಮ ಕವಿತೆ. ಅಭಿನಂದನೆಗಳು ನಾಗರತ್ನ ಮೇಡಮ್.

೧೨. ನಂತರದ ಒಂದು ಅಮೋಘ ಪ್ರಸ್ತುತಿ "ಮಹಾದೇವ ದಂಡಕ".

ಶ್ರೀಮತಿ ರತ್ನಾಮೂರ್ತಿ ಅವರು ವಿದ್ವಾಂಸರು, ಲೇಖಕರು, ಶಿಕ್ಷಕಿ, ಸಮಸ್ಯೆ ಸಲಹೆಗಾರರು, ಮುಂಡಿಗೆ ಬರಹಗಾರರು, ವ್ಯಾಖ್ಯಾನಕಾರರು, ಸಮಾಜ ಸೇವಕರು, ಅವರ ಗೌರಮ್ಮನವರ ವಚನಗಳು ಬಹಳ ಅರ್ಥಪೂರ್ಣವಾಗಿವೆ. ಇಂದು ಶಿವ ಸ್ತುತಿಗಾಗಿ ದಂಡಕ ರಚನೆ ಮಾಡಿದ್ದಾರೆ. ಇದೊಂದು ಭಕ್ತಿಪೂರ್ಣ, ಸ್ವರ ಲಾಲಿತ್ಯದಿಂದ ಕೂಡಿದ, ಹೊಸಬಗೆಯ ರಚನೆಯಾಗಿದೆ. ಶಿವನ ಸ್ವರೂಪ,, ಅವನ ಮಹಿಮೆಗಳನ್ನು ಬಹಳ ಸುಂದರವಾಗಿ ಪ್ರಸ್ತುತಪಡಿಸಿದ್ದಾರೆ.

ರತ್ನಾ ಮೇಡಮ್ ಅವರು ಸುಶ್ರಾವ್ಯವಾಗಿ, ಸರಾಗವಾಗಿ ಹಾಡಿ ಪ್ರಸ್ತುತ ಪಡಿಸಿದ ಪರಿ ಅದ್ಭುತ. ಇದೊಂದು ರಮ್ಯವಾದ ರಚನೆ. ಅಭಿನಂದನೆಗಳು ಮೇಡಮ್.

೧೩. ಜಿ.ವಿ. ಅರುಣ ಅವರ ನವರಾತ್ರಿಯ ನಗೆ ಸಿಂಚನ "ಗಂಡಸಿಗ್ಯಾಕೆ ಗೌರಿ ದುಃಖ?"

ಅದ್ಯಾವ ಅರ್ಥದಲ್ಲಿ ಈ ಗಾದೆ ಮಾಡಿದರೋ? ಯಾರ ಬಾಯಿಯಿಂದ ಮೊದಲಿಗೆ ಉದುರಿದ ಅಣಿಮುತ್ತೋ ಇದು? ದುಃಖ ವಿಚಾರಿಸಲು ಹೋಗಿ ಆಮೇಲೆ ಆ ಮಹಾನುಭಾವರಿಗೇನೇನು ತೊಂದರೆಯಾಯ್ತೋ ಯಾರಿಗ್ಗೊತ್ತು? ಪಾಪ!

ಹೆಣ್ಣಿನ ದುಃಖ ಏನೇ ಇದ್ದರೂ ಅದನ್ನು ಗುರುತಿಸಿ ಒಂದು ಸೀರೆ ಕೊಡಿಸಿದರೆ, ಅದೂ ಕೂಡಾ ಒಂಥರಾ ಪಿಂಕ್ ಸೀರೆ ಕೊಡಿಸಿದರೆ, ಅರ್ಧ ದುಃಖ ಅಲ್ಲೇ ಮರೆತು ಹೋಗುತ್ತದೆ ಅವಳಿಗೆ. ಯಾಕೆ ದುಃಖ ಎಂದೇನಾದರೂ ಕೇಳಲು ಹೋದರೆ ಮುಗಿಯಿತು. ಆ ಹೊತ್ತಿನ ದುಃಖದ ಜೊತೆಗೆ ಯಾವ ಯಾವುದೋ ಜನ್ಮದ ದುಃಖಗಳೂ ನೆನಪಾಗುವ ಸಾಧ್ಯತೆಗಳಿದ್ದು.. ಆ ದುಃಖ ಕೇಳಿ ಪ್ಯಾಂಟಿನ ಹಿಂಬದಿ ಜೇಬಿನಲ್ಲಿರುವ ಪರ್ಸ್ ಪಾಪ ಗೊಳೋ ಎಂದು ಅತ್ತೀತು. ಇಂಥ ಒಳ್ಳೆಯ ನಗೆಸಿಂಚನವನ್ನು ಇಂದು ಸಿಂಪಡಿಸಿದಕ್ಕೆ ಶ್ರೀ ಜಿ.ವಿ.ಅರುಣ ಅವರಿಗೆ ಅಭಿನಂದನೆಗಳು. ನಿಮ್ಮ ಯಜಮಾನಿಗೂ ಅಭಿನಂದನೆಗಳನ್ನು ತಿಳಿಸಿ ಸರ್ ದಯವಿಟ್ಟು.

೧೪. ರಾಧಿಕಾ ವಿ ಗುಜ್ಜರ್ ಅವರು ಪ್ರಸ್ತುತಪಡಿಸಿದ "ಸತ್ಯಂ ಸುಂದರಂ ಮಿತ್ರತ್ವಂ". ರಾಧಿಕಾ ಗುಜ್ಜರ್ ಅವರ ಸೌಮ್ಯ ಸರಳ ವ್ಯಕ್ತಿತ್ವ ನನಗೆ ಯಾವಾಗಲೂ ಮೆಚ್ಚುಗೆ.

ಮನುಷ್ಯ ಎಷ್ಟೇ ಎತ್ತರಕ್ಕೇರಿದರೂ, ಏನೇ ಸಾಧನೆ ಮಾಡಿದರೂ ಖುಷಿಯಾಗಿ ಆನಂದಿಸೋದು ಬಾಲ್ಯಕಾಲವನ್ನು ಮಾತ್ರ. ಅದರಲ್ಲೂ ಬಾಲ್ಯದ ಸ್ನೇಹ. ಆಗ ನಮಗೆ ಅದರ ಬೆಲೆ ತಿಳಿಯದಿದ್ದರೂ ದೊಡ್ಡವರಾದಂತೆ ಒಳ್ಳೆಯ ಸ್ನೇಹವನ್ನು ಪಡೆಯುವ ಮತ್ತು ಅದನ್ನು ಕಾಪಾಡಿಕೊಂಡು ಮುಂದುವರಿಸುವ ಗುಣವನ್ನು ಅಳವಡಿಸಿಕೊಂಡರೆ ಜೀವನ ಸಾರ್ಥಕವಾದೀತು. ಸ್ನೇಹಿತರ ಕಟ್ಟೆಯಲೊಂದು ಅರೆ ಗಳಿಗೆ ಕೂತು ಬಾಲ್ಯದ ದಿನಗಳನ್ನು ನೆನಪಿಸಿಕೊಂಡು ಮುದಪಡುವುದಕ್ಕಿಂತ ದೊಡ್ಡ ಸಂಭ್ರಮ ಇನ್ನೊಂದಿಲ್ಲ. ಬಾಲ್ಯ ಕಾಲದ ಸ್ನೇಹದ ಮಹತ್ವವನ್ನು ನೆನಪಿಸುವ ಲೇಖನ ನನಗೆ ಬಹಳ ಖುಷಿ ಕೊಟ್ಟಿತು. ಅಭಿನಂದನೆಗಳು ರಾಧಿಕಾ ಮೇಡಮ್.

೧೫. ಶ್ರೀ ಜಿ.ಬಿ. ಕೋಟೆ ಅನಂತ್ ಅವರ ಬರಹ "ವಂಶೋದ್ಧಾರಕ".

ಒಂದು ಪಕ್ಷಿ ಮತ್ತು ಅದಕ್ಕೆ ಆಶ್ರಯ ಕೊಟ್ಟ ಮರದ ಸಂಭಾಷಣೆಗಳು, ಸರಸ, ವ್ಯಂಗ್ಯ, ಸಿಟ್ಟು, ಸೆಡವುಗಳು. ಪಕ್ಷಿಗಳಿಗೆ ಮರಗಳ ಮೇಲೆ ಇರುವ ಅಧಿಕಾರಕ್ಕೆ ಕಾರಣ ಏನು? ತಾನು ತಿಂದ ಹಣ್ಣಿನ ಬೀಜವನ್ನು ಹಿಕ್ಕೆಯ ಮೂಲಕ ಇನ್ನೊಂದು ಜಾಗದಲ್ಲಿ ಆ ಮರದ ವಂಶವನ್ನು ವಿಸ್ತರಿಸುವ ಕಾರ್ಯ ನಿರ್ವಹಿಸುವ ಪಕ್ಷಿಯನ್ನು ಮರವು ತನ್ನ ವಂಶೋದ್ಧಾರಕ ಎಂದು ಒಪ್ಪಿಕೊಂಡಿರುವುದು ಸಂತೋಷದ ಸಂಗತಿ. ಒಂದು ಒಳ್ಳೆಯ ಸಂದೇಶವನ್ನು ಸ್ವಾರಸ್ಯಕರವಾಗಿ ಬರೆದು ವಾಚಿಸಿದ ಜೆ.ಬಿ.ಕೋಟೆ ಅನಂತ್ ಅವರಿಗೆ ಧನ್ಯವಾದಗಳು.

೧೬. ಶ್ರೀಮತಿ ಜ.ವಿ. ನಿರ್ಮಲ ಅವರ "ಒನಕೆ ಭಾಗ್ಯ".

ನಮ್ಮ ನಿರ್ಮಲಮ್ಮ ಇವತ್ತು ಓಬವ್ವ ಆಗಿದ್ದಾರೆ. ಒನಕೆಯನ್ನು ಅದ್ಯಾವ ಪರಿ ನೆನಪಿಸಿಕೊಂಡಿದ್ದಾರೆಂದರೆ ಒನಕೆಗೆ ಅದೆಷ್ಟು ಆಕಳಿಕೆಗಳು ಬಂದವೋ! ನಿಜವಾಗಲೂ ಇಂಥದ್ದೊಂದು ಸುಂದರ, ನಕ್ಕು ನಗಿಸಿದ ಲೇಖನದಲ್ಲಿ ಮೆರೆದ ಒನಕೆಯದು ಭಾಗ್ಯವೇ ಸರಿ.

ಮೊನ್ನೆ ಶಾಂತಾ ಮೇಡಂ 'ಮಡಿಕೋಲಿಗೊಂದು ಮೀಮಾಂಸೆ' ಬರೆದು ಮಡಿಕೋಲನ್ನು ಮಡಿ ಮಾಡಿದಂತೆ ಇಂದು ನಿರ್ಮಲಾ ಅವರು ಒನಕೆಯ ಹಲವು ಹತ್ತು ಅವತಾರಗಳನ್ನು, ಉಪಯೋಗಗಳನ್ನು ತಿಳಿಸಿ ಈಗ ಅದಕ್ಕೆ ಅಮೇರಿಕಾ ಭಾಗ್ಯವನ್ನೂ ಕರುಣಿಸಲಿದ್ದಾರೆ. ಒನಕೆಯ ಅದೃಷ್ಟಕ್ಕೆ ಕರುಬುವಂತಾಗಿದೆ. ವಾಸ್ತುತಜ್ಞರಿಗೂ, ವಿಜ್ಞಾನಿಗಳಿಗೂ ಸವಾಲು ಎಸೆಯುವಂತಹ ಒಂದು ಉತ್ತಮ ಹಾಸ್ಯಭರಿತ ಲೇಖನ. ಅಭಿನಂದನೆಗಳು ನಿರ್ಮಲಾ ಮೇಡಮ್.

೧೭. ಶ್ರೀ ಬೆಂ.ಶ್ರೀ. ರವೀಂದ್ರ ಅವರ ಕವನ "ಬೆಳ್ಳಕ್ಕಿ ಬಲಿ".

ಪಕ್ಷಿಧಾಮವೊಂದರಲ್ಲಿ ಕಿಡಿಗೇಡಿಗಳ ಕುಕೃತ್ಯದಿಂದ ವಲಸೆ ಪಕ್ಷಿಗಳಿಗಾದ ಅನ್ಯಾಯ ಅನಾಹುತಗಳನ್ನು ಗಮನದಲ್ಲಿಟ್ಟುಕೊಂಡು ಬರೆದ ಸಾಮಾಜಿಕ ಕಳಕಳಿಯುಳ್ಳ ಕವಿತೆ "ಬೆಳ್ಳಕ್ಕಿ ಬಲಿ" ಬಹಳ ಪರಿಣಾಮಕಾರಿಯಾಗಿ ಮೂಡಿಬಂದಿದೆ.

ಸಾವಿರಾರು ಮೈಲು ದೂರದಿಂದ ಸೈಬೇರಿಯನ್ ಬಿಳಿ ಕೊಕ್ಕರೆಗಳು ಇಲ್ಲಿಗೆ ಸಂತಾನೋತ್ಪತ್ತಿಗಾಗಿ ಬರುತ್ತವೆ. ಇಲ್ಲಿಯ ವಾತಾವರಣ ಅವುಗಳಿಗೆ ಹೆಚ್ಚು ಸೂಕ್ತ,, ಇಲ್ಲಿಯ ನೀರಿನಲ್ಲಿಯ ಮೀನುಗಳು ಅವಕ್ಕೆ ಆಹಾರ. ಅದನ್ನು ತಿಳಿದುಕೊಳ್ಳುವಷ್ಟು ಜಾಣ್ಮೆ ಆ ಪಕ್ಷಿಗಳದು. ಮೂರ್ಖ ಮಾನವ ನಿರ್ದಯಿ ಅಲ್ಲಿ ಕೊಳೆಯಾಗುತ್ತೆ, ಪಕ್ಷಿಗಳ ಕೂಗು ಕರ್ಕಶ, ಎಂದು ವಾದ ಮುಂದಿರಿಸಿ ಮರದ ಕೊಂಬೆಗಳನ್ನು ಕತ್ತರಿಸಿ ಹಾಕಿದರು. ಪಕ್ಷಿಗಳು, ಕೊಕ್ಕರೆಗಳು ಪ್ರಾಣ ಬಿಟ್ಟವು. ಕೆರೆ ದಡ ಸ್ಮಶಾನ ಸದೃಶವಾಯಿತು. ಈ ವಿಷಯವನ್ನು ಕವಿಗಳು ಪರಿಣಾಮಕಾರಿಯಾಗಿ ತಿಳಿಸಲು, ಅಲ್ಲಿರುವ ಆಂಜನೇಯ ಬೇಸರ ಪಟ್ಟುಕೊಂಡು ಊರು ತೊರೆದು ಕಿಷ್ಕಿಂಧೆಗೆ ಹೋದ ಎಂದು ನುಡಿಯುತ್ತಾರೆ.

ಇಂಥಾ ಸಂಘರ್ಷದ ಕವಿತೆಗಳು ನಿಮ್ಮ ಲೇಖನಿಯಿಂದ ಇನ್ನಷ್ಟು ಹೊರಹೊಮ್ಮಲಿ. ಮುಂದಿನ ಪೀಳಿಗೆಗೆ ಒಳ್ಳೆಯ ಸಂದೇಶಗಳು ತಲುಪುವಂತಾಗಲಿ. ಬೆಂಶ್ರೀ ಯವರಿಗೆ ಧನ್ಯವಾದಗಳು.

೧೮. ನಮ್ಮ ವೇದಿಕೆಯ ತಂತ್ರಜ್ಞ ತ್ರಯರಲ್ಲಿ ಒಬ್ಬರಾದ ಶ್ರೀ ಗುರುರಾಜ ಶಾಸ್ತ್ರಿಯವರು ಪ್ರಸ್ತುತ ಪಡಿಸಿದ "ಸೈಕ್ಲಿಂಗ್ ಹವ್ಯಾಸ" ಎಂಥವರನ್ನೂ ಹೊಸ ಪ್ರಯೋಗ ಮಾಡಲು ಹುರಿದುಂಬಿಸುವಂತದ್ದು.

ಆರೋಗ್ಯ ಒಂದು ನಮ್ಮೊಂದಿಗಿದ್ದರೆ ಯಾವುದನ್ನೇ ಆಗಲಿ ಹೊಸದಾಗಿ ಕಲಿಯಲು ಅಥವಾ ಮತ್ತೆ ಶುರುಮಾಡಲು ವಯಸ್ಸು ಅಡ್ಡಿ ಬರುವುದಿಲ್ಲ. ಮಗನಿಗಿಂತ ಚಿಕ್ಕಪ್ಪನೇ ಚುರುಕಾಗಿ ಸೈಕಲ್ ಓಡಿಸುವಂತಾಗಿದ್ದು ಅಭಿನಂದನೀಯ. ಅವರ ಈ ಲೇಖನ ಓದಿದ, ಕೇಳಿದ ಎಲ್ಲರೂ ಸ್ಕೂಟರ್, ಬೈಕ್ ಬಿಟ್ಟು ಸೈಕಲ್ ಬಳಸುವಂತಾದರೆ ಪರಿಸರವೂ ಸ್ವಚ್ಛವಾದೀತು. ಬಹಳ ಉತ್ತಮ ಲೇಖನ ಶಾಸ್ತ್ರಿಗಳೇ. ಹಾಗೆಯೇ ಸೈಕಲ್ ಓಡಿಸುತ್ತಾ ಮೈಸೂರಿಗೆ ಬಂದು ಬಿಡಿ. ಮೊದಲಿಗೆ ಒಳ್ಳೆ ಫಿಲ್ಟರ್ ಕಾಫಿ ಕುಡಿದು, ಸೆಲ್ಫಿ ತಗೊಂಡು ಆಮೇಲೆ ಊಟ ಮುಗಿಸಿ ಜೀರ್ಣವಾದ ಮೇಲೆ ಬೆಂಗಳೂರಿಗೆ ಹೊರಟರಾಯಿತು. ನಮ್ಮ ಮನೆಯ ಲೊಕೇಶನ್ ಕಳಿಸುತ್ತೇನೆ ಸರ್.

೧೯. ಶ್ರೀಮತಿ ರೇಣುಕಾ ದೇಸಾಯಿಯವರು ಪ್ರಸ್ತುತಪಡಿಸಿದ "ನಮ್ಮೂರ ಮಗ".

ತಾಯ್ನಾಡು, ತಾಯಿನೆಲ, ನಮ್ಮೂರು ನಮ್ಮ ಜನ ಎನ್ನುವ ಪ್ರೀತಿ, ಆದರ, ಭಕ್ತಿಗಳಿರಬೇಕು ಮನುಷ್ಯನಿಗೆ. ನಿಸ್ವಾರ್ಥ ಭಾವದಿಂದ ಊರಿನ ಏಳಿಗೆಗಾಗಿ ಶ್ರಮಿಸಿದ ಕರ್ನಲ್ ಶಂಕರ್ ಅವರ ನಿವೃತ್ತಿ ನಂತರದ ಜೀವನವನ್ನು ಹಳ್ಳಿಯ ಜನರ ನಡುವೆ ಕಳೆಯುವ ನಿರ್ಧಾರ ಹೊತ್ತು ಬಂದವರಿಗೆ ಆ ಜನರು ನೀಡಿದ ಮಮತೆ, ಪ್ರೀತಿ, ಅನಾಥೆ ಲಕ್ಷ್ಮಿ ಪುಟ್ಟ ಸಾಕು

ಮಗಳು ತೋರುವ ವಾತ್ಸಲ್ಯ, ಕಾಲನ್ನು ಕಳೆದುಕೊಂಡರೂ ಊರವರು ನೀಡುವ ಬೆಂಬಲ ಆನೆ ಬಲ ತಂದು ಕೊಟ್ಟಿದೆ.

ಕತೆಯೋ ನಿಜವೋ ಸುಂದರವಾಗಿದೆ. ಲೇಖಕಿ ರೇಣುಕಾ ದೇಸಾಯಿಯವರಿಗೆ ಅಭಿನಂದನೆಗಳು.

೨೦. ಇಂದಿನ ಕೊನೆಯ ಪ್ರಸ್ತುತಿ. ಶ್ರವಣಕುಮಾರಿಯವರ ಕತೆ "ನೀ ಕರೆಯುವ ತನಕ".

ಸಣ್ಣ ಕತೆಗಳನ್ನು ಬರೆಯುವುದರಲ್ಲಿ ಶ್ರವಣಕುಮಾರಿ ಮೇಡಮ್ ಸಾಕಷ್ಟು ಪಳಗಿದ್ದಾರೆ. ಇವರ ಕತೆಗಳನ್ನು ಓದುವಾಗ ಇಂಥಾ ಘಟನೆಗಳು ನಮ್ಮ ನಡುವೆಯೂ ಎಷ್ಟೋ ನಡೆಯುತ್ತವಲ್ಲಾ! ನಮಗ್ಯಾಕೆ ಹೀಗೆ ಬರೆಯಲು ಹೊಳೆಯುವುದಿಲ್ಲ ಎಂದು ಅನಿಸಿಯೇ ಅನಿಸುತ್ತದೆ.

ಅನಾರೋಗ್ಯದಲ್ಲಿರುವ ಹಿರಿಯರ ತಳಮಳ ತಲ್ಲಣಗಳು, ಅದನ್ನು ಪರಿಹರಿಸಲು ಇರುವ ಮಾರ್ಗಗಳ ಕುರಿತಾದ ಉದ್ವೇಗ, ಭವಿಷ್ಯದ ಬಗ್ಗೆ ಚಿಂತೆ, ತಮ್ಮ ಬಗ್ಗೆ ಮಾತ್ರವಲ್ಲದೆ ಮುಂದಿನ ಪೀಳಿಗೆಯ ಬಗೆಗಿನ ಕಾಳಜಿ, ಬಾಳ ಸಂಗಾತಿಯನ್ನು, ಸ್ನೇಹಿತರನ್ನು ಕಳೆದುಕೊಂಡಾಗ ಉಂಟಾಗುವ ಮಾನಸಿಕ ಹಿಂಸೆಗಳನ್ನು ನೈಜ ರೀತಿಯಲ್ಲಿ ಚಿತ್ರಿಸಿದ್ದಾರೆ. ಕೊನೆಗೆ ಏನೋ ನಿರ್ಧಾರಕ್ಕೆ ಬಂದ ಮೇಲೆ ಮನಸ್ಸು ನಿಸೂರಾಗುವುದನ್ನು ಸುಂದರವಾಗಿ ಇಂದಿನ ಕತೆಯಲ್ಲಿ ಚಿತ್ರಿಸಿದ್ದೀರಿ ಮೇಡಮ್.

ನಿಮ್ಮ ಕತೆಗಳು ಬೇರೆ ಬೇರೆ ಭಾಷೆಗಳಿಗೆ ಅನುವಾದಗೊಳ್ಳಲಿ ಎಂದು ಹಾರೈಸುತ್ತೇನೆ. ಅಭಿನಂದನೆಗಳು.

ಇಲ್ಲಿಗೆ ಎಲ್ಲರ ಪ್ರಸ್ತುತಿಗಳು ಮುಗಿದಿವೆ.

ನನ್ನ ಅನಿಸಿಕೆಗಳು ನಿಮಗೆ ಖುಷಿಕೊಟ್ಟಿದೆ ಎಂದು ಭಾವಿಸುತ್ತೇನೆ. ಒಂದು ವೇಳೆ ಏನಾದರೂ ಲೋಪದೋಷಗಳಿದ್ದರೆ ದಯವಿಟ್ಟು ಮನ್ನಿಸಬೇಕು.

ಮತ್ತೊಮ್ಮೆ ವೇದಿಕೆಗೆ, ಸಂಚಾಲಕರಿಗೆ ವಂದಿಸುತ್ತಾ ನನ್ನ ಅನಂತಾನಂತ ಧನ್ಯವಾದಗಳನ್ನು ತಿಳಿಸುತ್ತೇನೆ.

*****